
ಸಂಪುಟ 24 ಸಂಚಿಕೆ 3
ಫೆಬ್ರವರಿ 3, 2002 ಬೆಲೆ ರೂ. 3.00

ಐಕ್ಯರಂಗ

ದುಡಿವ ಜನರ ಪ್ರಾಣಮಿತ್ರ



ದುಡಿಯುವ ವರ್ಗದ ವಿಮೋಚನೆಗೆ ಸಾಗಲಿ ಮಹಾಸಮರ

ಸಿಪಿಐ(ಎಂ) 17ನೇ ರಾಜ್ಯಸಮ್ಮೇಳನದತ್ತ

ಏನಿದು ? ಪತ್ರಿಕೆ ಬೆಲೆ ಇಳಿಕೆ ಯುದ್ಧ!

ನಮ್ಮ ಗಣತಂತ್ರ ಸಾಧನೆ-ಸವಾಲು

ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವಕುಂದಾಪುರ

ಧಾರವಾಹಿ: 88

ಬೇಜವಾಬ್ದಾರಿ ಸಂಘ ಪರಿವಾರ......

ಬಿಜೆಪಿ ಜ್ವಾಲಾಮುಖಿ ದೇಶದಲ್ಲಿ ವಿಷದ ಹೊಗೆಯನ್ನು ಕಾರುತ್ತಿತ್ತು. ರಾವ್ ಸರ್ಕಾರ ರಾಜಿ ಮಾರ್ಗವನ್ನು ಅನುಸರಿಸಿ ಪರಿಸ್ಥಿತಿಯನ್ನು ಇನ್ನಷ್ಟು ಕೆಡಿಸಿತು. ಜುಲೈ 18ರಂದು ರಾಷ್ಟ್ರೀಯಸಮಗ್ರತೆ ಮಂಡಳಿಯಸಭೆ ನಡೆಯಿತು.ಅಯೋಧ್ಯೆಯಲ್ಲಿನ ತನ್ನ ಉದ್ದೇಶಗಳೇನು ಎಂಬುದರ ಬಗ್ಗೆ ಬಿಜೆಪಿ ಯಾವುದೇ ಅನುಮಾನವನ್ನು ಉಳಿಸಲಿಲ್ಲ. ಆಗಲೇ ಎಲ್ಲರೂ ಎಚ್ಚರಗೊಳ್ಳಬೇಕಿತ್ತು. ಬಿಜೆಪಿ ಅನೇಕ ನಿವೃತ್ತ ಸೇನಾನಿಗಳ ನೆರವನ್ನು ಪಡೆಯುತ್ತಿತ್ತು.ಇದು ರಕ್ಷಣಾಪಡೆಗಳ ಏಕತೆಗೆ ಆತಂಕಕಾರಿಯಾಗಿತ್ತು. ದೊಡ್ಡ ಬಂಡವಾಳಶಾಹಿ ವರ್ಗಗಳು ಕೂಡಾ ಬಿಜೆಪಿಯ ಬೆಂಬಲಕ್ಕಿದ್ದವು. ಪಟ್ಟಣದ ಮಧ್ಯಮ ವರ್ಗಗಳ ಜನರ ಬೆಂಬಲವೂ ಅದಕ್ಕೆ ಸಿಗುತ್ತಿತ್ತು. ಉತ್ತರ ಪ್ರದೇಶ ಸರಕಾರ ಅಂತಿಮ ಬಲಾಬಲ ಪ್ರದರ್ಶನಕ್ಕೆ ಸಜ್ಜುಗೊಳ್ಳುತ್ತಿತ್ತು. ಏತನ್ಮಧ್ಯೆ, ಶಂಕರ ದಯಾಳ್ ಶರ್ಮ ಹೊಸ ರಾಷ್ಟ್ರಪತಿಯಾದರು. ಅವರ ಅಭ್ಯರ್ಥಿತನವನ್ನು ನಾವು ಬೆಂಬಲಿಸಿದೆವು.

1991 ಸೆಪ್ಟೆಂಬರ್ 10ರಂದು ನಮ್ಮ ಸಂಸತ್ ಸದಸ್ಯ ಜೈನಲ್ ಅಬೆದಿನ್ ಪೂಜಾಸ್ಥಳಗಳ (ವಿಶೇಷ ನಿಯಮಗಳು) ಮಸೂದೆಯನ್ನು ಮಂಡಿಸಿದರು. ಅದು ಕಾನೂನಾಗಿ ಪರಿವರ್ತನೆಗೊಂಡಿತು. ಆದರೆ ಉತ್ತರಪ್ರದೇಶದ ಬಿಜೆಪಿ ಸರಕಾರ ಮತ್ತು ವಿಎಚ್‌ಪಿ ತಮ್ಮ ಮಂದಿರ ನಿರ್ಮಾಣ ಯೋಜನೆಯನ್ನು ಕೈಬಿಡಲಿಲ್ಲ. ರಾಜ್ಯ ಸರಕಾರ ನ್ಯಾಯಾಲಯದ ಆದೇಶಗಳನ್ನು ಉಲ್ಲಂಘಿಸಿ ವಿವಾದಿತ ಸ್ಥಳದ ಒಂದು ಭಾಗವನ್ನು ವಶಪಡಿಸಿಕೊಳ್ಳುವ ಆದೇಶವನ್ನು ಹೊರಡಿಸಿತ್ತು. ಅಲ್ಲಿ ಮಂದಿರ ನಿರ್ಮಿಸಲು ವಿಎಚ್‌ಪಿಗೆ ನೆರವಾಗುವುದು ಅದರ ಉದ್ದೇಶವಾಗಿತ್ತು. ಯಥಾಸ್ಥಿತಿಯನ್ನು ಉಳಿಸಿಕೊಳ್ಳುವುದಕ್ಕೆ ತನ್ನ ಬೆಂಬಲವಿದೆ ಎಂದು ರಾಷ್ಟ್ರೀಯ ಸಮಗ್ರತೆ ಮಂಡಳಿ(ಎನ್‌ಐಸಿ) ಸಭೆಯಲ್ಲಿ ಬಿಜೆಪಿ ಹೇಳಿತ್ತು. ಆದರೆ ವಾಸ್ತವದಲ್ಲಿ ಅದರ ಆಟವೇ ಬೇರೆಯಿತ್ತು. ಭವಿಷ್ಯದಲ್ಲಿ ಭಾರಿ ಅಪಾಯಕಾದಿದೆ ಎಂದು ನಾನು ನರಸಿಂಹರಾವ್‌ಗೆ ಹೇಳಿದ್ದೆ. ಬಿಜೆಪಿ ಸುಳ್ಳು ಹೇಳುತ್ತಿದೆಯೆಂದು ತನಗೇನೂ ಅನಿಸುತ್ತಿಲ್ಲ ಎಂದು ರಾವ್ ಉತ್ತರಿಸಿದರು. ಅದು ಪರಮಾಶ್ಚರ್ಯದ ಸಂಗತಿಯಾಗಿತ್ತು. ಯಾಕೆಂದರೆ ಇಡೀ ದೇಶದ ಜನರು ಆ ಹೊತ್ತಿಗೆ ಬಿಜೆಪಿಯ ಕುಟಿಲ ಆಟಾಟೋಪಗಳನ್ನು ಕಂಡಿದ್ದರು. ಅಪಾಯದ ಬಗ್ಗೆ ಎಚ್ಚರಿಕೆ ಇದ್ದ ಸಿಬಿಐ ವರದಿಯನ್ನಾದರೂ ರಾವ್ ನೋಡಬಹುದಿತ್ತು.

ನಮ್ಮ ಪಕ್ಷದ ಮಹಾಧಿವೇಶನದಲ್ಲಿ ಹೇಳಿದ್ದು ನಿಜವಾಗತೊಡಗಿತ್ತು. ಕೆಲವು ಜನರು ಕೋಮುವಾದದ ವೈರಸ್‌ನಿಂದ ಬಳಲುತ್ತಿದ್ದರು. ವಿಎಚ್‌ಪಿ ಹಿಂದೆಂದಿಗಿಂತಲೂ ಹೆಚ್ಚು ಸಕ್ರಿಯವಾಗಿತ್ತು. 1992 ಅಕ್ಟೋಬರ್ 28-31 ರಂದು ನಮ್ಮ ಕೇಂದ್ರ ಸಮಿತಿ ಸಭೆ ನಡೆಯಿತು. ಅದೇ ವೇಳೆಗೆ ದೆಹಲಿಯಲ್ಲಿ ತಥಾಕಥಿತ 'ಧರ್ಮ ಸಂಸತ್' ಕೂಡಾ ನಡೆಯಿತು. ಡಿಸೆಂಬರ್ 6 ರಿಂದ ಮಂದಿರ ನಿರ್ಮಾಣ ಕಾರ್ಯವನ್ನು ನವೀಕರಿಸುವಂತೆ ಅದು ಕರೆ ಕೊಟ್ಟಿತು. ಅಂಥ ಕ್ರಮಗಳು ವಿನಾಶಕಾರಿ ಆಗಲಿವೆ ಎಂದು ಕೇಂದ್ರ ಸಮಿತಿ ಇನ್ನೊಮ್ಮೆ ಎಚ್ಚರಿಕೆ ನೀಡಿತು.

ಈ ಅಪಾಯದ ಬಗ್ಗೆ ಚರ್ಚಿಸಲು ಎನ್‌ಐಸಿ ಸಭೆ ನಡೆಸ ಬೆಕೆಂದು ಪಾಲಿಟ್‌ಬ್ಯೂರೋ ಒತ್ತಾಯಿಸಿತು. ಕೇಂದ್ರ ಸರ್ಕಾರ ನವೆಂಬರ್ 23ರಂದು ಸಭೆ ವ್ಯವಸ್ಥೆಗೊಳಿಸಿತು. ಎಡಪಕ್ಷಗಳು ಮತ್ತೆ ಸಭೆ ಸೇರಿದವು. ಕೇಂದ್ರ ಸರ್ಕಾರ ಇಡೀ ವಿವಾದಿತ ಸ್ಥಳವನ್ನು ತಕ್ಷಣವೇ ವಶಪಡಿಸಿಕೊಳ್ಳಬೇಕು ಹಾಗೂ ಸೂಕ್ತ ಭದ್ರತಾ ಕ್ರಮವನ್ನು ಕೈಗೊಳ್ಳಬೇಕು ಎಂದು ಸಭೆ ಒತ್ತಾಯಿಸಿತು. ನಾವು ಒಂದು ಒಗ್ಗಟ್ಟಿನ ನಿಲುವನ್ನು ತೆಗೆದುಕೊಂಡೆವು. ಕಾಂ.ಸುರ್ಜಿತ್ ಮಂಡಿಸಿದ್ದ ಒಂದು ನಿರ್ಣಯವನ್ನು ಎನ್‌ಐಸಿ ಸರ್ವಸಮ್ಮತಿಯಿಂದ ಅಂಗೀಕರಿಸಿತು. ಸಂವಿಧಾನದ ಉಲ್ಲಂಘನೆ ಆಗದಿರುವುದನ್ನು ಖಾತರಿಪಡಿಸಲು ಹಾಗೂ ಅಯೋಧ್ಯೆಯಲ್ಲಿ ಕಾನೂನು ಮುರಿದು ಬೀಳುವುದನ್ನು ತಡೆಯಲು ಸಾಧ್ಯವಾದ ಎಲ್ಲ ಕ್ರಮಗಳನ್ನು ಕೈಗೊಳ್ಳುವ ಅಧಿಕಾರವನ್ನು ಆ ನಿರ್ಣಯ ಪ್ರಧಾನಮಂತ್ರಿಗೆ ನೀಡಿತು. ರಾವ್ ಈ ಅವಕಾಶವನ್ನು ಪೂರ್ಣವಾಗಿ ಬಳಸಿಕೊಳ್ಳಬೇಕಿತ್ತು. ದೇಶದಲ್ಲಿ ಅದೇ ಮೊದಲ ಬಾರಿಗೆ ಪ್ರಧಾನಿಗೆ ಅಂಥ ಅಧಿಕಾರವನ್ನು ನೀಡಲಾಗಿತ್ತು. ಸಂಘ ಪರಿವಾರದ ವಿಷಮಯ ತಂತ್ರವನ್ನು ಟೀಕಿಸುವ ಒಂದೇ ಒಂದು ಮಾತನ್ನೂ ಹೇಳದೆ ರಾವ್ ಸುಮ್ಮನೆ ಬಾಯಿಮುಚ್ಚಿಕೊಂಡು ಯಾಕೆ ಕುಳಿತಿದ್ದರು ಎನ್ನುವುದನ್ನು ಅರ್ಥ ಮಾಡಿಕೊಳ್ಳಲು ನನಗೆ ಆಗಲೇ ಇಲ್ಲ. ಇಂಥ ನಿಷ್ಕ್ರಿಯತೆಯನ್ನು ವರ್ಣಿಸಲು ಶಬ್ದಗಳೇ ಇಲ್ಲ, ಅದಕ್ಕೆ ಕ್ಷಮೆಯೂ ಇರಲಿಲ್ಲ. ಕರಸೇವಕರು ಡಿಸೆಂಬರ್ ಮೂರರಂದು ಅಯೋಧ್ಯೆಗೆ ಬಂದು ಸೇರಲು ಶುರು ಮಾಡಿದರು. ಆದರೆ ರಾವ್ ಸರಕಾರ ಸುಮ್ಮನೆ ಕುಳಿತುಕೊಂಡಿತು.

ಆ ವೇಳೆಗೆ ಸರ್ವೋನ್ನತ ನ್ಯಾಯಾಲಯದಲ್ಲಿ ಒಂದು ನ್ಯಾಯಾಲಯ ನಿಂದನೆ ಮೊಕದ್ದಮೆ ಆರಂಭವಾಗಿತ್ತು. ವಿವಾದಿತ ಸ್ಥಳದಲ್ಲಿ ಯಾವುದೇ ಕಾಮಗಾರಿ ನಡೆಯಬಾರದು ಎಂದು ನ್ಯಾಯಾಲಯ ನವೆಂಬರ್ 28ರಂದು ಆದೇಶ ನೀಡಿತು. ಆ ಪ್ರದೇಶದಲ್ಲಿ ಯಾವುದೇ ಸಾಮಗ್ರಿಗಳನ್ನು ಸಂಗ್ರಹಿಸುವಂತೆಯೂ ಇರಲಿಲ್ಲ. ಕರ ಸೇವಕರು ಸಾಂಕೇತಿಕವಾಗಿ ಭಜನೆ ಹಾಗೂ ಕೀರ್ತನೆ ಹಾಡಬಹುದಿತ್ತು. ಅದಕ್ಕೆ ಮುನ್ನ, ಆ ಜಾಗದಲ್ಲಿ ಯಾವುದೇ ಕೆಲಸ ನಡೆಯಲು ತಾನು ಅವಕಾಶ ನೀಡುವುದಿಲ್ಲ ಎಂದು ಉತ್ತರಪ್ರದೇಶ ರಾಜ್ಯ ಸರಕಾರ ನ್ಯಾಯಾಲಯದ ಒಂದು ದಾಸ್ತಾವೇಜಿನಲ್ಲಿ ಆಶ್ವಾಸನೆ ನೀಡಿತ್ತು. ಸುಪ್ರೀಂಕೋರ್ಟ್ ಅದನ್ನು ಗಣನೆಗೆ ತೆಗೆದುಕೊಂಡಿತ್ತು. ಸೂಕ್ತ ಕ್ರಮಗಳನ್ನು ಕೈಗೊಳ್ಳುವಂತೆಯೂ ನ್ಯಾಯಾಲಯವು ಆಡಳಿತಕ್ಕೆ ಸೂಚಿಸಿತು. ಆದರೆ ಬಿಜೆಪಿ-ಆರ್‌ಎಸ್‌ಎಸ್-ವಿಎಚ್‌ಪಿ ಕಾನೂನು ಪ್ರಕಾರ ನಡೆಯುವ ಬದಲು ಇದನ್ನೊಂದು ಸವಾಲಾಗಿ ಸ್ವೀಕರಿಸಿತು.

ಹಿಂದಿನ ಸಂಚಿಕೆಯಲ್ಲಿ ಪಂಜಾಬ್ ಚುನಾವಣೆ. ನೀತಿ ನಿಯಮ ಗಾಳಿಗೆ ತೂರಿದ ಕಾಂಗ್ರೆಸ್ ಸಿಪಿಐ(ಎಂ) ನ 14ನೇ ಅಧಿವೇಶನ, ಪ್ರ.ಕಾರ್ಯದರ್ಶಿಯಾಗಿ ಸುರ್ಜಿತ್ ಆಯ್ಕೆ. ಎಂ.ಬಸವಪುನ್ನಯ್ಯ ನಿಧನ, ಈ ಬಗ್ಗೆ ಓದಿರುವಿರಿ. ಈ ಸಂಚಿಕೆಯಲ್ಲಿ ಸಂಘ ಪರಿವಾರಗಳ ಪಡೆಯಿಂದ ಬಾಬ್ರಿ ಮಸೀದಿ ನಾಶ, ಭುಗಿಲೆದ್ದ ಕೋಮುವಾದ, ಸಾವಿರಾರು ಮುಗ್ಧರ ಹತ್ಯೆ, ರಾವ್ ಸರ್ಕಾರದ ಬೇಜವಾಬ್ದಾರಿ ವರ್ತನೆ ಈ ಬಗ್ಗೆ ಓದಿರಿ

ಬಾಬರಿ ಮಸೀದಿ ನಾಶ


ಡಿಸೆಂಬರ್ 6 ರ ದುರಾದೃಷ್ಟಕರ ದಿನದ ತುಂಬಾ ಮೊದಲೇ ಆರ್‌ಎಸ್‌ಎಸ್ ಸಾವಿರಾರು ಬೆಂಬಲಿಗರನ್ನು ಅಯೋಧ್ಯೆಯಲ್ಲಿ ಜಮಾಯಿಸಿತು. ಆಡ್ವಾಣಿ ಮತ್ತು ಮುರಳಿ ಮನೋಹರ ಜೋಷಿ ಡಿಸೆಂಬರ್ ಒಂದರಂದು ಅನುಕ್ರಮವಾಗಿ ವಾರಾಣಾಸಿ ಮತ್ತು ಮಥುರಾದಿಂದ 'ರಥ'ಗಳಲ್ಲಿ ಹೊರಟರು. ತಮ್ಮ ಪಕ್ಷ ನ್ಯಾಯಾಲಯದ ಆದೇಶಗಳನ್ನು ಉಲ್ಲಂಘಿಸಲಿದೆ ಎಂಬುದನ್ನು ಆಡ್ವಾಣಿ ನವೆಂಬರ್ 30ರ ಸುದ್ದಿಗೋಷ್ಠಿಯಲ್ಲಿ ಸ್ಪಷ್ಟಪಡಿಸಿದರು. ಎಡಪಕ್ಷಗಳು ತಕ್ಷಣವೇ ಒಂದು ಸಭೆ ನಡೆಸಿದವು. ಕೇಂದ್ರ ಸರಕಾರ ಕೂಡಲೇ ಮಧ್ಯಪ್ರವೇಶ ಮಾಡಿ ಶಾಂತಿಯನ್ನು ರಕ್ಷಿಸಬೇಕೆಂದು ಮತ್ತೊಂದು ಮನವಿ ಮಾಡಿದೆವು.

ಡಿಸೆಂಬರ್ ಒಂದರಂದು ದೆಹಲಿಯಲ್ಲಿ ಪಾಲಿಟ್‌ಬ್ಯೂರೊ ಸಭೆ ಸೇರಿತು. ಡಿಸೆಂಬರ್ 3 ರಿಂದ 6 ರ ನಡುವೆ ದೇಶಾದ್ಯಂತ ಸಭೆ ರ್‍ಯಾಲಿಗಳನ್ನು ನಡೆಸಲಾಯಿತು. ಎಂಟು ಪ್ರತಿಪಕ್ಷಗಳ ಪ್ರತಿನಿಧಿಗಳು ಡಿಸೆಂಬರ್ ಐದರಂದು ಸರಕಾರವನ್ನು ಸಕ್ರಿಯಗೊಳಿಸಲು ರಾಷ್ಟ್ರೀಯ ರಂಗ ಮತ್ತು ಎಡಪಕ್ಷಗಳು ಡಿಸೆಂಬರ್ ಮೂರರಂದು ಕೊನೆ ಕ್ಷಣದ ಪ್ರಯತ್ನಗಳನ್ನು ನಡೆಸಿದವು. ಯಾವುದೇ ಅಹಿತಕರ ಘಟನೆ ನಡೆಯುವುದಿಲ್ಲ, ಆ ವಿಚಾರವಾಗಿ ಬಿಜೆಪಿ-ವಿಎಚ್‌ಪಿ ನಾಯಕತ್ವ ಆಶ್ವಾಸನೆ ನೀಡಿದೆ ಎಂದು ಪ್ರಧಾನಿ ಹೇಳಿದರು. ಆರ್‌ಎಸ್‌ಎಸ್ ಮುಖ್ಯಸ್ಥರನ್ನು ರಾವ್ ಡಿಸೆಂಬರ್ ಒಂದು ಮತ್ತು ಎರಡರಂದು ಭೇಟಿ ಮಾಡಿದರು. ಸಭೆಗಳಲ್ಲಿ ಭಾಗವಹಿಸಿದವರನ್ನು ಬಿಟ್ಟು ಬೇರೆ ಯಾರಿಗೂ ಈ ಸಭೆಗಳ ಅವಶ್ಯಕತೆಯೇನಿತ್ತು ಎನ್ನುವುದು ಗೊತ್ತಿಲ್ಲ. ರಾವ್ ಏನನ್ನೂ ಮಾಡುವುದಿಲ್ಲ, ಪರಿಸ್ಥಿತಿ ಹದಗೆಡುವುದನ್ನು ಮೂಕವಾಗಿ ನೋಡುತ್ತಿದ್ದಾರೆ ಎನ್ನುವುದು ಇದಾದ ನಂತರ ಸುಸ್ಪಷ್ಟವಾಯಿತು.

ಆ ರೀತಿಯಾಗಿ ದುರಂತ ಸಂಭವಿಸಲೇಬೇಕಿತ್ತು. ಡಿಸೆಂಬರ್ ಆರರಂದು ಆ ಬರ್ಬರ ಜನರು ಬಾಬರಿ ಮಸೀದಿಯನ್ನು ಧ್ವಂಸಗೊಳಿಸಿದರು. ಇಡೀ ಜಗತ್ತಿನ ಮುಂದೆ ದೇಶ ತಲೆತಗ್ಗಿಸಬೇಕಾಯಿತು.

ಅದೊಂದು ಭಯಾನಕ ಅನುಭವ. ದೇಶ ವಿಭಜನೆಯಾದಂದಿನಿಂದ ದೇಶದಲ್ಲಿ ಅಂಥ ಗಲಭೆಗಳು ನಡೆದಿರಲಿಲ್ಲ. ಮುಂಬಯಿಯೊಂದರಲ್ಲೇ ಸಾವಿರಾರು ಜನರು ಸತ್ತರು, ಉತ್ತರ ಪ್ರದೇಶ, ಮಧ್ಯಪ್ರದೇಶ, ಗುಜರಾತ್, ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ಎರಡು ತಿಂಗಳ ಕಾಲ ಬೆಂಕಿ ಬಿತ್ತು. ಅಲ್ಪಸಂಖ್ಯಾತರೇ ಆಕ್ರಮಣ-ಹತ್ಯೆಯ ಮುಖ್ಯ ಗುರಿಯಾಗಿದ್ದರು, ಕಲ್ಕತ್ತ ಕೂಡ ಉದ್ವಿಗ್ನವಾಗಿತ್ತು ಆದರೆ ನಮ್ಮ ಆಡಳಿತ ಅದನ್ನು ಎದುರಿಸಲು ಸಮರ್ಥವಾಗಿತ್ತು. ನಗರದಲ್ಲಿ ಮೂರು ದಿನ ಬಂದ್ ಆಚರಿಸಲಾಯಿತು. ಕರ್ಫ್ಯೂವನ್ನು ಕೂಡಾ ಹೇರಲಾಯಿತು.

ರಾವ್ ರಾಜಿನಾಮೆ ನೀಡಬೇಕೆಂದು ಡಿಸೆಂಬರ್ ಏಳರಂದು ಸಿಪಿಐ(ಎಂ) ಪಾಲಿಟ್‌ಬ್ಯೂರೋ ಒತ್ತಾಯಿಸಿತು. ಮುಂದಿನ ದಿನ ಜನತಾದಳವೂ ಆಗ್ರಹಿಸಿತ್ತು. ಬಿಜೆಪಿ ಮತ್ತು ಆರ್‌ಎಸ್‌ಎಸ್ ವಿರುದ್ಧ ನಮ್ಮ ಮುಖ್ಯ ಹೋರಾಟ ಎನ್ನುವುದು ರಾವ್ ರಾಜಿನಾಮೆಗೆ ಒತ್ತಾಯಿಸುವಾಗಲೇ ನಮಗೆ ಗೊತ್ತಿತ್ತು. ವಾಸ್ತವವಾಗಿ ವ್ಯಾಪಕ ಗಲಭೆಗಳು ನಡೆದಿದ್ದರಿಂದ ರಾಷ್ಟ್ರೀಯ ಏಕತೆಯುತ್ತ ಹೆಚ್ಚಿನ ಮಹತ್ವ ...ದರಿಂದ ರಾಜಿನಾಮೆ ಬೇಡಿಕೆ ಬದಿಗೆ



'ಎಲ್‌ಪಿಜಿ'ಗೆ ಪರ್ಯಾಯವಿಲ್ಲವೆಂಬ ಆಳುವ ವರ್ಗಗಳ ವಾದದಲ್ಲಿ ಹುರುಳಿಲ್ಲ

— ಸೀತಾರಾಂ ಯೆಚೂರಿ

ಕಳೆದ ಹತ್ತು ವರ್ಷಗಳಲ್ಲಿ ಜಗತ್ತು ಕಂಡ ಬದಲಾವಣೆಯೆಂದರೆ ಹಣಕಾಸು ಬಂಡವಾಳದ ಜಾಗತೀಕರಣ. ಹಣಕಾಸು ಬಂಡವಾಳ ವಾರ್ಷಿಕ 50 ಕ್ಕಿಂತ ಹೆಚ್ಚುಬಾರಿ, ಶೇರು ಮಾರುಕಟ್ಟೆಯಿಂದ ಶೇರು ಮಾರುಕಟ್ಟೆಗೆ ದೇಶದಿಂದ ದೇಶಕ್ಕೆ ಹರಿದಾಡುತ್ತಿದೆ. ಇದರ ಗುರಿ ಸೂಪರ್ ಲಾಭ ಮಾಡುವುದು. ಒಮ್ಮೆ ಹರಿದಾಡಲು ಪ್ರಾರಂಭಿಸಿದರೆ ಯಾವುದೇ ದೇಶ ತಡೆಯಲಾಗದ ಹಣಕಾಸು ಬಂಡವಾಳ ತಾನು ಹೋದಲ್ಲೆಲ್ಲಾ ಆರ್ಥಿಕ ಹಿಂಜರಿಕೆ ಹಾಗೂ ಬಿಕ್ಕಟ್ಟನ್ನು ಸೃಷ್ಟಿಸಿಯೇ ಮುಂದೆ ಹೋಗುತ್ತದೆ. 90 ರಿಂದ ಚಲನೆ ಮುಂದುವರೆಸಿರುವ ಬಂಡವಾಳ ಎಲ್ಲೆಲ್ಲಾ ಹೆಜ್ಜೆಯಿಡುತ್ತಿದೆಯೋ ಅಲ್ಲೆಲ್ಲಾ ಮಾರುಕಟ್ಟೆಗಳನ್ನು ನಿರ್ಬಂಧ ಮುಕ್ತಗೊಳಿಸಬೇಕು. ಹೀಗಾಗಿ ಶೇ 70 ಕೈಗಾರಿಕಾ ಉತ್ಪನ್ನಗಳ ಮೇಲೆ ಎಂಎನ್‌ಸಿ ಗಳು ಹಿಡಿತ ಸಾಧಿಸಿವೆ. ಇದೇ ಡಬ್ಲ್ಯುಟಿಓ ಅನುಸರಿಸುತ್ತಿರುವ ಜಾಗತೀಕರಣವೆಂಬ 'ಹಣಕಾಸು ಜಾಗತೀಕರಣ'ದ ನಿಯಮ ಎಂದು ಸೀತಾರಾಂ ಯೆಚೂರಿಯವರು ವಿವರಿಸಿದರು. ಅವರು ಸಿಪಿಐ(ಎಂ) ಪಕ್ಷದ ರಾಜ್ಯ ಸಮ್ಮೇಳನಕ್ಕೆ ಪೂರ್ವಭಾವಿಯಾಗಿ ಬಳ್ಳಾರಿಯಲ್ಲಿ ಆಯೋಜಿಸಿದ್ದ 'ಭಾರತ ಅಭಿವೃದ್ಧಿ - ಎಡಪರ್ಯಾಯ -ಅನುಭವಗಳು' ಎಂಬ ವಿಚಾರ ಸಂಕಿರಣವೊಂದರಲ್ಲಿ ಜನವರಿ 24 ರಂದು ಭಾಗವಹಿಸಿ ಭಾರತದ ಅಭಿವೃದ್ಧಿಯ ಪರ್ಯಾಯಗಳ ಬಗ್ಗೆ ಎಡರಂಗದ ಅನುಭವಗಳನ್ನು ಹಂಚಿಕೊಂಡರು.

ತ್ರಿಮೂರ್ತಿಗಳ ಹಾವಳಿ

ಅಂತರ್‍ರಾಷ್ಟ್ರೀಯ ವಿದ್ಯಮಾನಗಳು ಹಾಗೂ ರಾಷ್ಟ್ರೀಯ ಪರಿಸ್ಥಿತಿಗಳನ್ನು ವಿಶ್ಲೇಷಿಸಿ ಮಾತನಾಡಿದ ಅವರು ವಿಶ್ವವ್ಯಾಪಾರ ಸಂಘಟನೆಯು ಶ್ರೀಮಂತ ದೇಶಗಳ ಪರವಾಗಿ ಬದ್ಧವಾಗಿದೆ. ಹೀಗಾಗಿ ತೃತೀಯ ಜಗತ್ತಿನ ಶೇರು ಬಂಡವಾಳ ಕುಸಿಯುತ್ತಿದೆ. ಚೇತರಿಕೆ ಕಾಣಬೇಕಾದರೆ ಆರ್ಥಿಕ ಮಾರುಕಟ್ಟೆಗಳನ್ನು ಮುಕ್ತಗೊಳಿಸಬೇಕೆಂಬ ಶರತ್ತುಗಳನ್ನು ಡಬ್ಲ್ಯುಟಿಓ ಹೇರುವ ಮೂಲಕ ತಾನು ವಿಸ್ತರಣೆಗೊಳ್ಳುತ್ತಿದೆ. ವಿಶ್ವ ಹಣಕಾಸು ಸಂಸ್ಥೆ, ವಿಶ್ವಬ್ಯಾಂಕ್, ವಿಶ್ವ ವ್ಯಾಪಾರ ಸಂಘಟನೆ ಎನ್ನುವ ಈ ತ್ರಿಮೂರ್ತಿಗಳು ಮುಂದುವರೆಯುತ್ತಿರುವ ದೇಶಗಳ ಮೇಲೆ ಷರತ್ತುಗಳನ್ನು ವಿಧಿಸುತ್ತಾ ವಿಶ್ವಬಂಡವಾಳವನ್ನು ನಿಯಂತ್ರಿಸಹೊರಟಿವೆ. ಶ್ರೀಮಂತ ದೇಶಗಳಿಂದ ಹರಿದುಹೋಗುವ ಹಣಕಾಸು ಬಂಡವಾಳ ಹಾಗೆಯೇ ಹರಿದುಬರುವ ಬಂಡವಾಳದ ಮೇಲೆ ನಿರ್ಬಂಧವಿರಬಾರದೆಂಬ ಶರತ್ತುಗಳನ್ನು ಹೇರುವ ಮೂಲಕ ಜಗತ್ತಿಗೆ ಒಡೆಯರಾಗಲು ಹೊರಟಿವೆ ಎಂದು ವಿವರಿಸಿದರು.

ಪಾಳೆಯಗಾರಿ ಸಖ್ಯತೆಯೊಂದಿಗೆ ಬೆಳವಣಿಗೆ ಹೊಂದುತ್ತಿದ್ದ ನಮ್ಮ ದೇಶದ ಬಂಡವಾಳಶಾಹಿ ತನ್ನ ಸೂಪರ್ ಲಾಭದ ಸಲುವಾಗಿ ಹಾಗೂ ಸಾಮ್ರಾಜ್ಯಶಾಹಿಗಳ ಜೊತೆ ಕಿರಿಯ ಪಾಲುದಾರನಾಗುವ ಸಲುವಾಗಿ 90 ರಲ್ಲಿ ಎಲ್‌ಪಿಜಿ ನೀತಿಗಳನ್ನು ಆರ್ಥಿಕ ಸುಧಾರಣೆಯ ಹೆಸರಿನಲ್ಲಿ ಜಾರಿಗೊಳಿಸಿದೆ. ಪಾಳೇಗಾರಿಕೆ ಬಂಡವಾಳಶಾಹಿ ಜೊತೆಗೂಡಿದ ಬೆಳವಣಿಗೆಯ ವೈರುಧ್ಯದೊಂದಿಗೆ ಡಬ್ಲ್ಯುಟಿಓ ಮೂಲಕ ಆಳುವ ವರ್ಗ ಜಾಗತಿಕ ಮಾರುಕಟ್ಟೆಯನ್ನು ಪ್ರವೇಶಿಸಿದೆ. ಇದರ ಫಲವಾಗಿ ಒಂದುಕಡೆ ಹಸಿವು, ದರಿದ್ರ ಎದುರಾಗಿದ್ದರೆ ಮತ್ತೊಂದು ಕಡೆ ದೇಶದ ಸ್ವಾತಂತ್ರ್ಯ, ಸಾರ್ವಭೌಮತೆಯನ್ನು ಒತ್ತೆ ಇಡಬೇಕಾದ ಪರಿಸ್ಥಿತಿ ನಿರ್ಮಾಣಗೊಂಡಿದೆ ಯೆಂದು ಯೆಚೂರಿ ತಿಳಿಸಿದರು.

ಯಾರ ಸಲುವಾಗಿ ಸಾಲ

ಮುಂದುವರೆದು ಮಾತನಾಡಿದ ಅವರು ಆಳುವವರ್ಗ ಐಎಂಎಫ್ ನಿಂದ ಸಾಲ ಪಡೆದದ್ದು ದೇಶದ ಆರ್ಥಿಕ ಹಿಂಜರಿಕೆ ಅಥವಾ ಆಯವ್ಯಯವನ್ನು ಸರಿದೂಗಿಸುವ ಸಲುವಾಗಿ ಅಲ್ಲ ಬದಲಾಗಿ ಬಂಡವಾಳಶಾಹಿ ಹಿತಾಸಕ್ತಿಗನುಗುಣವಾಗಿ, ಉತ್ಪನ್ನ ಮಾಡಿದ ವಸ್ತುಗಳಿಗೆ ಮಾರುಕಟ್ಟೆ ಹಿಡಿಯಲು ಹಾಗೂ ತಂತ್ರಜ್ಞಾನವನ್ನು ಆಮದು ಮಾಡಿಕೊಳ್ಳುವ ಸಲುವಾಗಿ ಐಎಂಎಫ್‌ಗೆ ದೇಶವನ್ನು ಒತ್ತೆ ಇಡಲಾಯಿತೆಂದರು.

ಭಾರತದ ಶೇ 70 ರಷ್ಟು ಜನತೆ ಕೃಷಿಯನ್ನು ಅವಲಂಬಿಸಿ ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ. ಅವರಿಗೆ ಕೊಳ್ಳುವ ಶಕ್ತಿ ಇಲ್ಲವಾಗಿರುವುದರಿಂದ ಕೈಗಾರಿಕಾ ಉತ್ಪನ್ನಗಳು ಬಿಕರಿ ಆಗದೆ ಉಳಿಯುತ್ತಿವೆ. ಹೀಗಾಗಿ ಬಂಡವಾಳಿಗರು ಮಾರುಕಟ್ಟೆ ವೈರುಧ್ಯವನ್ನು ಎದುರಿಸಬೇಕೆಂದಾದರೆ ಒಂದು ಹೊಸ ಮಾರುಕಟ್ಟೆಗಳನ್ನು ಹುಡುಕಬೇಕು ಇಲ್ಲವೇ ಶ್ರೀಮಂತರು ಉಪಯೋಗಿಸುವ ವಸ್ತುಗಳನ್ನು ತಯಾರಿಸಬೇಕು. ಹೊಸ ರಫ್ತು ಮಾರುಕಟ್ಟೆಯನ್ನು ಅಲಂಬಿಸುವುದಾದರೆ ಜಪಾನ್, ಉತ್ತರ ಕೊರಿಯಾ, ಥೈಲಾಂಡ್ ಮುಂತಾದ ಉನ್ನತ ತಾಂತ್ರಿಕತೆ ಹೊಂದಿರುವ ದೇಶಗಳ ಪೈಪೋಟಿಯನ್ನು ಎದುರಿಸಬೇಕಾಗುತ್ತದೆ. ಹೀಗಾಗಿ ಉನ್ನತ ತಾಂತ್ರಿಕತೆಯನ್ನು ಆಮದು ಮಾಡಿಕೊಳ್ಳಬೇಕು.

ಒಂದು ಪಕ್ಷ ಶ್ರೀಮಂತರು ಬಳಕೆ ಮಾಡುವ ನವೀನ ಮಾದರಿಯ ಕಾರು, ಬಣ್ಣದ ಟಿ.ವಿ., ವಾಷಿಂಗ್ ಮೆಷಿನ್ ಮುಂತಾದವುಗಳ ಉತ್ಪಾದನೆಗಳಿಗೆ ಅನುಗುಣವಾಗಿ ಉನ್ನತ ತಾಂತ್ರಿಕತೆಯನ್ನು ಸಹ ಪಾಶ್ಚಾತ್ಯರಿಂದಲೇ ಆಮದು ಮಾಡಿಕೊಳ್ಳಬೇಕಾದ ಅನಿವಾರ್ಯವಿದೆ.

ಪಾಶ್ಚಾತ್ಯ ತಂತ್ರಜ್ಞಾನ ಆಮದಾಗಬೇಕೆಂದಾದರೆ ವಿದೇಶಿ ವಿನಿಮಯ ಬೇಕು. ವಿದೇಶಿ ವಿನಿಮಯ ಇಲ್ಲವಾದರೆ ತಂತ್ರಜ್ಞಾನ ಇಲ್ಲವಾಗುತ್ತದೆ. ಯಥಾಪ್ರಕಾರ ಮಾರುಕಟ್ಟೆ ವೈರುಧ್ಯ ಮುಂದುವರೆಯುತ್ತಿದೆ. ಹೀಗಾಗಿ ಬಂಡವಾಳ ಶಾಹಿಯ



ಅನುಕೂಲಕ್ಕನುಗುಣವಾಗಿ ಆಳುವವರ್ಗ ಐಎಂಎಫ್ ಸಾಲಕ್ಕೆ ಕೈಚಾಚಿ ವಿದೇಶಿ ವಿನಿಮಯಕ್ಕೆ ಮುಂದಾಯಿತು. ವಿದೇಶಿ ಉನ್ನತ ತಂತ್ರಜ್ಞಾನಕ್ಕೆ ಮೊರೆಹೋಯಿತು. ಇದಲ್ಲದೆ ಬೇರೆ ಆಯ್ಕೆ ಬಂಡವಾಳಶಾಹಿಗೆ ಇರಲಿಲ್ಲವೆಂಬುದು ಸ್ಪಷ್ಟವಾಯಿತು. ಇದು, ಜಮೀನುದಾರರ ಜೊತೆಗೂಡಿ ಬಂಡವಾಳಶಾಹಿಯನ್ನು ಬೆಳೆಸಲು ಆಳುವ ವರ್ಗ ಆರಿಸಿಕೊಂಡಿರುವ ವಿಜಯದ ಹಾದಿ ಎಂದ ಯೆಚೂರಿ ಯವರು ಪ್ರಸ್ತುತ ದೊಡ್ಡ ಆರ್ಥಿಕ ಸಮಸ್ಯೆ ಉದ್ಭವವಾಗಿದೆ: ಇದರಿಂದ ಹೊರಬರಬೇಕಾದರೆ ಉತ್ಪನ್ನದ ಹೆಚ್ಚಳಕ್ಕೆ ಅನುಗುಣವಾಗಿ ಜನರ ಕೊಳ್ಳುವ ಶಕ್ತಿಯನ್ನು ಹೆಚ್ಚಿಸಬೇಕು. ಇಲ್ಲವಾದರೆ ಆರ್ಥಿಕ ಅಭಿವೃದ್ಧಿ ಸಾಧ್ಯವಿಲ್ಲವೆಂದರು.

ಭಾರತದ ಆರ್ಥಿಕ ಅಭಿವೃದ್ಧಿಯ ಬೆಳವಣಿಗೆಯ ಮೇಲೆ 60, 70, 80 ರ ದಶಕಗಳಲ್ಲಿ ನಿರ್ಬಂಧಗಳು ಹೇರಲ್ಪಟ್ಟಿವೆ. 80 ರ

ಪುಟ 10 ಕ್ಕೆ

ಸಿಪಿಐ(ಎಂ)17ನೇ ರಾಜ್ಯ ಸಮ್ಮೇಳನ

ಯಶಸ್ವಿಗೊಳಿಸುವುದರತ್ತ ಭರದ ಸಿದ್ಧತೆ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)ದ 17ನೇ ಕರ್ನಾಟಕ ರಾಜ್ಯ ಸಮ್ಮೇಳನವನ್ನು ಯಶಸ್ವಿಗೊಳಿಸಲು ಸರ್ವ ಸಿದ್ಧತೆಗಳು ಭರದಿಂದ ಸಾಗಿವೆ. ಪಕ್ಷದ ರಾಜಕೀಯ ಧೋರಣೆ - ಹೋರಾಟ ಮುಖ್ಯವಾಗಿ ಭಾರತ ದೇಶ ಎದುರಿಸುತ್ತಿರುವ ಗಂಭೀರ ಸವಾಲುಗಳು ಹಾಗೂ ಕರ್ತವ್ಯಗಳ ಕುರಿತು ಜಿಲ್ಲೆಯಾದ್ಯಂತ ಪ್ರಚಾರ, ಜಾಥಾಗಳು, ಜನವರಿ 15 ರಿಂದ ಆರಂಭಗೊಂಡಿವೆ. ಪ್ರತಿ ತಾಲೂಕಿನಲ್ಲಿ ಸಮ್ಮೇಳನದ ಸಂದೇಶ ಸಾರುವ ಗೋಡೆಬರಹ, ಕರಪತ್ರ ಹಂಚಿಕೆ ಭಿತ್ತಿ ಪತ್ರ - ಸಭೆಗಳು, ವಿಚಾರಸಂಕಿರಣಗಳು ನಡೆದಿವೆ.

2002 ಜನವರಿ 28 ರಿಂದ 31 ರವರೆಗೆ ಈ ಸಮ್ಮೇಳನ ಬಳ್ಳಾರಿ ನಗರದ ಶಾದಿ ಮಹಲ್‌ನಲ್ಲಿ ಜರುಗಲಿದೆ. ಸಮ್ಮೇಳನದ ಪ್ರದೇಶಕ್ಕೆ ಹಿಂದಿನ ರಾಜ್ಯ ಕಾರ್ಯದರ್ಶಿಯಾಗಿದ್ದ ಪಿ.ರಾಮಚಂದ್ರರಾವ್ ನಗರವೆಂದು, ಮತ್ತು ವೇದಿಕೆ ಎಂದು ಹೆಸರಿಸಲಾಗಿದೆ. 28 ರಂದು ಮಧ್ಯಾಹ್ನ 2.00 ಗಂಟೆಗೆ ಬೃಹತ್ ರ್‍ಯಾಲಿ,ಆಕರ್ಷಕ ಮೆರವಣಿಗೆ ಆರಂಭಗೊಳ್ಳಲಿದೆ. 3.30 ಕ್ಕೆ ಬಹಿರಂಗ ಸಭೆಯು ಜರುಗಲಿದ್ದು ಕೇರಳದ ಮಾಜಿ ಮುಖ್ಯಮಂತ್ರಿ, ಪೊಲಿಟ್‌ಬ್ಯೂರೋ ಸದಸ್ಯ, ಕಯ್ಯೂರು ವೀರ ರೈತ ಹೋರಾಟಗಾರ ಕಾಂ.ಇ.ಕೆ.ನಾಯನಾರ್ ಮುಖ್ಯ ಭಾಷಣಕಾರರಾಗಿ ಮಾತನಾಡಲಿದ್ದಾರೆ. ಅಲ್ಲದೇ ಸಿಐಟಿಯು ರಾಷ್ಟ್ರ ಅಧ್ಯಕ್ಷರಾದ, ಪಿ.ಬಿ.ಸದಸ್ಯರಾದ ಕಾಂ. ಇ.ಬಾಲಾನಂದನ್, ಕಾಂ. ಪಿ.ರಾಮಚಂದ್ರನ್ ಭಾಗವಹಿಸುವರು. ಆಂಧ್ರಪ್ರದೇಶದ ಸಿಪಿಐ(ಎಂ) ಕಾರ್ಯದರ್ಶಿ ಹಾಗೂ ಇತ್ತೀಚಿಗಿನ ಸಮರಧೀರ ವಿದ್ಯುತ್ ಹೋರಾಟದ ನೇತಾರ ಕಾಂ. ಬಿ.ವಿ.ರಾಘವಲು ಅತಿಥಿಗಳಾಗಿ ಆಗಮಿಸಿ ಭಾಷಣ ಮಾಡುವರು. ಪಕ್ಷದ ರಾಜ್ಯ ಕಾರ್ಯದರ್ಶಿ ಕಾಂ. ಸೂರಿಯವರು ಅಧ್ಯಕ್ಷತೆ ವಹಿಸುವರು. ಈ ರ್‍ಯಾಲಿ ಜಿಲ್ಲೆಯ ಇತಿಹಾಸದಲ್ಲಿ ಒಂದು


ಪಕ್ಷದ ಅತ್ಯಂತ ಹಿರಿಯ ಸದಸ್ಯರೂ, ಮೈಸೂರು ಪ್ರಾಂತ್ಯದಲ್ಲಿ ಸ್ವಾತಂತ್ರ್ಯ ಚಳುವಳಿಯಲ್ಲಿ ಕ್ರಿಯಾಶೀಲ ನಾಯಕತ್ವ ವಹಿಸಿದ್ದ ಕಾಂ. ಎಂ.ಎಸ್.ಉಗ್ರಪ್ಪ 29 ರಂದು ಬೆಳಿಗ್ಗೆ ಧ್ವಜಾರೋಹಣವನ್ನು ಮಾಡಲಿದ್ದಾರೆ. ನಂತರ ಕಾಂ. ಇ.ಬಾಲಾನಂದನ್ ಸಮ್ಮೇಳನದ ಕಲಾಪಗಳನ್ನು ಉದ್ಘಾಟಿಸಲಿದ್ದಾರೆ. 31 ರಂದು ಪಿ.ರಾಮಚಂದ್ರನ್ ಸಮಾರೋಪ ಗೊಳಿಸುವರು. ಈ ಸಮ್ಮೇಳನದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಸಮ್ಮೇಳನಗಳಲ್ಲಿ ಆಯ್ಕೆಯಾದ ಸುಮಾರು 250 ಪ್ರತಿನಿಧಿಗಳು, ವೀಕ್ಷಕರು, ಪಾಲ್ಗೊಳ್ಳಲಿದ್ದಾರೆ. ಸಮ್ಮೇಳನವು ಹಲವಾರು ರಾಜ್ಯದ ರಾಜಕೀಯ, ಅಭಿವೃದ್ಧಿ ಪ್ರಶ್ನೆಗಳು, ಹಾಗೂ ಜನಸಂಪತ್ತುಗಳ ಕುರಿತು ಪ್ರಮುಖ ತೀರ್ಮಾನಗಳನ್ನು ಕೈಗೊಳ್ಳಲಿದೆ.

ವಿಚಾರಸಂಕಿರಣ



ಬೆಂಗಳೂರಿನಲ್ಲಿ

ಎನ್.ಕೆ.ಯವರಿಗೊಂದು ಅರ್ಥಪೂರ್ಣ ಶ್ರದ್ಧಾಂಜಲಿ



ಹಿರಿಯ ಸ್ವಾತಂತ್ರ್ಯಯೋಧ, ಕಮ್ಯುನಿಸ್ಟ್ ನಾಯಕರಾದ ಎನ್.ಕೆಯವರಿಗೆ ಶ್ರದ್ಧಾಂಜಲಿ ಸಲ್ಲಿಕೆಯ ರಾಜ್ಯಮಟ್ಟದ ಸಭೆ ಬೆಂಗಳೂರಿನಲ್ಲಿ ನಡೆಯಿತು. ಅವರೊಂದಿಗೆ ನಿಕಟವಾಗಿ ಒಡನಾಡಿದ ಹಲವು ರಂಗಗಳ ಗಣ್ಯರು ಭಾಗವಹಿಸಿದ್ದು ಎನ್.ಕೆ.ಯವರ ದೃಷ್ಟಿ-ಬದುಕು-ಸ್ನೇಹದ ಪ್ರತೀಕವಾಗಿ ಕಂಡಿತು. ಹಾಗೇ ಅವರಿಗೆ ಸೂಕ್ತವಾದ ಶ್ರದ್ಧಾಂಜಲಿ ಸಲ್ಲಿಸಲು ವಿಜಾಪುರದ ಜಿಲ್ಲೆಯ ಆಲಮಟ್ಟಿ ಕಾಲುವೆಗೆ ಅವರ ಹೆಸರಿಡುವ, ಅವರ ಹೆಸರಲ್ಲಿ ಟ್ರಸ್ಟ್ ರಚಿಸಿ, ಅಧ್ಯಯನ ಕೇಂದ್ರ ಮುಂತಾಗಿ ರೂಪಿಸುವ ಪ್ರಸ್ತಾವನೆಗಳು ಬಂದವು.

ಕೆ.ಎಸ್.ವಿಮಲಾ

ಐದು ದಶಕಗಳಿಗೂ ಮೀರಿ ಕರ್ನಾಟಕ ರಾಜ್ಯದಲ್ಲಿ ಕಮ್ಯುನಿಸ್ಟ್ ಚಳುವಳಿಗೆ ಅವಿಶ್ರಾಂತ ಶ್ರಮಿಸಿದ ಕಾಂ. ಎನ್ಕೆ ಡಿಸೆಂಬರ್ 9 ರಂದು ಬಿಜಾಪುರ ದಲ್ಲಿ ಅಲ್ಪಕಾಲದ ಅಸ್ವಸ್ಥತೆಯ ನಂತರ ನಮ್ಮನ್ನಗಲಿದ್ದಾರೆ.

ಹೋರಾಟಕ್ಕೆ ಮತ್ತೊಂದು ಹೆಸರು

- ಪಿ.ಜಿ.ಆರ್.ಸಿಂಧ್ಯಾ

ಎನ್ಕೆ ಕಮ್ಯುನಿಸ್ಟ್ ಚಳುವಳಿಯ ನೇತಾರರಾಗಿದ್ದರೂ ಅವರ ಬದುಕಿನ ಶೈಲಿ,- ವಿಚಾರದ ರೀತಿ ಅವರಿಗೆ ಕಮ್ಯುನಿಸ್ಟ್ ಚಳುವಳಿಯಿಂದ ಹೊರಗಿರುವವರಲ್ಲಿಯೂ ಅಪಾರವಾದ ಅಭಿಮಾನಿ ಬಳಗವನ್ನು ಸೃಷ್ಟಿಮಾಡಿತ್ತು. ವಿರೋಧಿಗಳನ್ನು ತುಚ್ಛೀಕರಿಸದ ಎನ್ಕೆ ಹೇಗಾದರೂ ಅವರನ್ನು ಕನಿಷ್ಟ ಚಳುವಳಿಯ ಹಿತೈಷಿಗಳನ್ನಾಗಿಸುವ ಪ್ರಯತ್ನ ನಡೆಸುತ್ತಿದ್ದರು. ನಾನು ನನ್ನ ವಿಧ್ಯಾಭ್ಯಾಸ ದಿನಗಳಲ್ಲಿಯೇ - ಕಮ್ಯುನಿಸ್ಟ್ ತತ್ವಗಳಿಂದ ದೂರವಿದ್ದ ವ್ಯಕ್ತಿ. ಆದರೆ ನನ್ನಂತಹವರನ್ನೂ ಮಾತಿಗಿಳಿಸಿ, ಚರ್ಚೆಗೆಳೆಯುವ, ಆ ಮೂಲಕ ದುಡಿಯುವ ವರ್ಗದ ಪರವಾಗಿ ಮಾತನಾಡ ಬೇಕೆನ್ನುವ ಪ್ರೇರೇಪಣೆ ನೀಡುತ್ತಿದ್ದವರು ಎನ್ಕೆ. ಎನ್ಕೆ ಎಂದರೆ ಹೋರಾಟಕ್ಕೆ ಮತ್ತೊಂದು ಹೆಸರು. ಕರ್ನಾಟಕದಲ್ಲಿ ಕಮ್ಯುನಿಸ್ಟ್ ಚಳುವಳಿಗೆ ಅಪಾರ ಕೊಡುಗೆ ನೀಡಿದ್ದಾರೆ. ಇಂದು ಇತರ ಎಲ್ಲ ಪಕ್ಷಗಳು ಅಧಿಕಾರ ಸ್ಥಾನಗಳಿಗಾಗಿಯಷ್ಟೇ ರಾಜಕೀಯ ನಡೆಸುತ್ತವೆ. ಆದರೆ ದೇಶ, ಜಾಗತೀಕರಣದ ಕಪಿಮುಷ್ಟಿಯಲ್ಲಿ ನಲುಗುತ್ತಿರುವಾಗ, ದೇಶಕ್ಕೆ ಆಶಾಕಿರಣ ಸಿಪಿಐ(ಎಂ)ಪಕ್ಷ. ಒಂದು ಪರ್ಯಾಯವನ್ನು ನೀಡಲು ಇಲ್ಲಿಂದ ಮಾತ್ರ ಸಾಧ್ಯ. ಎನ್ಕೆ ಒಬ್ಬ ಉತ್ತಮ ನಾಯಕರು ನಾಯಕತ್ವ ಸ್ಥಾನದಿಂದಲ್ಲ - ವ್ಯಕ್ತಿತ್ವದಿಂದ. ಅಂತಹ ವ್ಯಕ್ತಿ ಎನ್ಕೆ. ಇದನ್ನೆಲ್ಲ ಹೇಳಿದ್ದು ಜನತಾದಳ(ಯು) ಪಕ್ಷದ ನಾಯಕ ಮಾಜಿ ಸಚಿವ ಪಿ.ಜಿ.ಆರ್.ಸಿಂಧ್ಯಾ. ಸಂದರ್ಭ ದಿನಾಂಕ 16 ರಂದು ಬೆಂಗಳೂರಿನ ಮಿಥಿಕ್ ಸೊಸೈಟಿ ಆವರಣದಲ್ಲಿ ನಡೆದ ಎನ್ಕೆಯವರಿಗೆ ಶ್ರದ್ಧಾಂಜಲಿ ಸಭೆ.

> **ಆಲಮಟ್ಟಿ ಕಾಲುವೆಗೆ ಎನ್ಕೆ ಹೆಸರಿಡಿ - ಹಳಂಗಳಿ**
>
> ಸಿಪಿಐ ಬಿಜಾಪುರದ ಮುಖಂಡರಾದ ಹಳಿಂಗಳಿಯವರು ಮಾತನಾಡಿ 'ಆಲಮಟ್ಟಿ ಡ್ಯಾಂ' ಎನ್ನುವ ಕಲ್ಪನೆಯೇನಾದರೂ ಬರಲು ಸಾಧ್ಯವಾಗಿದ್ದರೆ ಅದು ಎನ್ಕೆಯವರಿಂದ. ಕೃಷ್ಣಾ ನದಿಯ ನೀರನ್ನು ಬಿಜಾಪುರ ಭಾಗದ ರೈತರಿಗೆ ದೊರೆಯುವಂತೆ ಎನ್ಕೆ ತಾವು ಕಂಡ ಕನಸನ್ನು ಹೋರಾಟದ ಮೂಲಕ ಸಾಧಿಸಲು ಸಾಧ್ಯವಾಗಿದೆ. ಆ ಡ್ಯಾಂ ನ ಒಂದು ಕಾಲುವೆಗೆ ಅವರ ಹೆಸರನ್ನಿಡಲು ಸಾಧ್ಯವಾಗುವಂತೆ ಕ್ರಮವಹಿಸಬೇಕೆಂದರಲ್ಲದೇ ಬಿಜಾಪುರ ಪ್ರದೇಶದಲ್ಲಿ ಎನ್ಕೆ ಎಷ್ಟು ಜನಾನುರಾಗಿಗಳು ಎಂದು ತಿಳಿಸಿದರು. ಇಂದಿಗೂ ಎನ್ಕೆಯವರ ಜಾಗದಲ್ಲಿ, ಬಿಜಾಪುರದ ನಗರ ಸಭೆ ಕೊಟ್ಟ ಚಿಕ್ಕ ಜಾಗದಲ್ಲಿ, ಬಿಜಾಪುರದ ಕಾರ್ಮಿಕರು ರಾತ್ರಿ ಹೊತ್ತು ಬಂದು ಕೆಲಸ ಮಾಡಿ, ಸ್ವತಃ ಕಟ್ಟಿಕೊಟ್ಟ ಮನೆ, ಕೆಳಗಡೆಯ ಚಿಕ್ಕ ಭಾಗ ಬಾಡಿಗೆಗೆ ಕೊಟ್ಟು - ಮಹಡಿಯ ಮೇಲೆ ಶೀಟ್ ಮನೆಯಲ್ಲಿ ಬದುಕುತ್ತಿದ್ದರೆಂದು ತಿಳಿಸಿ ಅವರ ಸರಳ ಜೀವನವನ್ನು ಎಲ್ಲರ ಮುಂದಿಟ್ಟರು. ಅವರಂತಹವರು ಇಡೀ ಚಳುವಳಿಗೆ

ಗೋವಾ ವಿಮೋಚನಾ ಹೋರಾಟಗಾರ

- ಕೆ.ಮುನಿಯಪ್ಪ

ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ - ಏರ್ಪಡಿಸಿದ ಈ ಶ್ರದ್ಧಾಂಜಲಿ ಸಭೆಯಲ್ಲಿ ಬಹಳ ಜನರಿಗೆ ತಿಳಿಯದ ಎನ್ಕೆಯವರ ಹೋರಾಟದ ಬದುಕನ್ನು ತೆರೆದಿಟ್ಟ ಇನ್ನೊಬ್ಬ ಅವರ ಗೋವಾ ವಿಮೋಚನಾ ಚಳುವಳಿಯ ಸಹವರ್ತಿ ಮಾಜಿ ಸಚಿವ ಕೆ.ಮುನಿಯಪ್ಪ.

ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೂ ಗೋವಾ ಪೋರ್ಚುಗೀಸರ ವಶದಲ್ಲಿಯೇ ಇತ್ತು. ಈ ಸ್ವಾತಂತ್ರ್ಯ ಚಳುವಳಿಯ ವಿವರಗಳು ಬಹಳ ಮಂದಿಗೆ ತಿಳಿದೇ ಇಲ್ಲ. ಗೋವಾ ಗಡಿಯೊಳಗೆ ಪ್ರವೇಶವೆಂದರೆ ಗೋಲಿಬಾರ್‌ನಲ್ಲಿ ಸಾಯುವುದೆಂದೇ ಪ್ರಚಲಿತವಾಗಿದ್ದ ಆ ಸಂದರ್ಭದಲ್ಲಿ ಸುಮಾರು 500 ಜನ ಸತ್ಯಾಗ್ರಹಿಗಳು ಗಡಿ ಪ್ರವೇಶಿಸಿದ ಕಥೆಯನ್ನು ಮುನಿಯಪ್ಪ ಬಿಚ್ಚಿಟ್ಟರು. 2 ತಂಡಗಳಾಗಿ ವಿಂಗಡಿಸಲ್ಪಟ್ಟ ಸತ್ಯಾಗ್ರಹಿಗಳು ದೋಡಾ ಗಡಿ ಮತ್ತು ಬಾಂದಾ ಗಡಿಗಳ ಮೂಲಕ ಗೋವಾ ಪ್ರವೇಶಿಸುವ ಏರ್ಪಾಡಾಗಿತ್ತು. ಎನ್ಕೆಯವರು 15.8.55 ರಂದು ಬಾಂದಾ ಗಡಿಯ ಮೂಲಕ ಪ್ರವೇಶಿಸುವ ತಂಡದಲ್ಲಿದ್ದರು. ಆ ತಂಡದಲ್ಲಿ ಎ.ಕೆ.ಗೋಪಾಲನ್, ಮಧುದಂಡವತೆ, ಮಧು ಲಿಮಯೇ ಮತ್ತು ಅವರ ಪತ್ನಿ ಇವರೆಲ್ಲ ಇದ್ದರು. ಪೋಲೀಸರ ಗೋಲಿಬಾರ್‌ನಲ್ಲಿ ಇರುವೆ ಗುರೂಜಿಯವರು ಸತ್ತರು. ಸುಭದ್ರಾ ಜೋಷಿಯವರ ಕೈಮೂಳೆ ಮುರಿಯಿತು. ಪೋರ್ಚುಗೀಸರು ಕೇವಲ ಪೋಲೀಸ್ ಮಾತ್ರವಲ್ಲದೇ, ಅಲ್ಲಿಯ ನಾಗರೀಕರಿಗೂ ಈ ಸ್ವಾತಂತ್ರ್ಯ ಚಳುವಳಿಯ ವಿರುದ್ಧ ಪ್ರಚಾರ ಮಾಡಿ ಸತ್ಯಾಗ್ರಹಿಗಳ ಮೇಲೆ ಆಕ್ರಮಣ ನಡೆಸುವ ತಯಾರಿ ಮಾಡಿದ್ದರ ಹಿನ್ನೆಲೆಯಲ್ಲಿ ಹಲವು ಪ್ರದೇಶಗಳಲ್ಲಿ ನಾಗರಿಕರೇ ಸತ್ಯಾಗ್ರಹಿಗಳ ಮೇಲೆ ಆಕ್ರಮಣ ಮಾಡಿದ್ದರಿಂದಾಗಿ ಸತ್ಯಾಗ್ರಹವನ್ನು ನಿಲ್ಲಿಸಬೇಕಾಯ್ತು. ಆದರೂ ಮುನಿಯಪ್ಪ ಮತ್ತೊಂದು ನಾಲ್ಕು ಜನ (ಅರ್ಜುನ್ ದೇವ್, ಛಲದಲ್ಲಿ ಗಡಿಯಲ್ಲಿ ರುವ ಕಾಡಿನಲ್ಲಿ ಉಳಿದು ಸೊಪ್ಪು ಸದೆ ತಿಂದು ಕೊನೆಗೂ 'ಬಿಚೋಲಿ' ಎಂಬ ಪ್ರದೇಶ ಪ್ರವೇಶಿಸುವಲ್ಲಿ ಯಶಸ್ವಿಯಾದರು. ಮತ್ತು ಬಾವುಟ ಹಾರಿಸಿಯೇ ಬಿಟ್ಟರು. ಪೋಲೀಸರ ಕೈಗೆ ಸಿಕ್ಕಿಹಾಕಿಕೊಳ್ಳುವ ಮುನ್ನ ಅವರ ಕೈಯಲ್ಲಿರುವ ಇನ್ನೊಂದು ಬಾವುಟ ಹಾರಿಸಿಬಿಡುವ ತವಕ ಅವರಿಗೆ ಆದರೆ ಬಾವುಟ ಕಟ್ಟಲು ದಾರವೇ ಇರಲಿಲ್ಲ. ಒಬ್ಬರು ಉಟ್ಟ ಪಂಚೆಯನ್ನೇ ಹರಿದು ಬಾವುಟ ಹಾರಿಸಿ, ಬಳಲಿಕೆ ತಣಿಸಿಕೊಳ್ಳಲು ಮನೆಯ ಒಬ್ಬಾಕೆಯನ್ನು ನೀರು ಕೇಳಿದರು. ನೀರು ಕೊಡುವಾಗಲೇ ಇವರು ಯಾರೆಂಬ ಮಾಹಿತಿ ಸಂಗ್ರಹಿಸಿ, ಪೋಲೀಸರಿಗೆ ಸುದ್ದಿ ಮುಟ್ಟಿಸಿದ ಪರಿಣಾಮವಾಗಿ, ಪೋಲೀಸರ ಕ್ರೂರ ದೌರ್ಜನ್ಯಕ್ಕೆ ಬಲಿಯಾಗಬೇಕಾಯಿತು. ಅಖಿಲ ಭಾರತ ಮಟ್ಟದಿಂದ ವೈದ್ಯಕೀಯ ತಂಡ ಬಂದು ಉಪಚರಿಸುವಂತೆ ನೆಹರೂರವರು ವ್ಯವಸ್ಥೆ ಮಾಡಿದರು. ಆಗಸ್ಟ್ 18 ರಂದು ಬೆಂಗಳೂರಿಗೆ ವಾಪಸ್ ಬಂದ ತಂಡವನ್ನು ಸೂರಿ ಮುಂತಾದವರು ಬಂದು ಉಪಚರಿಸಿ ವೈದ್ಯಕೀಯ ಸೇವೆ ಒದಗಿಸಿದರು. ಹೀಗೆ ಕಥೆ ಬಿಚ್ಚಿಟ್ಟ ಮುನಿಯಪ್ಪನವರು, ಆ ಸತ್ಯಾಗ್ರಹಿಗಳಿಗೆ ನಿವೃತ್ತಿ ವೇತನ ಕೊಡುವಾಗಿನ ವ್ಯಥೆಯನ್ನೂ ತಿಳಿಸಿದರು. ಸ್ವಾತಂತ್ರ್ಯ ಹೋರಾಟಗಾರರಿಗೆ ಪಿಂಚಣಿ ಎಂದು ಬಂದ ಸ್ವಾತಂತ್ರ್ಯ ಭಾರತದ ಸರ್ಕಾರದ ಯೋಜನೆಯ ಸಂದರ್ಭದಲ್ಲಿ ಗೋವಾ ವಿಮೋಚನಾ ಚಳುವಳಿಗಾರರಿಗೆ ಅದನ್ನು ದೊರಕಿಸಿಕೊಡಲು ಎನ್ಕೆ ಬಹಳ ಪ್ರಯತ್ನಿಸಿದರು. ಆದರೆ ಸತ್ಯಾಗ್ರಹದಲ್ಲಿ ಪಾಲ್ಗೊಂಡವರು 500 ಮಂದಿ ಆದರೆ ಅರ್ಜಿ ಬಂದಿದ್ದು 2000 ಕ್ಕೂ ಮೀರಿ. ಅದರ ವಿರುದ್ಧವೂ ಹೋರಾಟ ಮಾಡಿದ್ದು ಎನ್ಕೆ. ಕೊನೆಗೆ ಸರ್ಕಾರ ಈ ಪ್ರಸ್ತಾಪವನ್ನೇ ಕೈಬಿಟ್ಟಿತು. ಆದರೆ ಸಾಯುವ ಕೆಲವೇ ದಿನಗಳ ಮುಂಚೆ ಕೂಡ ತನ್ನೊಂದಿಗೆ ಈ ಪ್ರಸ್ತಾಪವನ್ನು

ಎನ್ಕೆಯವರು ಯುವ ಪೀಳಿಗೆಗೆ ಆದರ್ಶವಾಗಬೇಕೆಂದರು.

ಯುವಜನರಿಗೆ ಆದರ್ಶ:

- ಹೆಚ್.ಎಸ್.ದೊರೆಸ್ವಾಮಿ

ಸಮಾರಂಭದಲ್ಲಿ ಪಾಲ್ಗೊಂಡ ಮತ್ತೊಬ್ಬ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್.ದೊರೆಸ್ವಾಮಿಯವರು ಮಾತನಾಡಿ ಸ್ವಾತಂತ್ರ್ಯ ಹೋರಾಟದ ಪರಂಪರೆಯನ್ನು ಬಿಚ್ಚಿಟ್ಟರು. ಇಂದಿನ ಅವಕಾಶವಾದಿ ರಾಜಕಾರಣದ ಬಗ್ಗೆ ಬೇಸರ ವ್ಯಕ್ತಪಡಿಸಿದ ಅವರು ಎನ್ಕೆಯಂತಹ ವ್ಯಕ್ತಿಗಳು ಸಿಗುವುದು ವಿರಳ. ಎನ್ಕೆಯಂಥ ನೂರಾರು ಯುವ ಜನತೆಯ ಅವಶ್ಯಕತೆ ಇಂದು ದೇಶಕ್ಕಿದೆ. ಆ ಕೆಲಸ ಆಗಲೇಬೇಕು ಎಂದರು.

ಸರಳ ಎನ್ಕೆ

- ಹನುಮಂತಯ್ಯ

ವಿದ್ಯಾರ್ಥಿ ದೆಸೆಯಲ್ಲಿ ಎನ್ಕೆಯವರೊಂದಿಗಿನ ತನ್ನ ಕ್ಷಣಗಳನ್ನು ಮೆಲುಕು ಹಾಕಿದವರು ಬಂಡಾಯ ಸಾಹಿತಿ, ವಿಧಾನ ಪರಿಷತ್‌ನ ಶಾಸಕ ಡಾ. ಎಲ್.ಹನುಮಂತಯ್ಯನವರು. ಎಸ್‌ಎಫ್‌ಐ ನ



ವೇದಿಕೆಯಲ್ಲಿ ಸೂರಿ, ಸಿಂಧ್ಯಾ, ದೊರಸ್ವಾಮಿ

ನಾಯಕರಾಗಿದ್ದಾಗ ಎನ್ಕೆ ತನ್ನ ಮೇಲೆ ಬೀರಿದ ಪ್ರಭಾವ, ಪಿ.ಆರ್. ರವರು ತಮ್ಮನ್ನು ಬೆಳೆಸಿದ ರೀತಿಯನ್ನು ಹಂಚಿಕೊಂಡರು. ಯಾವುದೇ ಸಮಸ್ಯೆಗೆ ಎಷ್ಟು ಸರಳವಾಗಿ ಎನ್ಕೆ ಅರ್ಥ ಮಾಡಿಸುತ್ತಿದ್ದರೆಂಬುದನ್ನು ಒಂದು ಉದಾಹರಣೆಯೊಂದಿಗೆ ಅವರು ವಿವರಿಸಿದರು. ಮೀಸಲಾತಿಯ ಕುರಿತು ದೊಡ್ಡ ಚರ್ಚೆ ನಡೆಯುತ್ತಿದ್ದ ಸಂದರ್ಭ, ಸಮಾನತೆಗಾಗಿ ನಾವು ಹೋರಾಟ ನಡೆಸುತ್ತಿದ್ದೇವೆ. ಶ್ರೀಮಂತ - ಬಡವರ್ಗಗಳ ಮಧ್ಯೆ ನಡೆಯುತ್ತಿರುವ ಹೋರಾಟದಲ್ಲಿ ಮೀಸಲಾತಿ ಸರಿಯಲ್ಲ ಎಂಬ ವಾದ ಬಂದಾಗ - ಎನ್ಕೆ ಕೇಳಿದ ಒಂದು ಪ್ರಶ್ನೆ - ಕೆಳ ಜಾತಿಯವರನ್ನು ಇವರ ಮನೆಯಲ್ಲಿ ಹೇಗೆ ನಡೆಸಿಕೊಳ್ಳುತ್ತಾರೆ. ಅವರಿಗೆ ಎಂತಹ ಟ್ರೀಟ್‌ಮೆಂಟ್ ಸಿಗುತ್ತದೆ ಎಂದು ಇದಕ್ಕೆ ಉತ್ತರ ಕೊಡುವಾಗಲೇ ಅವರ ವಾದಕ್ಕೆ ಉತ್ತರ ಸಿಕ್ಕಿತು. ಇದು ಎನ್ಕೆಯವರ ವಿಧಾನವೆಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಸೂರಿಯವರು ಎನ್ಕೆಯವರೊಡನೆ ತಮ್ಮ ಸಾಂಗತ್ಯವನ್ನು ವಿವರಿಸಿದರು.

ಜಿ.ಎನ್.ನಾಗರಾಜ್‌ರವರ ಪ್ರಸ್ತಾವನೆಯೊಂದಿಗೆ ಪ್ರಾರಂಭವಾದ ಸಭೆ ಜಿ.ಸಿ.ಬಯ್ಯಾರೆಡ್ಡಿಯವರ ವಂದನೆಗಳೊಂದಿಗೆ ಮುಕ್ತಾಯವಾಯಿತು.

ನಮ್ಮ ಗಣತಂತ್ರವನ್ನು ರಕ್ಷಿಸೋಣ

ಐವತ್ತೆರಡು ವರ್ಷಗಳ ಹಿಂದೆ 'ನಾವು ಭಾರತದ ಜನತೆ' ಈಗಿರುವ ಗಣತಂತ್ರ ಸಂವಿಧಾನವನ್ನು ನಮಗೆ ನಾವೇ ಕೊಡಮಾಡಿಕೊಂಡೆವು. ಅದು ಒಂದು ಸಮೃದ್ಧ ಮತ್ತು ಬಲಿಷ್ಠ ಭಾರತವನ್ನು ಕಟ್ಟುವ ಮುನ್ನೋಟವನ್ನು ಹೊಂದಿದ್ದ ಒಂದು ದಸ್ತಾವೇಜು. ಧರ್ಮನಿರಪೇಕ್ಷ, ಪ್ರಜಾಪ್ರಭುತ್ವ, ಆರ್ಥಿಕ ಸ್ವಾವಲಂಬನೆ, ಒಕ್ಕೂಟ ತತ್ವ ಮತ್ತು ಸಾಮಾಜಿಕ ನ್ಯಾಯ ಈ ನಾಲ್ಕು ಸ್ತಂಭಗಳ ಮೇಲೆ ನಿಂತಿರುವ ರಚನೆ ಅದು. ಈ ಗುರಿಗಳ ಸಾಧನೆಗೆ ಒಂದು ಬಂಡವಾಳಶಾಹಿ-ಭೂಮಾಲಕ ಆಳ್ವಿಕೆಯಲ್ಲಿರುವ ಮಿತಿಗಳು ಸ್ವಯಂವೇದ್ಯ. ಆದರೂ ಈ ಮುನ್ನೋಟ ಭಾರತದಲ್ಲಿ ಒಂದು ಶೋಷಣೆಯಿಲ್ಲದ ಸಮಾಜ ದತ್ತ ಸಾಗಲು ಈಗಲೂ ಆಧಾರವಾಗಬಲ್ಲದು.

ಇಂದು ನಾವು ಈ ವಾರ್ಷಿಕೋತ್ಸವವನ್ನು ಭಯೋತ್ಪಾದನೆಯ ಹೆಚ್ಚುತ್ತಿರುವ ಬೆದರಿಕೆಯ



ಕರಾಳ ನೆರಳಿನಡಿ ಆಚರಿಸುತ್ತಿದ್ದೇವೆ. ಡಿಸೆಂಬರ್ 13 ರ ಹೇಯಕೃತ್ಯದ ನಂತರ ಈಗ ಕೊಲ್ಕತ್ತಾದಲ್ಲಿ ಧಾಳಿ ನಡೆದಿದೆ. ದೇಶ ಈ ಸವಾಲನ್ನು ಎದುರಿಸಲು, ಈ ಪೀಡೆಯನ್ನು ತೊಲಗಿಸಲು ಒಂದಾಗಿ ಎದ್ದು ನಿಂತಿದೆ.

ಅದೇ ವೇಳೆಗೆ ಹಸಿವಿನಿಂದ ಸಾವು, ಹತಾಶೆಯಿಂದ ಆತ್ಮಹತ್ಯೆಗಳನ್ನು ತಡೆಯಲು ಕೂಡಾ ಇಡೀ ದೇಶ ಒಂದಾಗಿ ಎದ್ದು ನಿಲ್ಲಬೇಕಾಗಿದೆ. ಏಕೆಂದರೆ ಭಯೋತ್ಪಾದಕ ಧಾಳಿಗಳಿಂದ ಮುಗ್ಧ ಜೀವಗಳ ನಷ್ಟದಷ್ಟೇ ಕ್ರೂರವಾದದ್ದು ಇವು.

ಈ ಐವತ್ತು ವರ್ಷಗಳಲ್ಲಿ ದೇಶ ಒಂದು ಕಷ್ಟಕರ ಹಾದಿಯಲ್ಲಿ ಸಾಗಿ ಬಂದಿದೆ, ಹಲವು ಗಮನಾರ್ಹ ಸಾಧನೆಗಳನ್ನು ಮಾಡಿದೆ. ಅವುಗಳಲ್ಲಿ ಕೆಲವು ಶ್ರೇಷ್ಠ ಸಾಧನೆಗಳು. ಆದರೆ ನೂರು ಕೋಟಿ ಜನಸಂಖ್ಯೆಯ ದೇಶದ ಅಗತ್ಯಗಳನ್ನು ಪೂರೈಸಲು ಅವು ಸಾಲವು. ಆದ್ದರಿಂದ ಸಂವಿಧಾನದ ನಿರ್ದೇಶಕ ಸೂತ್ರಗಳಲ್ಲಿ ಮತ್ತು ಪೀಠಿಕೆಯಲ್ಲಿ ನೀಡಿದ ಭರವಸೆಗಳು ಬಹುಮಟ್ಟಿಗೆ ಕಾಗದದ ಮೇಲೆಯೇ ಉಳಿದಿವೆ. ಅಂಚೆಯಣ್ಣ ಐವತ್ತೆರಡು ವರ್ಷಗಳ ಹಿಂದೆ ಪತ್ರವನ್ನು ತಲುಪಿಸಿದ, ಆದರೆ ಅದರಲ್ಲೇನಿದೆ ಎಂದು ಓದಲು ನಿರಕ್ಷರತೆ ಅಡ್ಡಿಯಾಗಿದೆ?

ಹೀಗೆ ಪುಕ್ಕಟೆ ಮತ್ತು ಕಡ್ಡಾಯ ಶಿಕ್ಷಣ, ಸಾರ್ವತ್ರಿಕ ಆರೋಗ್ಯ ಮತ್ತು ಆಹಾರ ಭದ್ರತೆಯ ಗುರಿಗಳು ಇನ್ನೂ ದೂರದ ಕನಸುಗಳಾಗಿಯೇ ಉಳಿದಿದ್ದರೆ, ನಾವು ಸಾರಿದ ಹಲವಾರು ಉದ್ದೇಶಗಳು ಇಂದು ಈಡೇರುತ್ತಿಲ್ಲ. ನಮ್ಮ ತಳಪಾಯದ ನಾಲ್ಕು ಸ್ತಂಭಗಳಲ್ಲಿ ಪ್ರತಿಯೊಂದರ ಮೇಲೂ ಬೆದರಿಕೆ ಬಂದಿದೆ -

● ನಮ್ಮ ಸಂವಿಧಾನದ ಧರ್ಮನಿರಪೇಕ್ಷ ಪ್ರಜಾಸತ್ತಾತ್ಮಕ ಹೂರಣ ಕೋಮುವಾದಿ ಶಕ್ತಿಗಳ ಆಕ್ರಮಣಗಳಿಂದ ಕ್ಷಯಗೊಳ್ಳುತ್ತಿದೆ, ಭಾರತವೆಂಬ ಸುಂದರ ನೇಯ್ಗೆಯ ಶ್ರೀಮಂತ ಬಹುಧರ್ಮೀಯ, ಬಹುಭಾಷಾ ಮತ್ತು ಬಹುಸಾಂಸ್ಕೃತಿಕ ಎಳೆಗಳನ್ನು ವ್ಯವಸ್ಥಿತವಾಗಿ ಹಾಳುಗೆಡವಲಾಗುತ್ತಿದೆ.

● ಉದಾರೀಕರಣ, ಖಾಸಗೀಕರಣ, ಜಾಗತೀಕರಣ ಆರ್ಥಿಕ ನೀತಿಗಳು ಈ ಐದು ದಶಕಗಳಲ್ಲಿ ಕಟ್ಟಿದ ಒಂದು ಸ್ವಾವಲಂಬಿ ಆರ್ಥಿಕವನ್ನೂ ತಿಂದು ಹಾಕುತ್ತಿವೆ. ಸ್ವಾವಲಂಬನದ ದಾರಿಯ ಮುಂದೆ ಸಾಗುವ ಬದಲು ದೇಶವನ್ನು ಒತ್ತೆಯಿಡಲಾಗುತ್ತಿದೆ, ಭಾರತದ ಬಹುಪಾಲು ಜನತೆ ಅಭೂತಪೂರ್ವ ಮತ್ತು ಅನಗತ್ಯ ಆರ್ಥಿಕ ಹೊರೆಗಳನ್ನು ಹೊರುವಂತೆ ಮಾಡಲಾಗುತ್ತಿದೆ.

● ಭಾರತೀಯ ರಾಜ್ಯಗಳ ಸಂಘ ಎಂದು ವರ್ಣಿಸಿರುವ ಸಂವಿಧಾನದ ಒಕ್ಕೂಟ ರಚನೆಯ ಮೇಲೆ ಕ್ರಮೇಣ ಧಾಳಿಗಳನ್ನು ಮಾಡಿ ಅದರ ಬದಲು ಒಂದು ಏಕಘಟಕ ರಚನೆ ತರುವ ಪ್ರಯತ್ನ ನಡೆದಿದೆ. ಕೇಂದ್ರ ಮತ್ತು ರಾಜ್ಯಗಳ ನಡುವೆ ಸಂಬಂಧಗಳು ಒಂದು ಆರೋಗ್ಯಕರ ಸಂವಹನವಾಗಿ ಬೆಳೆಯುವ ಬದಲು, ಕ್ರಮೇಣ ಕ್ಷಯಗೊಂಡಿವೆ.

● ಅತ್ಯಂತ ಕೆಟ್ಟ ಸಾಮಾಜಿಕ ದಮನ ಕೋಟಿಗಟ್ಟಲೆ ಜನರನ್ನು ಈಗಲೂ ಒಂದು ಹೀನ ಅಸ್ತಿತ್ವಕ್ಕೆ ಈಡು ಮಾಡಿದೆ. ಜಾತಿ ದಮನ ಮತ್ತು ದಲಿತರು, ಇತರ ಹಿಂದುಳಿದ ಜಾತಿಗಳು ಹಾಗೂ ಬುಡಕಟ್ಟುಗಳ ವಿರುದ್ಧ ಹೀನ ಧಾಳಿಗಳು ಮುಂದುವರೆಯುತ್ತಲೇ ಇವೆ. ಸಾಮಾಜಿಕ ನ್ಯಾಯದ ಗುರಿ ಇನ್ನೂ ದೂರದ ಮಾತಾಗಿದೆ.

ನಾವು ಭಾರತೀಯರು ಈ ಅರ್ಧ ಶತಮಾನ ದಲ್ಲಿ ಇದಕ್ಕಿಂತ ಉತ್ತಮವಾದುದನ್ನು ಸಾಧಿಸಲು ಅಸಮರ್ಥರು ಎಂದು ತೋರಿಸಿಕೊಟ್ಟಿದ್ದೇವೆಯೇ? ಖಂಡಿತವಾಗಿಯೂ ನಮ್ಮ ಕೆಲವು ಸಾಧನೆಗಳು ವಿಶ್ವದ ಅತ್ಯುತ್ತಮ ಸಾಧನೆಗಳನ್ನು ಸರಿಗಟ್ಟುವಂತವು. ಆದರೆ, ನಮ್ಮ ಅಪಾರ ಸಾಮರ್ಥ್ಯವೇನೇಇದ್ದರೂ ನಾವು ಈಗಿರುವ ಪರಿಸ್ಥಿತಿಯಲ್ಲೇ ಇರಲು ಕಾರಣವೇನು? ಏಕೆಂದರೆ ನಾವು ನಮ್ಮ ಮುನ್ನಡೆಗಳನ್ನು ಸಾರ್ವತ್ರಿಕವಾಗಿ ಹಂಚಿಕೊಳ್ಳದ ಬಿಡದ ಒಂದು ವ್ಯವಸ್ಥೆಯಲ್ಲಿ ಸಿಲುಕಿಬಿದ್ದಿದ್ದೇವೆ.

ಅಲ್ಲದೆ ಎಲ್ಲಾ ಭಾರತೀಯರು ನಮ್ಮ ಸಂವಿಧಾನದ ಭವ್ಯ ಗುರಿಗಳ ಈಡೇರಿಕೆಗೆ ಪ್ರಯತ್ನಿಸುತ್ತಿದ್ದರೆ, ಅತ್ತ ತದ್ವಿರುದ್ಧವಾದುದನ್ನೇ ಮಾಡುವ, ಈ ಗುರಿಗಳನ್ನೇ ಬುಡಮೇಲು ಮಾಡುವ ಪ್ರಯತ್ನದಲ್ಲಿರುವ ಒಂದು ರಾಜಕೀಯ ನಾಯಕತ್ವದ ಕೈಯಲ್ಲಿ ಅಧಿಕಾರದ ಸೂತ್ರಗಳಿವೆ. ನಿರಂತರವಾಗಿ ಕೋಮುವಾದಿ ಅಜೆಂಡಾವನ್ನು ಅನುಸರಿಸಿ ಅಂತಿಮವಾಗಿ ಧರ್ಮನಿರಪೇಕ್ಷ ಪ್ರಜಾಸತ್ತಾತ್ಮಕ ಗಣರಾಜ್ಯವನ್ನು ಒಂದು ಅತ್ಯಂತ ಅಸಹಿಷ್ಣು, ದುಷ್ಟ 'ಹಿಂದೂರಾಷ್ಟ್ರ'ವಾಗಿ ಪರಿವರ್ತಿಸುವ ಗುರಿಯಿಂದಾಗಿ ಆಧುನಿಕ ಭಾರತದ ತಳಪಾಯವನ್ನೇ ಧ್ವಂಸ ಮಾಡಲಾಗುತ್ತಿದೆ. ಅದೇ ವೇಳೆಗೆ ತಮ್ಮ ಆರ್ಥಿಕವನ್ನು ಮಾತ್ರವಲ್ಲ, ನಮ್ಮ ವಿದೇಶಾಂಗ ನೀತಿಯನ್ನೂ ಸಾಮ್ರಾಜ್ಯಶಾಹಿ ಹಿತಗಳಿಗೆ ಅಧೀನಗೊಳಿಸಲಾಗುತ್ತಿದೆ.

ಸರಳವಾಗಿ ಹೇಳುವುದಾದರೆ, ನಮ್ಮ ಸಂವಿಧಾನದಲ್ಲಿ ಹೇಳಿದ ಗುರಿಗಳನ್ನು, ಉದ್ದೇಶಗಳನ್ನು ಸಾಕಾರಗೊಳಿಸಲು ಈ ಗಣತಂತ್ರ ದಿನದಂದು ನಾವು ನಿರ್ಧರಿಸುವುದಾದರೆ ಅದಕ್ಕೆ ಮೊದಲ ಹೆಜ್ಜೆಯೆಂದರೆ ಕೇಂದ್ರದಲ್ಲಿನ ಈ ಸರಕಾರವನ್ನು ತೊಲಗಿಸುವುದು. ಇದು ಸುಸ್ಪಷ್ಟ. ಈ ಸರಕಾರ ಅನುಸರಿಸುತ್ತಿರುವ ನೀತಿಗಳು ನಾವು ಒಂದು ದೇಶವಾಗಿ ಏನು ಬೇಕೆಂದು ಸಾರಿದ್ದೇವೋ ಅದಕ್ಕೆ ತದ್ವಿರುದ್ಧವಾಗಿದೆ. ಅಷ್ಟೇ ಅಲ್ಲ, ಈ ವಾಜಪೇಯಿ ನೇತೃತ್ವದ ಸರಕಾರ ರಾಜಕೀಯ ನೈತಿಕತೆಯನ್ನು ಎಷ್ಟರ ಮಟ್ಟಿಗೆ ಅಪಮೌಲ್ಯಗೊಳಿಸಿದೆಯೆಂದರೆ, ಜನತೆಯ ಅಗತ್ಯಗಳನ್ನು ಕಾಣಬಲ್ಲ ಒಂದು ಆಡಳಿತವನ್ನು ನಿರೀಕ್ಷಿಸುವುದೂ ಅಸಾಧ್ಯವಾಗಿದೆ.

ಆದ್ದರಿಂದ ಭಾರತವನ್ನು ಉಳಿಸುವುದು 52ನೇ ಗಣತಂತ್ರ ದಿನದಂದು ನಮ್ಮ ನಿರ್ಧಾರವಾಗಬೇಕು. ಇದು ಸಾಧ್ಯವಾಗಬೇಕಾದರೆ ಈ ಸರಕಾರವನ್ನು ತೊಲಗಿಸುವ ಪ್ರಯತ್ನವನ್ನು ಇಮ್ಮಡಿಗೊಳಿಸಬೇಕು. ಆಗ ಮಾತ್ರವೇ ನಮ್ಮ ಸಂವಿಧಾನದಲ್ಲಿ ಕಂಡರಿಸಿದ ದಿಕ್ಕಿನಲ್ಲಿ ಭಾರತವನ್ನು ಬದಲಿಸುವ ಹಾದಿಯಲ್ಲಿ ನಾವು ಸಾಗಲು ಸಾಧ್ಯ.

ಸಾಮರಸ್ಯ ಕೆಡಿಸಿದ ಸಾಮರಸ್ಯ ಸಭೆ

ಡಿಸೆಂಬರ್ 27 ರಂದಿನ ಕೋಮು ಸೌಹಾರ್ದತಾ ಸಮಾವೇಶದಲ್ಲಿ 10 ಸಾವಿರಕ್ಕೂ ಅಧಿಕ ಜನತೆ ಪಾಲ್ಗೊಂಡು ಕೊಡಗನ್ನು ಕೋಮುವಾದಿಗಳಿಂದ ಉಳಿಸಲು ಪಣ ತೊಟ್ಟ ನಂತರ, ಕಂಗಾಲಾದ ಸಂಘ ಪರಿವಾರ ಮತ್ತೆ ದಳ್ಳುರಿ ಹಬ್ಬಿಸಲು ಸಾಮರಸ್ಯ ಸಭೆ ನಡೆಸಿದರು. ಅದರ ಕರೆ ಶಸ್ತ್ರಸಜ್ಜಿತರಾಗಿ ಎಂದು! ನಂತರ ಆದದ್ದು ಹಾಕತ್ತೂರಿನ ಮಸೀದಿಯ ಮೇಲೆ ಆಕ್ರಮಣ, ಲೂಟಿ...... ಇದು ಚೆಡ್ಡಿಗಳ ಸಂಸ್ಕೃತಿ!.

ಕೊಡಗು

ಕೇವಲ ಶಕ್ತಿ ಪ್ರದರ್ಶನಕಷ್ಟೇ ಸೀಮಿತವಾಗಿ ಮಡಿಕೇರಿಯಲ್ಲಿ ಜನವರಿ 18 ರಂದು ಆರ್.ಎಸ್.ಎಸ್. ಹಾಗೂ ವಿಶ್ವಹಿಂದು ಪರಿಷತ್ ನಡೆಸಿದ ಸಾಮರಸ್ಯ ಸಭೆ ಜನತೆಯಲ್ಲಿ ಸಾಮರಸ್ಯ ಮೂಡಿಸಲು ವಿಫಲವಾಗಿ ಸಾಮರಸ್ಯ ಕದಡುವಲ್ಲಿ ಸಫಲವಾಗಿರುವ ಉದ್ದೇಶಗಳನ್ನು ಈಡೇರಿಸಿಕೊಳ್ಳಲು ಅವರಿಗೆ ಸಾಧ್ಯವಾಯಿತು.

ಬರೆಯಲು ಯೋಗ್ಯವಲ್ಲದ ಕೆಟ್ಟ ಶಬ್ದಗಳಿಂದ ಎ.ಕೆ.ಸುಬ್ಬಯ್ಯನವರನ್ನು ಬಯ್ದದ್ದು ಅವರ ಸಾಧನೆ. ತಾವು ಶಿಸ್ತಿನ ಸಿಪಾಯಿಗಳು ಎನ್ನುವ ಆರ್.ಎಸ್.ಎಸ್. ನವರಿಂದ ಇಂತಹ ಮಾತುಗಳೇ ಎನ್ನುವುದು ಎಲ್ಲರನ್ನು ದಂಗು ಬಡಿಸುವಂತದ್ದು.

ಹೃದಯಗಳ ಜೋಡಣೆ ಮಾಡುತ್ತೇವೆ ಎಂದು ಸಭೆಯ ಉದ್ದೇಶವನ್ನು ಮಚ್ಚಾರಂಡ ಕಾರ್ಯಪ್ಪ ಹೇಳಿ, ಸಭೆಯಲ್ಲಿ ಭಾಷಣ ಮಾಡಿದ ಮುಖ್ಯ ಭಾಷಣಕಾರ ಡಾ. ಪ್ರಭಾಕರ್ ಭಟ್ ಶಸ್ತ್ರಸನ್ನದ್ಧರಾಗಿ ಎಂದು ಕರೆ ನೀಡಿದ್ದು ಯಾವ ಹೃದಯ ಜೋಡಣೆ. ಡಿ. 27 ರಂದು ಜಾತ್ಯಾತೀತ ಶಕ್ತಿಗಳ ಒಕ್ಕೂಟ ಸಭೆಯಲ್ಲಿ ಮುಸ್ಲಿಮರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು. ಅದಕ್ಕೆ ಕಾರಣಗಳು ಇತ್ತು. ಅವರು ತಮಗೆ ಆದ ನೋವನ್ನು ಪ್ರದರ್ಶಿಸಲು ಹತ್ತು ಸಾವಿರಕ್ಕೂ ಮೀರಿ ಸೇರಿದ ಈ ಜನತೆಯಿಂದಲಾಗಲೀ, ನಾಯಕರಿಂದಾಗಲೀ ಒಂದೇ ಒಂದು ಕೆಟ್ಟ ಶಬ್ದಗಳ ಬಳಕೆ ಇರಲಿಲ್ಲ. ಕೇವಲ ಪತ್ರಿಕೆಯೊಂದಕ್ಕೆ ಹಾಗು ಉಸ್ತುವಾರಿ ಸಚಿವರಿಗೆ ಧಿಕ್ಕಾರ ಕೂಗಿದರು. ಅನಂತರ ಎಲ್ಲರೂ ಶಾಂತವಾಗಿ ತಮ್ಮ ಮನೆಗಳಿಗೆ ತೆರಳಿದರು.

ಆದರೆ 18 ರಂದು ಸಾಮರಸ್ಯ ಸಭೆಯಲ್ಲಿ 3-4 ಸಾವಿರದೊಳಗೆ ಇದ್ದ ಜನ ಅತ್ಯಂತ ಕೆಟ್ಟ ಶಬ್ದಗಳ ಬಳಕೆ, ಮತ್ತೊಂದು ಧರ್ಮದ ಬಗ್ಗೆ ಲೇವಡಿ ಆ ನಂತರ ಸಭೆ ಮುಗಿದು ಹೋಗುವಾಗ ಹಾಕತ್ತೂರಿನಲ್ಲಿ ಪ್ರಾರ್ಥನಾ ಮಂದಿರಕ್ಕೆ ನುಗ್ಗಿ ಕಲ್ಲೇಟು, ಇದೇ ಏನು ಅವರ ಸಂಸ್ಕೃತಿ?


ಹಾಕತ್ತೂರು ಮಸೀದಿಯ ಬಳಿ ಬಸ್ಸೊಂದನ್ನು ನಿಲ್ಲಿಸಿ ಮಸೀದಿಗೆ ಹಾನಿ ಮಾಡಲು ತೆರಳಿದ್ದಾಗ ಇದಕ್ಕೆ ಪೊಲೀಸರೇ ಪ್ರತ್ಯಕ್ಷ ದರ್ಶಿಗಳು ಈ ಘಟನೆಯ ಸಂದರ್ಭದಲ್ಲಿ ಮಸೀದಿಯೊಳಗೆ 6 ಜನರಿದ್ದು ಲೆಕ್ಕ ಪತ್ರ ನೋಡುತ್ತಿದ್ದರು. ಮಸೀದಿಗೆ ಧಾಳಿ ಮಾಡಲು ನೋಡುತ್ತಿದ್ದರು. ಮಸೀದಿಗೆ ಧಾಳಿ ಮಾಡಲು ಬಂದದ್ದನ್ನು ಗಮನಿಸಿ ಈ ಪೈಕಿ ಒಬ್ಬ ಬಾಂಗ್ ನೀಡಿದಾಗ ಒಂದಷ್ಟು ಹಂಚುಗಳನ್ನು ಹೊಡೆದು ಅಲ್ಲಿಂದ ಜಾಗ ಖಾಲಿ ಮಾಡಿದ್ದರು.ನಂತರ ಮತ್ತೊಂದು ಬಸ್ಸು ಅಲ್ಲಿ ನಿಲ್ಲಿಸಿ ಮತ್ತೆ ಕಲ್ಲು ತೂರಾಟ ಮಾಡಲು ಪ್ರಯತ್ನಿಸಿದಾಗ ಅಷ್ಟರಲ್ಲೇ ಅಲ್ಲಿ ಸೇರಿದ್ದ ಜನರಿಗೂ ಬಸ್ಸಿನಲ್ಲಿರುವವರಿಗೂ ಮಾರಾಮಾರಿ ನಡೆದು ನಂತರ, ಅಲ್ಲಿ ನಿಲ್ಲಿಸಿ ಅಲ್ಲಿರುವ ಮಿಠಾಯಿ ಅಂಗಡಿಯ ಅಲ್ಪಸಂಖ್ಯಾತರ ಅಂಗಡಿಗಳು ಯಾವುದು ಎಂದು ವಿಚಾರಿಸಿ ಅಲ್ಲಿಂದ ಅಂಗಡಿಗಳನ್ನು ಧ್ವಂಸಗೊಳಿಸಲು ಪ್ರಯತ್ನಿಸಿದ್ದಾರೆ. ಆ ಸಂದರ್ಭದಲ್ಲಿ ಕೂಡಾ ಎರಡೂ ಬಣದವರೊಳಗೆ ಮಾರಾಮಾರಿ ನಡೆದಿದೆ. ಇವೆಲ್ಲಾ ಪೂರ್ವ ನಿಯೋಜಿತ ಕ್ರಮ ಎನ್ನುವುದಕ್ಕೆ ಬಸ್ಸಿನಲ್ಲಿ ಸಾಕಷ್ಟು ಕಲ್ಲುಗಳು ಇದ್ದವು ಎನ್ನುವುದು ಸಾಕ್ಷಿ.

ಇವೆಲ್ಲಾ ಘಟನೆಗಳಿಗೆ ತಾವೇ ಕಾರಣರಾಗಿ ಅಲ್ಪಸಂಖ್ಯಾತರಿಗೆ ಬಹಿಷ್ಕಾರ ಹಾಕಲು ಈಗ ಜಿಲ್ಲಾ ಬಿಜೆಪಿ ಕರೆ ನೀಡಿದೆ. ಇಂದು ಸಾಮಾಜಿಕ ಬಹಿಷ್ಕಾರ ಅಪರಾಧವಾಗಿದ್ದರೂ ಈ ರೀತಿ ಬಹಿರಂಗವಾಗಿ ಬಹಿಷ್ಕಾರಕ್ಕೆ ಕರೆ

ಸಮ್ಮೇಳನ ನಡೆಯುವ ಈ ಸಂದರ್ಭ

- ಅನಿಲ್ ಬಿಸ್ವಾಸ್

ಸಿಪಿಐ(ಎಂ)ನ 17ನೇ ಮಹಾಧಿವೇಶನದ ಪೂರ್ವಭಾವಿಯಾಗಿ ಎಲ್ಲಾ ರಾಜ್ಯಗಳಲ್ಲಿಯೂ ಸಮ್ಮೇಳನಗಳು ಜರುಗುತ್ತಿವೆ. ಇದು ದುಡಿಯುವ ವರ್ಗದ ಅತ್ಯಂತ ಐತಿಹಾಸಿಕ ನಿರ್ಣಾಯಕವಾದ ಪ್ರಕ್ರಿಯೆ. ಜಗದ-ಆಗುಹೋಗುಗಳ ವಿದ್ಯಮಾನಗಳನ್ನು ಮಾರ್ಕ್ಸ್‌ವಾದ-ಲೆನಿನ್‌ವಾದದ ಆಳ ವಿಶ್ಲೇಷಣೆಗಳಿಂದ ಮಥ ಮಾಡಲಾಗುತ್ತಿದೆ. ಈ ಸಮ್ಮೇಳನಗಳು ಜರುಗುತ್ತಿರುವ ಸಂದರ್ಭದ ಮುಖ್ಯ ತಿರುಳನ್ನು ಸಂಕ್ಷಿಪ್ತವಾಗಿ ಬಿಡಸಿಟ್ಟಿದ್ದಾರೆ ಸಿಪಿಐ(ಎಂ)ನ ಪ.ಬಂಗಾಳದ ರಾಜ್ಯ ಕಾರ್ಯದರ್ಶಿ ಹಾಗೂ ಪೊಲಿಟ್‌ಬ್ಯೂರೋ ಸದಸ್ಯರಾದ ಅನಿಲ್ ಬಿಸ್ವಾಸ್‌ರವರು.



ತನ್ನ 17ನೇ ಮಹಾಧಿವೇಶನವನ್ನು ಮುಂದಿಟ್ಟುಕೊಂಡು, ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ಯ ಸಮ್ಮೇಳನಗಳ ಪ್ರಕ್ರಿಯೆಯು ಘಟಕದಿಂದಿಡಿದು ಎಲ್ಲಾ ಹಂತಗಳಲ್ಲಿ ಆರಂಭಗೊಳ್ಳಲಿದೆ. ಪಕ್ಷದ ಸಮ್ಮೇಳನವೆಂಬುದು ಒಂದು ಸಾಮಾನ್ಯ ಪ್ರಕ್ರಿಯಯೆಂದು ನಾವು ಭಾವಿಸಬೇಕಿಲ್ಲ. ಪಕ್ಷದ ಸಮ್ಮೇಳನವೆಂದರೆ ಅದು ಪಕ್ಷವನ್ನು ರಾಜಕೀಯವಾಗಿ ಸಂಘಟನಾತ್ಮಕವಾಗಿ ಗಟ್ಟಿಗೊಳಿಸುವ ಪ್ರಕ್ರಿಯೆ. ಪಕ್ಷವನ್ನು ವಿಶಾಲವಾಗಿ ಬೆಳೆಸುವ ಕಣ್ಣೋಟ ಹೊಂದಿರುವ ಈ ಪ್ರಕ್ರಿಯೆಯಲ್ಲಿ ಪಕ್ಷದ ಪ್ರತಿಯೊಬ್ಬ ಸದಸ್ಯನಿಗೂ ಒಂದು ಪಾತ್ರವಿದೆ.

ಪಕ್ಷದ ಕೆಲಸಗಳು ನಿರ್ದಿಷ್ಟ ಸನ್ನಿವೇಶ, ನಿರ್ದಿಷ್ಟ ಕಣ್ಣೋಟ ಮತ್ತು ನಿರ್ಧಿಷ್ಟ ಗುರಿಯಿಂದ ನಿರ್ವಹಿಸಲ್ಪಡುತ್ತದೆ. ಪಕ್ಷದ ಸಮ್ಮೇಳನವು ಈ ಅಂಶಗಳಿಂದಲೇ ಈ ಮೇಲಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಒಂದು ಕಣ್ಣೋಟ ನೀಡಲು ಇಲ್ಲಿ ಪ್ರಯತ್ನಿಸಲಾಗಿದೆ.

ಸುಮಾರು ಒಂದು ದಶಕದ ಹಿಂದೆ, ವಿಶೇಷವಾಗಿ ಸೋವಿಯತ್ ಒಕ್ಕೂಟ ಮತ್ತು ಪೂರ್ವಯೂರೋಪಿನ ದೇಶಗಳಲ್ಲಿ ಸಮಾಜವಾದದ ಹಿನ್ನಡೆ ಜಗತ್ತಿನ ಬಲಬಲಾಗಳನ್ನು ಸಾಮ್ರಾಜ್ಯಶಾಹಿಯ ಪರವಾಗಿ ಬದಲಿಸಿದೆ. ಕಳೆದೊಂದು ದಶಕದ ಅವಧಿಯಲ್ಲಿ ಜಗತ್ತಿನಾದ್ಯಂತ ಸಾಮ್ರಾಜ್ಯಶಾಹಿಯು ತನ್ನ ರಾಜಕೀಯ, ಆರ್ಥಿಕ ಯಜಮಾನಿಕೆಯನ್ನು ಹೇರಲು ಅನುಕೂಲಕರ ಸನ್ನವೇಶವನ್ನು ಹೊಂದಿದೆ. ಈ ಅವಧಿಯಲ್ಲಿ ವಾಸ್ತವವಾಗಿ ಜಾಗತೀಕರಣದ ಹೆಸರಿನಲ್ಲಿ ಸಾಮ್ರಾಜ್ಯಶಾಹಿ ಬಂಡವಾಳದ ಹೂಡಿಕೆಯು ತಡೆಯಿಲ್ಲದೆ ಸಾಗಿದೆ. ಐ.ಎಂ.ಎಫ್. ವಿಶ್ವಬ್ಯಾಂಕ್ ಮತ್ತು ವಿಶ್ವ ವ್ಯಾಪಾರ ಸಂಸ್ಥೆಗಳು, ಜಾಗತೀಕರಣದ ಮೂರು ಆಧಾರ ಸ್ಥಂಭಗಳಾಗಿವೆ. ನಮ್ಮದೇಶವನ್ನು ಒಳಗೊಂಡು ಭೂಗೋಳದ ವಿವಿಧ ಭಾಗಗಳಲ್ಲಿ ಬಹುರಾಷ್ಟ್ರೀಯ ಕಂಪನಿಗಳ ಬಂಡವಾಳದ ಹೂಡಿಕೆಯಾಗಿದೆ. ಮತ್ತು ಬಹುರಾಷ್ಟ್ರೀಯ ಸಂಸ್ಥೆಗಳ ಬಯಕೆಯ ಆರ್ಥಿಕ ನೀತಿಗಳನ್ನು ಜಾರಿಗೆ ತರಲಾಗಿದೆ.

ಈ ಬಂಡವಾಳಶಾಹಿ ಜಾಗತೀಕರಣವು ಜಗತ್ತಿಗೆ ಏನು ನೀಡಿದೆ? ಮತ್ತು ಏನನ್ನು ನಿರೀಕ್ಷಿಸಬಹುದು? ಬಹುಮುಖ್ಯವಾಗಿ ಅಸಮಾನತೆಯ ತೀವ್ರತೆಯಲ್ಲಿ ಹೆಚ್ಚಳವಾಗಿದೆ. ಎಂಟು ದೇಶಗಳ 100 ಬಹುರಾಷ್ಟ್ರೀಯ ಕಂಪನಿಗಳ ಆಸ್ತಿಯು 45 ದೇಶಗಳ ರಾಷ್ಟ್ರೀಯ ವರಮಾನಕ್ಕೆ ಸಮನಾಗಿದೆ.

ಕುಸಿತ - ವಿನಾಶ

ಕಳೆದೊಂದು ದಶಕದಲ್ಲಿ ಉದಾರೀಕರಣ ನೀತಿಗಳನ್ನು ಜಾರಿಗೊಳಿಸಿದ ದೇಶಗಳಲ್ಲಿ ರಾಷ್ಟ್ರೀಯ ವರಮಾನ ಕಡಿಮೆಯಾಗಿದೆ. ಜನರ ತಲಾ ಆಯಸ್ಸು ಕಡಿಮೆಯಾಗಿದೆ, ಶಿಶು ಮರಣ ಪ್ರಮಾಣ ಹೆಚ್ಚಾಗಿದೆ. ಶೈಕ್ಷಣಿಕ ಪ್ರಗತಿ ಕುಂಠಿತಗೊಂಡಿದೆ ಮತ್ತು ಜನರ ಜೀವನ ಮಟ್ಟ ಕುಸಿತಗೊಂಡಿದೆ. ಭಾರತವನ್ನು ಸೇರಿದಂತೆ ಹಲವು ರಾಷ್ಟ್ರಗಳಲ್ಲಿ ಸ್ವಾವಲಂಬಿ, ಯೋಜಿತ ಆರ್ಥಿಕತೆ ನಾಶವಾಗಿದೆ, ಸಾಮಾಜಿಕ ಮೌಲ್ಯಗಳು ಕುಸಿದಿವೆ. ಈ ಎಲ್ಲಾ ಸಂಧರ್ಭಗಳಲ್ಲಿ ದುಡಿಯುವ ವರ್ಗ ಬಲಿಪಶುವಾಗಿದೆ.

ಅಭಿವೃದ್ಧಿ ಎಲ್ಲಿ

ಈ ಎಲ್ಲಾ ಅನುಕೂಲಕರ ಸನ್ನಿವೇಶಗಳಿದ್ದರೂ ಬಂಡವಾಳಶಾಹಿಯು ತನಗೆ ಮಾನವ ಸಮಾಜದ ಮೂಲಭೂತ ಸಮಸ್ಯೆಗಳನ್ನು ಬಗೆಹರಿಸಲು ವಿಫಲವಾಗಿದೆ ಮತ್ತು ಬಿಕ್ಕಟ್ಟು ತನ್ನಲ್ಲೇ ಅಂತರ್ಗತವಾಗಿದೆ ಎಂದು ತೋರಿಸಿದೆ. ಈ ಸಂದರ್ಭದಲ್ಲೇ ಆಳವಾದ ಆರ್ಥಿಕ ಬಿಕ್ಕಟ್ಟಿನಿಂದಾಗಿ ಆರ್ಥಿಕತೆಯಲ್ಲಿ ಕುಸಿತವನ್ನು ಕಾಣುತ್ತಿದ್ದೇವೆ. ಮುಂದುವರೆದ ದೇಶಗಳನ್ನು ಒಳಗೊಂಡಂತೆ ಜಗತ್ತಿನಾದ್ಯಂತ ನಿರುದ್ಯೋಗ ಅಪಾಯಕಾರಿ ಮಟ್ಟ ಮುಟ್ಟಿದೆ. ಕಳೆದ 4 ತಿಂಗಳಲ್ಲಿ ಅಮೇರಿಕಾ ಒಂದರಲ್ಲೇ 6 ಲಕ್ಷ ಜನರು ಉದ್ಯೋಗ ಕಳೆದುಕೊಂಡಿದ್ದಾರೆ. ಮೂರನೇ ಜಗತ್ತಿನ ರಾಷ್ಟ್ರಗಳಲ್ಲಿ ಸಾಮ್ರಾಜ್ಯಶಾಹಿ ನಿರ್ದೇಶಿತ ಆರ್ಥಿಕ ನೀತಿಗಳನ್ನು ಭ್ರಮೆಯಲ್ಲಿ ಅನುಸರಿಸಿದ ಪರಿಣಾಮವಾಗಿ ಅಬಿವೃದ್ಧಿ ಎಂಬುದೇ ಅಳಿಸಿಹೋಗಿದೆ.

ಜಾಗತೀಕರಣದ ವಿರುದ್ಧ ಪ್ರತಿರೋಧ

ಒಂದು ದಶಕದ ಹಿಂದೆ ಯಾರೂ ಇದನ್ನು ಊಹಿಸಿರಲಿಲ್ಲ, ಆದರೆ ಈಗ ಸತ್ಯದ ಅರಿವಾಗಿ ಜಾಗತೀಕರಣದ ವಿರುದ್ಧ ಜಗತ್ತಿನಾದ್ಯಂತ ಪ್ರತಿರೋದವೆದ್ದಿದೆ. ಈ ಪ್ರತಿರೋದ ಈಗ ಅಂತರ ರಾಷ್ಟ್ರೀಯ ಸ್ವರೂಪ ಪಡೆದುಕೊಂಡಿದೆ. ದುಡಿಯುವ ವರ್ಗದ ಜೊತೆಗೆ ಸಮಾಜದ ವಿವಿಧ ವಿಭಾಗದ ಜನರು, ವಿವಿಧ ವಿಚಾರದ ಜನತೆಯೂ ಕೂಡ ಈ ಮುಖ್ಯ ಪ್ರತಿರೋದದ ಪ್ರವಾಹದಲ್ಲಿ ಸೇರಿದ್ದಾರೆ. ಜಿ-8 ಸಮಿತಿಯ ಸಭೆಯ ಸಂದರ್ಭದಲ್ಲಿನ ಪ್ರತಿಭಟನೆಯು ಈ ರೀತಿಯ ಚಳುವಳಿಯ ಸೂಚನೆಯಷ್ಟೆ.

ಗಮನಾರ್ಹ ವಿಚಾರವೆಂದರೆ, ಸೆ. 11ರ ಘಟನೆಯ ನಂತರ ಭಯೋತ್ಪಾದಕರ ಕೃತ್ಯವನ್ನು ಖಂಡಿಸುವಾಗಲೇ ಅದೇ ಜನರು ಅಮೇರಿಕಾದ ಯುದ್ಧದ ಪ್ರಯತ್ನಗಳನ್ನು ಖಂಡಿಸಿದರು. ಅತ್ಯಂತ ಕಡಿಮೆ ಅವದಿಯಲ್ಲೇ ಅಮೇರಿಕಾವನ್ನು ಒಳಗೊಂಡಂತೆ ಇಡೀ ಯೂರೋಪಿನ, ಏಷ್ಯಾದ, ಲ್ಯಾಟಿನ್ ಅಮೇರಿಕಾ ಮತ್ತು ಆಫ್ರಿಕಾದ ದೇಶಗಳಲ್ಲಿ ಅಮೇರಿಕನ್ ಯುದ್ದದ ವಿರುದ್ಧ ಬೃಹತ್ ಪ್ರತಿಭಟನೆಗಳನ್ನು, ರ್ಯಾಲಿಗಳನ್ನು ಸಂಘಟಿಸಲಾಯಿತು.

ಭಯೋತ್ಪಾದನೆ

ಸಾಮ್ರಾಜ್ಯಶಾಹಿ, ವಿಶೇಷವಾಗಿ ಅಮೇರಿಕಾ ತಾನೇ ಬೆಳೆಸಿದ ಭಯೋತ್ಪಾದನೆ ಯನ್ನು ಮುಂದಿಟ್ಟಕೊಂಡು ಅಫಘಾನಿಸ್ತಾನದಲ್ಲಿ ಮಿಲಿಟರಿ ಮಧ್ಯಪ್ರವೇಶ ವನ್ನು ಆರಂಭಿಸಿತು ಮತ್ತು ಈ ಮಧ್ಯಪ್ರವೇಶ ಧೀರ್ಘಕಾಲೀನ ಹಾಗೂ ಜಗತ್ತಿನ ಬೇರೆ, ಬೇರೆ ಭಾಗಗಳಲ್ಲಿ ಈ ರೀತಿ ಮಧ್ಯಪ್ರವೇಶಿಸುತ್ತೇವೆ ಎಂದು ಘೋಷಿಸಿತು. ವಾಸ್ತವವಾಗಿ ಈ ಆಕ್ರಮಣ ಅಮೇರಿಕಾವು ತನ್ನ ರಾಜಕೀಯ ಮಿಲಿಟರಿ ಯಜಮಾನಿಕೆಯನ್ನು ಜಗತ್ತಿನ ವಿವಿದ ಭಾಗಗಳಲ್ಲಿ ಹೇರುವ ಪ್ರಯತ್ನದ ಭಾಗ. ಈ ಹಳೆಯ ಉದ್ದೇಶವು ಅಮೇರಿಕಾಕ್ಕೆ ಮಧ್ಯಏಶ್ಯಾ ಮತ್ತು ದಕ್ಷಿಣ ಏಷ್ಯಾದಲ್ಲಿ ತಾನು ಮೇಲುಗೈ ಸಾಧಿಸುವುದಾಗಿದೆ. ಇದು ಅಂತಿಮವಾಗಿ ನಮ್ಮ ದೇಶಕ್ಕೆ ಮಾರಕವಾಗುತ್ತದೆ.

ಅಮೆರಿಕಾಕ್ಕೆ ಅಡಿಯಾಳು

ಅಮೇರಿಕಾದ ಮೇಲೆ ಭಯೋತ್ಪಾದಕರ ದಾಳಿಗಳು ನಡೆಯುವ ಮುನ್ನವೇ ವಾಜಪೇಯಿ ನೇತೃತ್ವದ ಕೇಂದ್ರದ ಎನ್.ಡಿ.ಎ. ಸರ್ಕಾರವು ಅಮೇರಿಕಾದ ಜೊತೆ ಸೇರಿಕೊಳ್ಳಲು ಅತ್ಯುತ್ಸುಕವಾಗಿತ್ತು. ಭಾರತವು ತನ್ನ ಅಲಿಪ್ತ ದೋರಣೆಗೆ ತಿಲಾಂಜಲಿ ಹೇಳಿ ಅಮೇರಿಕಾ ಜೊತೆ ಮಿಲಿಟರಿ ಸಹಕಾರಗಳನ್ನು ಏರ್ಪಡಿಸಿತು. ಭಯೋತ್ಪಾದಕರಿಗೆ ಸಹಾಯ ಹಸ್ತ ನೀಡುತ್ತಿರುವ ಪಾಕಿಸ್ತಾನದಂತೆಯೇ ಭಾರತವನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳಲು ಅಮೇರಿಕಾ ಬಯಸಿತು. ಈಗ ಅತ್ಯಂತ ಪ್ರಮುಖ ವಿಚಾರವೆಂದರೆ ಸಾಮ್ರಾಜ್ಯಶಾಹಿ ವಿರುದ್ಧದ ಪ್ರತಿಭಟನೆಯನ್ನು ಹೆಚ್ಚಿಸುವುದು ಮತ್ತು ಭಾರತದ ಮೇಲಿನ ಸಾಮ್ರಾಜ್ಯಶಾಹಿ ಯಜಮಾನಿಕೆ ವಿಸ್ತರಿಸುವ ಪ್ರಯತ್ನಗಳನ್ನು ತಡೆಗಟ್ಟುವುದು.

ಸಮಾಜವಾದದೆಡೆಗೆ

ಒಂದು ದಶಕದ ಹಿಂದೆ ಸಮಾಜವಾದಕ್ಕೆ ಹಿನ್ನಡೆಯಾದಾಗ ಸಮಾಜವಾದ ಒಂದು ಸಿದ್ಧಾಂತವಾಗಿ ಸತ್ತಿತು ಎಂಬ ವ್ಯಾಪಕ ಪ್ರಚಾರ ಮಾಡಲಾಯಿತು. ಆಗ ಸಿಪಿಐ(ಎಂ) ಪಕ್ಷವು

ಉದಾರೀಕರಣ ಮತ್ತು ಕೋಮುವಾದದ ವಿರುದ್ಧದ ಹೋರಾಟ

ಆರ್ಥಿಕ ಉದಾರೀಕರಣದಿಂದಾಗಿ ದೇಶದಲ್ಲಿ ಮಾರಕವಾದ ಪರಿಣಾಮಗಳು ಸಂಭವಿಸಿದೆ. ದೇಶದ ಸ್ವಾವಲಂಬನೆಯ ಗಂಭೀರ ಧಾಳಿಗೆ ಗುರಿಯಾಗಿದೆ. ಆರ್ಥಿಕಾಭಿವೃದ್ಧಿಯು ಕುಂಠಿತಗೊಂಡಿದೆ. ಇದೆಲ್ಲದರ ಗಂಭೀರ ಹೊಡೆತಕ್ಕೆ ಸಿಕ್ಕಿರುವವರು ದುಡಿಯುವ ವರ್ಗ. 1991ರಲ್ಲಿ ಹೊಸ ಆರ್ಥಿಕ ನೀತಿಗಳನ್ನು ಜಾರಿಗೊಳಿಸಲು, ಆರಂಭಿಸಿದಾಗ ಸಿಪಿಐ(ಎಂ) ಮತ್ತು ಇತರೇ ಎಡಪಕ್ಷಗಳು ಇದನ್ನು ನೇರವಾಗಿ ರಸ್ತೆಗಳಿದು ಪ್ರತಿಭಟಿಸಿದವು. ನಾವು ಈ ನೀತಿಗಳು ಪರಾಕಾಷ್ಟೇ ಮುಟ್ಟುವ ಹಂತಕ್ಕೊ ತಲುಪುವ ಆರಂಭದಲ್ಲೆ ಈ ನೀತಿಗಳ ವಿರುದ್ಧದ ಪ್ರತಿಭಟನೆಯನ್ನು ಮೊಳಗಿಸಿದವು. ಸೆಪ್ಟೆಂಬರ್ 1991 ರಲ್ಲಿ ಅಖಿಲ ಭಾರತ ಮುಷ್ಕರವನ್ನು ಸಾಧ್ಯವಾದಷ್ಟು ಹೋರಾಟಗಳನ್ನು ಬೆಳೆಸಿದ್ದೇವೆ. ನಮಗೆ ಅಂದರೆ ಎಡಪಕ್ಷಗಳಿಗೆ ಆಳುವ ವರ್ಗದ ಇತರೆ ಪಕ್ಷಗಳಿಗೆ ಇರುವಂತೆ, ಈ ಆರ್ಥಿಕ ನೀತಿಗಳ ಬಗ್ಗೆ ಯಾವ ಮುಲಾಜು ಇಲ್ಲ. ಈ ನೀತಿಗಳು ಎಲ್ಲಾ ವಿಭಾಗದ ಜನತೆಯ ಮೇಲೆ ಮಾರಕ ಪರಿಣಾಮಬೀರಿವೆ. ಇವು ಕಾರ್ಮಿಕರ, ನೌಕರರ, ಮಧ್ಯಮವರ್ಗದ ಮತ್ತು ಇತರೇ ಜನ ವಿಭಾಗದ ಆಕ್ರೋಶಕ್ಕೆ ಗುರಿಯಾಗಿವೆ. ಈ ಎಲ್ಲಾ ಜನವಿಭಾಗವು, ಈ ನೀತಿಗಳ ವಿರುದ್ಧದ ಹೋರಾಟದಲ್ಲಿ ಕೈಜೋಡಿಸಿದ್ದಾರೆ.

ಅಷ್ಟೊಂದು ದೊಡ್ಡ ಶಕ್ತಿ ಅಲ್ಲದಿದ್ದರೂ, ಸಿಪಿಐ(ಎಂ) ಮತ್ತು ಇತರೆ ಎಡ ಪಕ್ಷಗಳು ಈ ನೀತಿಗಳನ್ನು ಪ್ರತಿರೋಧಿಸುವಲ್ಲಿ ಮುಂದಿವೆ. ನಮ್ಮ ಪ್ರಯತ್ನದ ಫಲವಾಗಿ ಅನೇಕ ಚಳುವಳಿಗಳನ್ನು ಮುಂಚೂಣಿಯಲ್ಲಿದ್ದೇವೆ. ಸೈದ್ಧಾಂತಿಕವಾಗಿ ಎಡಪಂಥೀಯರು ಮಾತ್ರವೇ ಕೋಮುವಾದಿ ಶಕ್ತಿಗಳಿಗೆ ದೊಡ್ಡ ಸವಾಲಾಗಿದ್ದಾರೆ. **ಕೋಮುವಾದದ ವಿರೋಧಿ ಹೋರಾಟವು ಒಂದು ಧೀರ್ಘಕಾಲಿನ ಸುಧೀರ್ಘ ಪ್ರಕ್ರಿಯೆ** ಕೋಮುವಾದವು ನಮ್ಮ ಸಮಾಜದಲ್ಲಿ ಆಳವಾಗಿ ಬೇರುಬಿಟ್ಟಿದೆ. ಕೋಮುವಾದದ ಪ್ರಭಾವದಿಂದ ಬಡವರು, ಮಧ್ಯಮವರ್ಗ, ಮತ್ತು ದುಡಿಯುವ ಜನತೆಯನ್ನು ರಕ್ಷಿಸುವುದು ಆದ್ಯ ಕರ್ತವ್ಯವಾಗಬೇಕಿದೆ. ಈ ಎರಡು ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಜಾತ್ಯಾತೀತ ಶಕ್ತಿಗಳನ್ನು ಕನಿಷ್ಠ ಕಾರ್ಯಕ್ರಮದ ಆಧಾರದಲ್ಲಿ ಒಗ್ಗೂಡಿಸಬೇಕಾಗಿದೆ. ನಾವು ಮೂರನೇ ರಂಗವನ್ನು ಕಟ್ಟಲು ಪ್ರಯತ್ನಿಸುತ್ತಿದ್ದೇವೆ. ಈ ಸಂದರ್ಭದಲ್ಲಿ "ಪೀಪಲ್ಸ್ ಫ್ರಂಟ್"

ಬಲವಾಗಿ ಸಮರ್ಥಿಸಿಕೊಂಡಿತು. ಆ ಸಮಯದಲ್ಲಿ ಮತ್ತು ನಮ್ಮ ಪಕ್ಷದ ಕಾರ್ಯಕ್ರಮವನ್ನು ಸಮಕಾಲೀನಗೊಳಿಸಿದ ಸಂದರ್ಭದಲ್ಲಿ ಕೂಡ ನಾವು ಸಮಾಜವಾದವನ್ನು ಸಂಪೂರ್ಣವಾಗಿ ಸಮರ್ಥಿಸಿಕೊಂಡೆವು. ಸಮಾಜವಾದಿ ವ್ಯವಸ್ಥೆಯ ಅನುಭವವು, ನಾವು ಕಳೆದೊಂದು ಶತಮಾನದಲ್ಲಿ ನೋಡಿರುವಂತೆ, ಜಗತ್ತಿಗೆ ಒಂದು ಹೊಸ, ಉನ್ನತವಾದ ಹಾದಿಯನ್ನು ತೋರಿಸಿದೆ ಎಂದು ಸಮರ್ಥಿಸಿಕೊಂಡೆವು.

ಅಳಿಸಲಾಗದ ಸಾಧನೆ

ಸೋವಿಯತ್ ರಷ್ಯಾದ ಮತ್ತು ಯೂರೋಪಿನ ಬಹುಸಂಖ್ಯಾತ ಜನತೆ ಹೊಸ ಜೀವನದ ದಾರಿಯ ಸವಿಯನ್ನುಂಡಿದ್ದಾರೆ. ದುಡಿಯುವ ವರ್ಗ ಅಧಿಕಾರ ಪಡೆದುಕೊಂಡಿದೆ. ಬಡತನ, ನಿರುದ್ಯೋಗ ಮತ್ತು ಅನಕ್ಷರತೆಯುನ್ನು ಸಂಪೂರ್ಣವಾಗಿ ತೊಡೆದುಹಾಕಲಾಗಿದೆ. ಜನರ ಕನಿಷ್ಠ ಅಗತ್ಯಗಳ ಪೂರೈಕೆಯಲ್ಲಿ ಅದ್ಭುತ ಸಾಧನೆ, ಸಾಮಾಜಿಕ ಭದ್ರತೆಯ ವ್ಯಾಪಕ ವಿಸ್ತರಣೆ, ಅತಿಹಿಂದುಳಿದ ಜನಾಂಗೀಯ ಗುಂಪುಗಳ ಅಭಿವೃದ್ಧಿ ಸಮಾಜವಾದಿ ದೇಶಗಳ ಅದ್ಭುತ ಸಾಧನೆಗಳು. ಈ ಸಾಧನೆಗಳು ಕೇವಲ ಸಮಾಜವಾದಿ ದೇಶಗಳಿಗಷ್ಟೆ ಅಲ್ಲ, ಸಾಧನೆಯ ಪ್ರತಿಫಲನಗಳು ಬಂಡವಾಳಶಾಹಿ ದೇಶಗಳಲ್ಲೂ ಕಾಣಿಸಿಕೊಂಡವು. ಬಂಡವಾಳಶಾಹಿ ದೇಶಗಳು ಜನಪರ ನೀತಿಗಳನ್ನು ಅನುಸರಿಸುವ ಒತ್ತಾಯಕ್ಕೊಳಗಾದವು. ಸಮಾಜವಾದಿ ವ್ಯವಸ್ಥೆಯ ಪ್ರಭಾವದಿಂದ ಹಲವಾರು ದೇಶಗಳ ಆಳುವ ವರ್ಗಗಳು ದುಡಿಯುವ ವರ್ಗದ ಹಕ್ಕುಗಳನ್ನು ಒಪ್ಪಿಕೊಳ್ಳಬೇಕಾಯಿತು. ಸಮಾಜವಾದ ಮತ್ತು ಸಮಾಜವಾದಿ ಕ್ರಾಂತಿಯು ಆಧುನಿಕ ನಾಗರೀಕತೆಯ ಮೇಲೆ ಅಳಿಸಲಾರದ ಮುದ್ರೆಯೊತ್ತಿವೆ.

ಮತ್ತೊಂದೆಡೆ ಸಮಾಜವಾದಿ ವ್ಯವಸ್ಥೆ ನಿರ್ಮಾಣದ ಹಾದಿಯಲ್ಲಿ ಸಂಭವಿಸಿದ ವಿಕೃತಗಳ ಬಗ್ಗೆಯೂ ಅಷ್ಟೆ ಗಂಭೀರ ಆಸಕ್ತಿ ವಹಿಸಬೇಕು. ಈ ರೀತಿಯ ಐತಿಹಾಸಿಕ ಅನುಭವದ ವಿಕಾಸವು ಸುಲಭದ ಕೆಲಸವಲ್ಲ ಎಂಬುದು ಉಲ್ಲೇಖನೀಯ. ನಾವು ಕೆಲವು ತಪ್ಪುಗಳನ್ನು ಗುರುತಿಸಿಕೊಂಡಿದ್ದೇವೆ, ಅವೆಂದರೆ, ಸಮಾಜವಾದದ ದಾರಿಯು ಸುಧೀರ್ಘವಾದುದು ಎಂಬುದನ್ನು ಅರ್ಥಮಾಡಿಕೊಳ್ಳದೇ ಹೋದುದು. ಇದು ಹಲವು ಕ್ಷೇತ್ರಗಳಲ್ಲಿ ಪ್ರತಿಪಲಿಸಿದೆ ಕೇವಲ ವಿಜ್ಞಾನ, ತಂತ್ರಜ್ಞಾನದ ಪ್ರಗತಿ ಮತ್ತು ಕೈಗಾರಿಕೀಕರಣವೇ ಸಮಾಜವಾದವಲ್ಲ, ನಮಗೆ ಪಕ್ಷ ಮತ್ತು ಪ್ರಭುತ್ವದ ಪಾತ್ರದ ಬಗ್ಗೆ ತಪ್ಪು ಕಣ್ಣೋಟವಿತ್ತು, ಪಕ್ಷ ಮತ್ತು ಪ್ರಭುತ್ವ (ಸರ್ಕಾರ)ವನ್ನು ಸಮ್ಮಿಲನಗೊಳಿಸಿದ್ದು ಅಪಾಯಕ್ಕೊಡ್ಡಿತು. ಬಂಡವಾಳಶಾಹಿ ಪ್ರಜಾಪ್ರಭುತ್ವಕ್ಕಿಂತ ಖಂಡಿತವಾಗಿ ಸಮಾಜವಾದಿ ಪ್ರಜಾಪ್ರಭುತ್ವ ಅಭಿವೃದ್ಧಿಹೊಂದಿತ್ತು, ಆದರೆ ಇದನ್ನು ವಿಸ್ತರಿಸುವಲ್ಲಿ ಸಮಸ್ಯೆಗಳಾದವು. ಸೈದ್ಧಾಂತಿಕ ಕಣ್ಣೋಟದಲ್ಲುಂಟಾದ ತಪ್ಪುಗಳು ಸಮಾಜವಾದದ ನೆಲೆಯನ್ನು ಅಭದ್ರಗೊಳಿಸಿದವು. ನಮ್ಮ ದೇಶದಲ್ಲಿ ಕೂಡ ಜಾಗತಿಕವಾಗಿ ಬದಲಾದ ಸನ್ನಿವೇಶದ ಅಗತ್ಯಗಳಿಗೆ ಅನುಗುಣವಾಗಿ ಮುಂದುವರೆಯಬೇಕು ಮತ್ತು ಸಮಾಜವಾದ ವ್ಯವಸ್ಥೆಯ ಸ್ಥಾಪನೆಗೆ ಹೋರಾಡುವಾಗ ಹೊಸ ಅಂಶಗಳನ್ನು ಅಗತ್ಯಗನುಗುಣವಾಗಿ ಸೇರಿಸಿಕೊಳ್ಳುತ್ತಿರಬೇಕು. ಇಂತಹ ಸನ್ನಿವೇಶದಲ್ಲಿ ಚೀನಾ, ವಿಯೆಟ್ನಾಂ, ಕ್ಯೂಬಾ ದೇಶಗಳಲ್ಲಿ ಸಮಾಜವಾದವನ್ನು ಕಟ್ಟುವಾಗಿನ ಅನುಭವಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು.

17ನೇ ರಾಜ್ಯ ಸಮ್ಮೇಳಕ್ಕೆ ಮುನ್ನಡೆಯೋಣ

ಎಸ್.ಸೂರ್ಯನಾರಾಯಣ ರಾವ್

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ತಪ್ಪು ಆರ್ಥಿಕ ಧೋರಣೆಗಳಿಂದಾಗಿ ರಾಜ್ಯದ ಎಲ್ಲ ವಿಭಾಗಗಳ ಜನರು ತೀವ್ರ ಸಂಕಷ್ಟದಲ್ಲಿದ್ದಾರೆ. ರೈತರು ದಿವಾಳಿಯಾಗುತ್ತಿದ್ದಾರೆ. ಕಾರ್ಮಿಕರು ಬೀದಿಪಾಲಾಗುತ್ತಿದ್ದಾರೆ. ಇನ್ನುಳಿದ ದುಡಿಯುವ ವರ್ಗದ ಜನಗಳು ಆರ್ಥಿಕ ಆಘಾತಗಳಿಂದ ತತ್ತರಿಸಿದ್ದಾರೆ.

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಯುದ್ಧದ ಭೀತಿಯನ್ನು ಹರಡುತ್ತಾ ಜನರ ಗಮನವನ್ನು ಬೇರೆ ಕಡೆಗೆ ಸೆಳೆಯುವ ಪ್ರಯತ್ನ ಮಾಡುತ್ತಿದೆ. ವಿಶ್ವಬಂಡವಾಳದ ಭ್ರಮೆಗಳನ್ನು ಸೃಷ್ಟಿಸುತ್ತಾ ರಾಜ್ಯದ ಕಾಂಗ್ರೆ ಸರ್ಕಾರ ನಾಡಿನ ಜನತೆಯ ಹಿತಗಳನ್ನು ಬಲಿಕೊಡುತ್ತಿದೆ.

ಜನತೆಯ ಆಕ್ರೋಶ ಸ್ವಯಂ ನಿರ್ಧಾರದ ಹೋರಾಟಗಳ ಮೂಲಕ ಸ್ಫೋಟಗೊಳ್ಳುತ್ತಿರುವಾಗ ಹೋರಾಟದತ್ತ ಒಂದಾಗುತ್ತಿರುವ ಜನಗಳನ್ನು ಒಡೆಯುವ ಕೆಲಸವನ್ನು ಸಂಘ ಪರಿವಾರದ ಶಕ್ತಿಗಳು ವ್ಯವಸ್ಥಿತವಾಗಿ ಕೈಗೆತ್ತಿಕೊಂಡಿವೆ. ಬಾಬ್ರಿ ಮಸೀದಿ ಇದ್ದ ಜಾಗದಲ್ಲೇ ಮಂದಿರ ಕಟ್ಟುತ್ತೇವೆ ಎಂದು ಹೊರಟಿರುವ ಇವರು ಬೆಂಗಳೂರಿನಲ್ಲಿ ಕೋಟಿಗಟ್ಟಲೆ ಕಪ್ಪು ಹಣವನ್ನು ಖರ್ಚು ಮಾಡಿ, ಅಬ್ಬರದ ಪ್ರಚಾರ ದೊರಕಿಸಿ, ನಡೆಸಲಾದ ಆರ್‌ಎಸ್‌ಎಸ್ 'ಸಮರಸತಾ ಸಂಗಮ'ದಲ್ಲಿ ಈ ದೇಶ ಹಿಂದುಗಳಿಗೆ ಮಾತ್ರ ಎಂದು ಘೋಷಣೆ ಮಾಡಿದ್ದಾರೆ.

ಇಂತಹ ಸವಾಲುಗಳ ಎದುರಿನಲ್ಲಿ ನಮ್ಮ ಪಕ್ಷದ 17ನೇ ರಾಜ್ಯ ಸಮ್ಮೇಳನ ನಡೆಯುತ್ತಿದೆ.

ಸ್ವಾತಂತ್ರ್ಯ ದೊರೆತು 50 ವರ್ಷಗಳಾದರೂ ಇಲ್ಲಿಯವರೆಗೆ ಕರ್ನಾಟಕದಲ್ಲಿ ಪ್ರಗತಿಪರ ಭೂಸುಧಾರಣೆಗಳು ಜಾರಿಗೆ ಬರಲಿಲ್ಲ. ಕಾಂಗ್ರೆಸ್ಸಿನ ವಿಕೃತ ಭೂಸುಧಾರಣೆಗಳಿಂದ ಗ್ರಾಮೀಣ ಭೂಸಂಬಂಧಗಳು ಹೆಚ್ಚೇನು ಬದಲಾಗಲಿಲ್ಲ. ರಾಜ್ಯದ ಸಮಗ್ರ ಅಭಿವೃದ್ಧಿ ಸಾಧ್ಯವಾಗಬೇಕಾದರೆ ತೀವ್ರತರವಾದ ಭೂಸುಧಾರಣೆಯ ಕ್ರಮಗಳು ಅತ್ಯಗತ್ಯ. ಭೂಸುಧಾರಣೆಗಾಗಿ ರಾಜ್ಯದಲ್ಲಿ ಹೋರಾಟವನ್ನು ತೀವ್ರಗೊಳಿಸುವ ಕುರಿತು ಚರ್ಚಿಸುವುದು ನಮ್ಮ ಸಮ್ಮೇಳನದ ಒಂದು ಪ್ರಮುಖ ವಿಷಯವಾಗಿದೆ.


ರಾಜ್ಯದಲ್ಲಿ ಶೇಕಡಾ 40-50 ರಷ್ಟು ಕೃಷಿಕೂಲಿಕಾರರಿದ್ದಾರೆ. ಇವರ ಪರಿಸ್ಥಿತಿ ಚಿಂತಾಜನಕವಾಗಿದೆ. ಬಂಡವಾಳಶಾಹಿ ವ್ಯವಸಾಯ ಪದ್ಧತಿಯಿಂದಾಗಿ, ಈಗ ಮತ್ತೆ ಜಾಗತೀಕರಣದ ಪರಿಣಾಮಗಳಿಂದಾಗಿ ಕೃಷಿ ಕಾರ್ಮಿಕರಿಗೆ ಕೆಲಸವಿಲ್ಲ, ಕನಿಷ್ಟ ಕೂಲಿ ಕಾಯ್ದೆ ಜಾರಿ ಇಲ್ಲ. ರಾಜ್ಯದಲ್ಲಿ ಕೃಷಿ ಕಾರ್ಮಿಕರ ಸಂಘಟನೆಯನ್ನು ವಿಸ್ತರಿಸಿ ಬಲಪಡಿಸುವ ಬಗ್ಗೆ ಸಮ್ಮೇಳನ ಗಮನಹರಿಸಬೇಕಾಗಿದೆ.

ಕರ್ನಾಟಕ ಸರ್ಕಾರ ವಿಶ್ವಬ್ಯಾಂಕಿಗೆ ಅಡಿಯಾಳಾಗಲು ಹೊರಟಿದೆ. ವಿಶ್ವಬ್ಯಾಂಕಿನಿಂದ ಸಾವಿರಾರು ಕೋಟಿ ರೂ. ಸಾಲವನ್ನು ಪಡೆಯುತ್ತಿದೆ ಮಾತ್ರವಲ್ಲ ಸರ್ಕಾರ ಹಣವನ್ನು ಹೇಗೆ ಖರ್ಚು ಮಾಡಬೇಕು ಎನ್ನುವ ಬಗ್ಗೆ ವಿಶ್ವಬ್ಯಾಂಕಿನಿಂದ ಆದೇಶಗಳನ್ನು ಪಡೆದುಕೊಂಡಿದೆ. ಹೀಗಾಗಿ ರಾಜ್ಯದಲ್ಲಿ ಸರ್ಕಾರ ನಡೆಸುತ್ತಿರುವವರು ಜನಜಾಗೃತಿ ಉಂಟು ಮಾಡಬೇಕಾಗಿದೆ.

ವಿಶ್ವಬ್ಯಾಂಕಿನ ಶರತ್ತುಗಳನ್ನು ಜಾರಿಗೆ ತರಲು ಕಂಕಣಬದ್ಧವಾಗಿರುವ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕಾರ್ಮಿಕ ಕಾನೂನುಗಳನ್ನು ಬಂಡವಾಳಗಾರರ ಪರವಾಗಿ ಬದಲು ಮಾಡಲು ಹೊರಟಿವೆ. ಈ ಬಗ್ಗೆ ಕಾರ್ಮಿಕರ ಮಧ್ಯದಲ್ಲಿ ಅಲ್ಪಸ್ವಲ್ಪ ಪ್ರಚಾರ-ಪ್ರಕ್ಷೋಭೆ ನಡೆದಿದ್ದರೂ ಬಲವಾದ ಚಳುವಳಿ ಇನ್ನೂ ಮೂಡಿಬರಲಿಲ್ಲ. ಕಾರ್ಮಿಕರು ಹೋರಾಟಗಳ ಮೂಲಕ ಪಡೆದಿದ್ದ ಹಕ್ಕುಗಳನ್ನು ಕಿತ್ತುಕೊಳ್ಳುವ ಪ್ರಯತ್ನದ ಬಗ್ಗೆ ಕಾರ್ಮಿಕರಿಗೆ ಸರಿಯಾಗಿ ಮನವರಿಕೆ ಮಾಡುವ ಬಗ್ಗೆ ಸಮ್ಮೇಳನ ಚರ್ಚೆ ಮಾಡಬೇಕು.

ಸರ್ಕಾರದ ವೈಫಲ್ಯದಿಂದಾಗಿ ರಾಜ್ಯದಲ್ಲಿ ಇಂದು ವಿದ್ಯುತ್ ಕೊರತೆ ತೀವ್ರವಾಗಿದೆ. ವಿದ್ಯುತ್ ಉತ್ಪಾದನೆ, ವಿತರಣೆಗಾಗಿ ಹೊರ ದೇಶಗಳ ಕಂಪನಿಗಳನ್ನು ಅವಲಂಬಿಸುವುದು ಅಪಾಯಕಾರಿಯಾಗಿದೆ. ಒಂದು ಯೂನಿಟ್ ವಿದ್ಯುತ್ತಿನ ಬೆಲೆ ರೂ. 7-8 ಆಗುವ ಸಾಧ್ಯತೆ ಇದೆ. ಇಷ್ಟೊಂದು ದುಬಾರಿ ವಿದ್ಯುತ್ತನ್ನು ಬಳಸಿಕೊಂಡು ರೈತರು ನೀರಾವರಿ ಸೌಲಭ್ಯ ಪಡೆಯಲು ಸಾಧ್ಯವಿಲ್ಲ. ಸಣ್ಣ ಕೈಗಾರಿಕೆಗಳು ಬೆಳೆಯುವುದಿಲ್ಲ. ದುಬಾರಿ ಬೆಲೆಗೆ ಮನೆ ದೀಪ ಬೆಳಗಿಸುವುದೂ ಸಾಧ್ಯವಾಗಲಿಕ್ಕಿಲ್ಲ. ಮಹಾರಾಷ್ಟ್ರದ ಎನ್ರಾನ್ ಇದಕ್ಕೆ ಒಂದು ಉದಾಹರಣೆಯಾಗಿದೆ.

ರಾಜ್ಯದಲ್ಲಿ ಸುಮಾರು 7 ಸಾವಿರ ಮೆ.ವಾಟ್‌ಗಳಷ್ಟು ಅಗ್ಗದ ಜಲವಿದ್ಯುತ್ ಉತ್ಪಾದನೆ ಸಾಧ್ಯವಿದ್ದರೂ ಅದರಲ್ಲಿ ಕೇವಲ 3 ಸಾವಿರ ಮೆ.ವಾಟ್‌ಗಳಷ್ಟು ಮಾತ್ರ ಉತ್ಪಾದನೆಯಾಗುತ್ತಿದೆ. ಈ ಬಗ್ಗೆ ಪ್ರಚಾರ ಪ್ರಕ್ಷೋಭೆ ನಡೆಸಬೇಕಾಗಿದೆ. ರಾಜ್ಯ ಸರ್ಕಾರ ರೈತರಿಗೆ ಸಮರ್ಪಕವಾಗಿ ವಿದ್ಯುತ್ ಪೂರೈಸಬೇಕು. ಇದರ ಬದಲು ಚಳುವಳಿ ನಿರತ ರೈತರ ಮೇಲೆ ಲಾಠಿ ಪ್ರಹಾರ ಮಾಡಲಾಗುತ್ತಿದೆ. ಬೇಸಿಗೆ ದಿನಗಳಲ್ಲಿ ಈ ಸಮಸ್ಯೆ ಇನ್ನೂ ತೀವ್ರವಾಗಲಿದೆ. ರೈತರ ಈ ನ್ಯಾಯಸಮ್ಮತವಾದ ಬೇಡಿಕೆಗಾಗಿ ವ್ಯಾಪಕ



ಚಳುವಳಿ ನಡೆಸುವ ಬಗ್ಗೆ ಸಮ್ಮೇಳನ ಚರ್ಚೆ ಮಾಡಬೇಕಾಗಿದೆ.

ಕೇಂದ್ರ ಸರ್ಕಾರದ ಮುಕ್ತ ಆಮದು ನೀತಿಯಿಂದಾಗಿ ನಮ್ಮ ರೈತರ ವ್ಯವಸಾಯೋತ್ಪನ್ನಗಳ ಬೆಲೆ ಕುಸಿದಿದೆ. ರೈತರು ಮಾಡಿದ ಸಾಲ ತೀರಿಸಲಾಗದೆ ಆತ್ಮಹತ್ತೆ, ತೊಗರಿಗೆ ರೋಗ ಸಹ ತಗಲಿದೆ. ತೊಗರಿಗೆ ಕ್ವಿಂಟಾಲಿಗೆ ಕನಿಷ್ಟ ರೂ. 2500 ಬೆಲೆ ನಿಗದಿಪಡಿಸಬೇಕೆಂದು ರೈತರು ತಮ್ಮ ಸಮಾವೇಶದಲ್ಲಿ ನಿರ್ಣಯಿಸಿ ಸರ್ಕಾರವನ್ನು ಒತ್ತಾಯಿಸಿದ್ದಾರೆ. ಸಮ್ಮೇಳನದಲ್ಲಿ ರೈತರ ಪ್ರಶ್ನೆಯನ್ನು ಚರ್ಚಿಸಿ ಹೋರಾಟದ ತಂತ್ರವನ್ನು ರೂಪಿಸಬೇಕಾಗಿದೆ.

ರಾಜ್ಯದಲ್ಲಿ ಬಿಜೆಪಿಯ ಜನ ಬೆಂಬಲ ಕುಗ್ಗುತ್ತಿರುವಾಗ ಭಜರಂಗದಳ ಮತ್ತಿತರ ಸಂಘ ಪರಿವಾರದ ಸಂಘಟನೆಗಳು ರಾಜ್ಯದಲ್ಲಿ ಕೋಮು ಗಲಭೆಗಳನ್ನು ಹುಟ್ಟು ಹಾಕುವುದನ್ನು ತೀವ್ರಗೊಳಿಸುತ್ತಿವೆ. ಕೊಡಗಿನಲ್ಲಿ, ಚಿಕ್ಕಮಗಳೂರಿನಲ್ಲಿ, ಹುಬ್ಬಳ್ಳಿಯಲ್ಲಿ, ಮಂಗಳೂರಿನಲ್ಲಿ ಇಂತಹ ಪ್ರಯತ್ನಗಳಾಗಿವೆ. ಕಾಂಗ್ರೆ ಸರ್ಕಾರ ಕೋಮುವಾದಿ ಶಕ್ತಿಗಳ ವಿರುದ್ಧ ದೃಢವಾದ ಕ್ರಮ ಜರುಗಿಸಲು ಮುಂದೆಬರುತ್ತಿಲ್ಲ. ಸಮ್ಮೇಳನ ಈ ಬಗ್ಗೆ ಗಂಭೀರ ಚಿಂತನೆ ಮಾಡಬೇಕಾಗಿದೆ.

ಇತ್ತೀಚಿನ ದಿನಗಳಲ್ಲಿ ರಾಜ್ಯದಲ್ಲಿ ದಲಿತರ ಮೇಲೆ ದೌರ್ಜನ್ಯಗಳು ಹೆಚ್ಚುತ್ತಿವೆ. ಕಂಬಾಲಪಲ್ಲಿ ಮತ್ತು ವಣೇನೂರು ಘಟನೆಗಳು ಇತ್ತೀಚಿನ ಉದಾಹರಣೆಗಳು. ಗ್ರಾಮೀಣ ಪ್ರದೇಶದಲ್ಲಿ ಪಾಳೆಗಾರಿ ಮನೋಭಾವ ಇನ್ನೂ ಆಳವಾಗಿ ಇದೆ ಎನ್ನುವುದು ಇದರಿಂದ ಸಾಬೀತಾಗುತ್ತದೆ. ಅಸ್ಪೃಶ್ಯತೆ, ಜಾತಿ ಧರ್ಮದ ವಿರುದ್ಧ ಸಮ್ಮೇಳನ ವಿಶೇಷ ಗಮನ ನೀಡಲಿದೆ.

ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಭ್ರಷ್ಟಾಚಾರ ಸಿಕ್ಕಾಪಟ್ಟೆ ಹೆಚ್ಚಾಗಿದೆ. ಛಾಪಾ ಕಾಗದದ ಹಗರಣ ಅದರ ಒಂದು ತುದಿ ಮಾತ್ರ. ಭ್ರಷ್ಟಾಚಾರ ಒಂದು ಸಹಜವಾದ ವಿಷಯ ಎನ್ನುವಂತೆ ಸರ್ಕಾರ ಅದನ್ನು ತಳ್ಳಿಹಾಕುತ್ತದೆ. ಭ್ರಷ್ಟಾಚಾರ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಇದ್ದೇ ಇರುವ ಅನಿಷ್ಟ. ಈ ಭ್ರಷ್ಟ ವ್ಯವಸ್ಥೆಯನ್ನು ತೊಡೆದುಹಾಕಲು ಬಲಿಷ್ಟವಾದ ಕಮ್ಯುನಿಸ್ಟ್ ಪಕ್ಷದ ಅವಶ್ಯಕತೆಯಿದೆ ಎಂಬುದನ್ನು ಜನರಿಗೆ ಮನವರಿಕೆ ಮಾಡಿಕೊಡುವುದಾಗಬೇಕು.

ಕರ್ನಾಟಕದಲ್ಲಿ ಸಿಪಿಐ(ಎಂ) ಬೆಳೆಯಬೇಕಾದುದು ತುರ್ತಿನ ಅವಶ್ಯಕತೆಯಾಗಿದೆ. ನಮ್ಮ ಪಕ್ಷ ಬಲಿಷ್ಟವಾಗದೆ ಜನತೆಯನ್ನು ಒಗ್ಗೂಡಿಸಿ ಹೋರಾಡುವ ಕೆಲಸಆಗುವುದಿಲ್ಲ. ಪಕ್ಷವನ್ನು ಬಲಪಡಿಸುವುದು ಹೇಗೆ ಎಂಬುದನ್ನು ಈ ಸಮ್ಮೇಳನದಲ್ಲಿ ವಿವರವಾಗಿ ಚರ್ಚಿಸಬೇಕಾಗಿದೆ.

ಕಾಂಗ್ರೆಸ್ಸಿಗೂ ಬಿಜೆಪಿಗೂ ಬದಲಿಯಾಗಿ ರಾಜ್ಯದಲ್ಲಿ ಎಡಪ್ರಜಾಪ್ರಭುತ್ವ, ಜಾತ್ಯಾತೀತ ಶಕ್ತಿಗಳು ಒಂದಾಗಿ ಜನತೆಯ ಮುಂದೆ ಬರುವಂತಾಗಬೇಕು. ಅದಕ್ಕಾಗಿ ನಾವು ಶ್ರಮಿಸಬೇಕು.

ಆದರೆ ವಿನಾಶಕಾರಿ ಉದಾರೀಕರಣ ಮತ್ತು ಕೋಮುವಾದಿ ನೀತಿಗಳಿಗೆ ಎಡ ಮತ್ತು ಪ್ರಜಾಸತ್ತಾತ್ಮಕ ರಂಗವೇ ಪೂರ್ಣಪ್ರಮಾಣದ ಪರ್ಯಾಯ ಒದಗಿಸಬಲ್ಲದು. ಶೋಷಿತ ಜನತೆಯ ಸಮರಧೀರ ಹೋರಾಟದಲ್ಲಿ ಮಾತ್ರ ಅಂತಹ ಎಡ ಮತ್ತು ಪ್ರಜಾಸತ್ತಾತ್ಮಕ ರಂಗ ಉದಯವಾಗಲು ಸಾಧ್ಯ. ಈ ಬಗ್ಗೆ ಪಕ್ಷದ ಕಾರ್ಯಕರ್ತರು ತಮ್ಮ ತಿಳುವಳಿಕೆಯನ್ನು ಹೆಚ್ಚಿಸಿಕೊಳ್ಳುವುದು ತೀರಾ ಅಗತ್ಯ.

ರಾಜ್ಯದಲ್ಲಿ ಬಲಿಷ್ಟವಾದ ಸಾಮೂಹಿಕ ಕ್ರಾಂತಿಕಾರಿ ಪಕ್ಷವನ್ನು ಕಟ್ಟಿಬೆಳೆಸಲು ಈ

ವಿಜಾಪುರ ಜಿಲ್ಲಾ ಸಮ್ಮೇಳನ

ಸಾಮೂಹಿಕ ಕಾರ್ಯಾಚರಣೆಯ ಮೂಲಕ ಪಕ್ಷವನ್ನು ಪರಿಣಾಮಕಾರಿಯಾಗಿಸಲು ನಿರ್ಧಾರ

ಪಕ್ಷದ ಹಿರಿಯ ಮುಖಂಡ ಕಾಮ್ರೇಡ್ ಎನ್.ಕೆ. ಉಪಾಧ್ಯಾಯರ ಅಗಲಿಕೆಯಿಂದ ಪಕ್ಷಕ್ಕೆ ವಿಜಾಪುರ ಜಿಲ್ಲೆಯಲ್ಲಿ ತುಂಬಾ ನಷ್ಟವಾಗಿದ್ದು, ಸಾಮೂಹಿಕ ಕಾರ್ಯಾಚರಣೆಯ ಮೂಲಕ ಈ ನಷ್ಟವನ್ನು ತುಂಬುವ ಪ್ರಯತ್ನ ಮಾಡಬೇಕೆಂದು ಸಿಪಿಐ(ಎಂ) ಪಕ್ಷದ ವಿಜಾಪುರ ಜಿಲ್ಲಾ ಸಮ್ಮೇಳನ ನಿರ್ಧರಿಸಿದೆ. ಕಮ್ಯುನಿಸ್ಟ್ ಪಕ್ಷವನ್ನು ಮೊಟ್ಟ ಮೊದಲಿಗೆ ವಿಜಾಪುರ ಜಿಲ್ಲೆಗೆ ಪರಿಚಯಿಸಿದವರು ಕಾಮ್ರೇಡ್ ಎನ್.ಕೆ. ಉಪಾಧ್ಯಾಯರು. ಬೀಡಿ ಕಾರ್ಮಿಕರು, ಪೌರ ಕಾರ್ಮಿಕರು, ಟಾಂಗಾ ಹೊಡೆಯುವವರು ಮೊದಲಾದವರನ್ನು ಸಂಘಟಿಸಿ ಅವರ ನಡುವೆ ಪಕ್ಷವನ್ನು ಕಟ್ಟಿದವರು ಕಾಮ್ರೇಡ್ ಉಪಾಧ್ಯಾಯರು.

ಈ ಅನಿರೀಕ್ಷಿತ ಆಘಾತದಿಂದಾಗಿ ಅವರ ಮುಂದೂಡಲಾದ ಜಿಲ್ಲಾ ಸಮ್ಮೇಳನವು ಜನವರಿ 8ರಂದು "ಕಾಮ್ರೇಡ್ ಎನ್.ಕೆ. ಉಪಾಧ್ಯಾಯ ಭವನ"ದಲ್ಲಿ ಏರ್ಪಟ್ಟಾಗ ಆಗಮಿಸಿದ್ದ ಪ್ರತಿನಿಧಿಗಳು ಆಘಾತದಿಂದ ಇನ್ನೂ ಚೇತರಿಸಿಕೊಂಡಿರಲಿಲ್ಲ. ಅವರ ಆದರ್ಶ, ಹೋರಾಟಗಳನ್ನು ಮುನ್ನಡೆಸೋಣ, ಅವರು ಬರೆದಿಟ್ಟು ಹೋದ ಸಮ್ಮೇಳನದ ವರದಿಯಲ್ಲಿ ಹೇಳಿರುವಂತೆ ಜಿಲ್ಲೆಯಲ್ಲಿ ಪಕ್ಷವನ್ನು ಶಾಖೆಗಳ ಮಟ್ಟದಿಂದ ಬಲಪಡಿಸೋಣ, ಸಾಮೂಹಿಕ ಸಂಘಟನೆಗಳನ್ನು ಸ್ವತಂತ್ರವಾಗಿಯೂ ಪ್ರಜಾಸತ್ತಾತ್ಮಕವಾಗಿಯೂ ನಡೆಸುವುದು, ಇದೇ ನಾವು ಕಾಮ್ರೇಡ್ ಎನ್.ಕೆ. ಅವರಿಗೆ ಸಲ್ಲಿಸಬಹುದಾದ ಅರ್ಥಪೂರ್ಣ ಶ್ರದ್ಧಾಂಜಲಿ" ಎಂದು ಪ್ರತಿನಿಧಿಗಳು ಸಮ್ಮೇಳನದ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ್ದು ಗಮನಿಸಿದರೆ ಜಿಲ್ಲೆಯಲ್ಲಿ ಪಕ್ಷದ ಬೆಳವಣಿಗೆಗೆ ಈ ಸಮ್ಮೇಳನವು ಒಂದು ಹೊಸ ತಿರುವು ನೀಡಿದೆ ಎಂದು ಗೋಚರವಾಗುತ್ತದೆ.

ಪಕ್ಷದ ಅತ್ಯಂತ ಹಿರಿಯ ಸದಸ್ಯರೂ, ಕಾಮ್ರೇಡ್ ಎನ್.ಕೆ. ಅವರ ಆರಂಭದ ಹೋರಾಟದ ದಿನಗಳಿಂದಲೂ ಅವರ ಜೊತೆಗಿದ್ದ ಕಾಮ್ರೇಡ್ ಡಿ.ಎಂ.ಕಲಾಸಿ ಅವರು ಪಕ್ಷದ ಧ್ವಜಾರೋಹಣ ಮಾಡುವುದರೊಂದಿಗೆ ಸಮ್ಮೇಳನದ ಕಲಾಪಗಳು ಆರಂಭವಾದವು. ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯ ಕಾಮ್ರೇಡ್ ನಿತ್ಯಾನಂದಸ್ವಾಮಿ ಅವರು ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿ ದೇಶದ, ಹಾಗೂ ರಾಜ್ಯದ ಉದ್ಯಮಗಳನ್ನು ವಿಶ್ಲೇಷಿಸಿದರು. ಹೆಚ್ಚುತ್ತಿರುವ ಕೋಮುವಾದದ ಅಪಾಯದ ಬಗ್ಗೆ ಎಚ್ಚರಿಸಿದ ಅವರು ಜಿಲ್ಲೆಯಲ್ಲಿ ಎಲ್ಲ ಪ್ರಗತಿಪರ, ಜಾತ್ಯಾತೀತ ಶಕ್ತಿಗಳನ್ನು ಒಂದುಗೂಡಿಸಿ ಬಲಪಡಿಸುವಲ್ಲಿ ನಮ್ಮ ಪಕ್ಷ ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸುವಂತಾಗಬೇಕು ಎಂದು ಅಭಿಪ್ರಾಯಪಟ್ಟರು. ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಪಕ್ಷದ ಜಿಲ್ಲಾ ಕಾರ್ಯದರ್ಶಿ ಭೀಮಸಿ ಕಲಾದಗಿ ಅವರು ಜಿಲ್ಲೆಯ ಅಭಿವೃದ್ಧಿಗೆ ಜನಪ್ರತಿನಿಧಿಗಳು ಆಸಕ್ತಿ ವಹಿಸುತ್ತಿಲ್ಲ; ನೀರಾವರಿ, ವಿದ್ಯುತ್, ಕುಡಿಯುವ ನೀರು ಮುಂತಾದ ಕನಿಷ್ಟ ಸೌಲಭ್ಯಗಳು ಸಿಗುತ್ತಿಲ್ಲ. ಕೋಮುವಾದ ವಿಜೃಂಭಿಸುತ್ತಿದ್ದು, ದಲಿತರು, ಅಲ್ಪಸಂಖ್ಯಾತರ ಮೇಲೆ ದೌರ್ಜನ್ಯ ಹೆಚ್ಚುತ್ತಿದೆ. ಆದ್ದರಿಂದ ನಮ್ಮ ಸಂಘಟಿತ ಹೋರಾಟ ಇನ್ನೂ ಹೆಚ್ಚಾಗಬೇಕಾಗಿವೆ ಎಂದು ಹೇಳಿದರು. ಆರಂಭದಲ್ಲಿ ಕಾಮ್ರೇಡ್ ಅಣ್ಣಾರಾಯ ಈಳಗೇರ ಸ್ವಾಗತಿಸಿದರು. ಕಳೆದ ಸಮ್ಮೇಳನದಿಂದ ಇಲ್ಲಿಯವರೆಗೆ ಅಗಲಿದ ಪಕ್ಷದ ನಾಯಕರಿಗೆ ಸಭೆಯು ಶ್ರದ್ಧಾಂಜಲಿ ಸಲ್ಲಿಸಿತು. ಕೊನೆಯಲ್ಲಿ ಕಾಮ್ರೇಡ್ ಸುರೇಖಾ ರಜಪೂತ ವಂದಿಸಿದರು.

ಪ್ರತಿನಿಧಿಗಳ ಅಧಿವೇಶನ

ಸಮ್ಮೇಳನದ ಕಲಾಪಗಳನ್ನು ನಡೆಸಲು ಕಾಮ್ರೇಡ್ ಡಿ.ಎಂ.ಕಲಾಸಿ, ಕಾಮ್ರೇಡ್ ವಿ.ಎಂ. ಸೊನ್ನದ ಮತ್ತು ಕಾಮ್ರೇಡ್ ಸುರೇಖಾ ರಜಪೂತ್ ಅವರನ್ನು ಒಳಗೊಂಡ ಅಧ್ಯಕ್ಷೀಯ ಮಂಡಳಿಯನ್ನು ಆಯ್ಕೆ ಮಾಡುವ ಮೂಲಕ ಪ್ರತಿನಿಧಿಗಳ ಅಧಿವೇಶನ ಪ್ರಾರಂಭವಾಯಿತು. ಜಿಲ್ಲಾ ಕಾರ್ಯದರ್ಶಿಯವರು ಜಿಲ್ಲಾ ಸಮಿತಿಯ ಪರವಾಗಿ ವರದಿಯನ್ನು ಮಂಡಿಸಿದರು.

ಆರ್ಥಿಕವಾಗಿಯೂ ಸಾಮಾಜಿಕವಾಗಿಯೂ ಹಿಂದುಳಿದಿರುವ ವಿಜಾಪುರ-ಬಾಗಲಕೋಟೆ ಜಿಲ್ಲೆಗಳ ಜಾತಿಗಳ ಪ್ರಭಾವ ಹೆಚ್ಚುತ್ತಿದೆ ಎಂದು ವರದಿಯಲ್ಲಿ ಗುರುತಿಸಲಾಗಿದೆ. ಜಾತಿ ಉಪ ಜಾತಿಗಳಲ್ಲಿ ಮೂಡಿಬರುತ್ತಿರುವ ಜಾಗೃತಿಯನ್ನು ಬಂಡವಾಳಶಾಹಿ-ಭೂಮಾಲಕ ವರ್ಗಗಳ ಪಕ್ಷಗಳು ಚೆನ್ನಾಗಿ ಬಳಸಿಕೊಳ್ಳುತ್ತಿದ್ದು ರಾಜಕೀಯ ಪ್ರಶ್ನೆಗಳು ಗೌಣವಾಗುತ್ತಿವೆ. ಇಲ್ಲಿ ಬೃಹತ್ ಕೈಗಾರಿಕೆಗಳು ಬರಲೇ ಇಲ್ಲ. ಇದ್ದ ಹತ್ತಿ ಗಿರಣಿ, ನೂಲಿನ ಗಿರಣಿ, ಎಣ್ಣೆ ಗಿರಣಿಗಳು ಮುಚ್ಚಿವೆ. ಬಾಗಲಕೋಟೆಯ ಸೀಮೆಂಟ್ ಕಾರ್ಖಾನೆ ಸಂಕಷ್ಟದಲ್ಲಿದೆ. ಅತಿ ದೊಡ್ಡ ಸಂಖ್ಯೆಯಲ್ಲಿರುವ ಕೈಮಗ್ಗಗಳು ಮತ್ತು ವಿದ್ಯುತ್ ಮಗ್ಗಗಳು ಬಂದ್ ಆಗುತ್ತಿವೆ. ನಿರುದ್ಯೋಗದ ಸಮಸ್ಯೆ ಗಂಭೀರವಾಗುತ್ತಿದೆ.



ವಿಜಾಪುರ ಜಿಲ್ಲೆಯ ಬಹುಭಾಗ ಬಯಲು ಸೀಮೆಯಾಗಿದ್ದು ಮಳೆ ಬಹಳ ಕಡಿಮೆ. ಕೃಷ್ಣಾ ಬಲದಂಡೆ ಮತ್ತು ಎಡದಂಡೆ ಕಾಲುವೆಗಳು, ಮುಳವಾಡ, ಗುತ್ತಿ ಬಸವಣ್ಣಾ, ಮೊದಲಬಾಗಿ, ಅಡಿಹುಡಿ, ಚಿಮ್ಮಲಗಿ ಮುಂತಾದ ಯೋಜನೆಗಳ ಕೆಲಸ ಆಮೆಗತಿಯಿಂದ ನಡೆಯುತ್ತಿರುವುದರಿಂದ ವಿಜಾಪುರ ಜಿಲ್ಲೆ ಸತತವಾಗಿ ಬರಗಾಲಕ್ಕೆ ಬಲಿಯಾಗುವುದು ತಪ್ಪಿಲ್ಲ. ಇತ್ತೀಚಿನ ವರ್ಷಗಳಲ್ಲಿ ಕೊಳವೆಬಾವಿಗಳನ್ನು ತೋಡಿಸಿ ತೋಟಗಾರಿಕೆಯಲ್ಲಿ ತೊಡಗಿದ್ದಾರೆ. ಇವರು ಗ್ರಾಮೀಣ ಪ್ರದೇಶದಲ್ಲಿ ಒಂದು ಪ್ರಭಾವಿ ಶಕ್ತಿಯಾಗಿ ಬೆಳೆದು ಬರುತ್ತಿದ್ದು ಗ್ರಾಮೀಣ ರಾಜಕೀಯವನ್ನು ನಿಯಂತ್ರಿಸ ತೊಡಗಿದ್ದಾರೆ. ಬಡ ರೈತರ ಮತ್ತು ಕೃಷಿ ಕೂಲಿಕಾರರ ಪಾಡು ಚಿಂತಾಜನಕವಾಗಿದ್ದು ಉದ್ಯೋಗ ಹುಡುಕಿಕೊಂಡು ಗುಳೆ ಹೋಗುವುದು ನಿರಂತರವಾಗಿ ನಡೆದಿದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಉದಾರೀಕೃತ ನೀತಿಗಳಿಂದ ವಿವಿಧ ಜನವಿಭಾಗಗಳ ಮೇಲೆ ಹೊರಲಾಗದ ಹೊರೆಗಳು ಹೇರಲ್ಪಡುತ್ತಿದ್ದು ಜನತೆಗೆ ಪರಿಹಾರದ ದಾರಿಯತ್ತ ಕೊಂಡೊಯ್ಯಲು ಜಿಲ್ಲೆಯಲ್ಲಿ ನಮ್ಮ ಶಕ್ತಿ ಸಾಲದಾಗಿದೆ. ಜನತೆಯನ್ನು ಕಾಡುತ್ತಿರುವ ಪ್ರಶ್ನೆಗಳ ಬಗ್ಗೆ ಪಕ್ಷದ ಧೋರಣೆಗಳನ್ನು ಜನತೆಗೆ ತಲುಪಿಸಲು ನಮ್ಮ ಪಕ್ಷದ ಶಾಖೆಗಳು ಸಕ್ರಿಯವಾಗಿ ಕೆಲಸ ಮಾಡಲು ಸಾಧ್ಯವಾಗಬೇಕು. ಪಕ್ಷ ಮತ್ತು ಜನತೆಯ ನಡುವೆ ನಮ್ಮ ಶಾಖೆಗಳು ಜೀವಂತ ಸಂಪರ್ಕ ಸಾಧನಗಳಾಗಬೇಕು. ಶಾಖೆಗಳ ಕಾರ್ಯದರ್ಶಿಗಳಿಗೆ ಹಾಗೂ ಸಾಮಾನ್ಯ ಸದಸ್ಯರಿಗೆ ಸೈದ್ಧಾಂತಿಕವಾಗಿ ಸಶಕ್ತಗೊಳಿಸಿ ಕಾರ್ಯೋನ್ಮುಖಗೊಳಿಸುವುದು ಅತ್ಯಂತ ತುರ್ತಾಗಿ ಆಗಬೇಕಾದ ಕೆಲಸ ಎಂದು ವರದಿಯು ಸ್ಪಷ್ಟಪಡಿಸಿದೆ.

ವರದಿಯ ಮೇಲೆ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಪ್ರತಿನಿಧಿಗಳು ವರದಿಯ ಮುಖ್ಯ ಆಶಯವನ್ನು ಒಪ್ಪಿಕೊಳ್ಳುತ್ತಾ ಕೆಲವೊಂದು ತಿದ್ದುಪಡಿಗಳನ್ನು ಸೂಚಿಸಿದರು. ಪ್ರತಿನಿಧಿಗಳು ಸ್ವಾಗತಿಸಿದ ಪ್ರತಿನಿಧಿಗಳು ವರದಿಯನ್ನು ಸರ್ವಾನುಮತದಿಂದ ಅನುಮೋದಿಸಿದರು.

ನೂತನ ಜಿಲ್ಲಾ ಸಮಿತಿಯ ಆಯ್ಕೆ: ಮುಂದಿನ ಅವಧಿಗೆ ಜಿಲ್ಲೆಯಲ್ಲಿ ಪಕ್ಷವನ್ನು ಕಟ್ಟುವ, ವಿಸ್ತರಿಸುವ ಜವಾಬ್ದಾರಿಯನ್ನು ನಿರ್ವಹಿಸಲು 11 ಜನ ಸದಸ್ಯರಿರುವ ಜಿಲ್ಲಾ ಸಮಿತಿಯನ್ನು ಸಮ್ಮೇಳನವು ಸರ್ವಾನುಮತದಿಂದ ಆಯ್ಕೆ ಮಾಡಿತು. ಚುನಾಯಿತ ಸಮಿತಿ ಸದಸ್ಯರು ಸೇರಿ ಕಾಂ.ಭೀಮಸಿ ಕಲಾದಗಿ ಅವರನ್ನು ಜಿಲ್ಲಾ ಸಮಿತಿಯ ಕಾರ್ಯದರ್ಶಿಯನ್ನಾಗಿ ಪುನರಾಯ್ಕೆ ಮಾಡಿತಲ್ಲದೆ ಕಾಮ್ರೇಡ್ ಅಣ್ಣಾರಾಯ ಈಳಗೇರ, ಕಾಮ್ರೇಡ್ ವಿ.ಎಂ. ಸೊನ್ನದ, ಕಾಮ್ರೇಡ್ ಸುರೇಖಾ ರಜಪೂತ ಮತ್ತು ಕಾಮ್ರೇಡ್ ರಾಜುಹಳ್ಳಿ ಅವರನ್ನು ಕಾರ್ಯದರ್ಶಿ ಮಂಡಳಿ ಸದಸ್ಯರನ್ನಾಗಿ ಆಯ್ಕೆ ಮಾಡಿತು. ಕಾಮ್ರೇಡ್ ಡಿ.ಎಂ. ಕಲಾಸಿ, ಕಾಮ್ರೇಡ್ ಸಿದ್ದಣ್ಣ ಐರೋಡಗಿ, ಕಾಮ್ರೇಡ್ ಸಾಯಬಣ್ಣ ಹಂದಿಗನೂರ ಮತ್ತು ಕಾಮ್ರೇಡ್ ಬಿ.ಡಿ. ಪಾಟೀಲ್ ಜಿಲ್ಲಾ ಸಮಿತಿಗೆ ಆಯ್ಕೆಯಾದ ಇನ್ನುಳಿದ ಸದಸ್ಯರು.

ಎನ್.ಕೆ.ಟ್ರಸ್ಟ್: ಕಾಮ್ರೇಡ್ ಎನ್.ಕೆ. ಉಪಾಧ್ಯಾಯ ಸ್ಮಾರಕ ಟ್ರಸ್ಟ್ ಒಂದನ್ನು ರಚಿಸಲು ಹಾಗೂ ಸಾರ್ವಜನಿಕರ ಸಹಾಯ ಸಹಕಾರ ಪಡೆದು ಸ್ಮಾರಕ ಭವನವೊಂದನ್ನು ನಿರ್ಮಿಸಲು ಸಮ್ಮೇಳನವು ನಿರ್ಣಯವೊಂದನ್ನು ಸರ್ವಾನುಮತದಿಂದ ಅಂಗೀಕರಿಸಿತು. ನೀರಾವರಿ, ವಿದ್ಯುತ್, ಆಸ್ಪತ್ರೆ, ಬೆಳೆಹಾನಿಗೆ ಪರಿಹಾರ, ಕುಡಿಯುವ ನೀರು, ಹಳದಿ ಪಡಿತರ ಕಾರ್ಡು, ಅಕ್ರಮ ಸಾಗುವಳಿ ಸಕ್ರಮ, ವಸತಿ ಸೌಕರ್ಯ ಮೊದಲಾದ ಜ್ವಲಂತ ಸಮಸ್ಯೆಗಳ ಬಗ್ಗೆ ಠರಾವುಗಳನ್ನು ಸಹ ಅಂಗೀಕರಿಸಲಾಯಿತು. ಕೊನೆಗೆ ಸಮಾರೋಪ ಭಾಷಣ ಮಾಡಿದ ಕಾಮ್ರೇಡ್ ನಿತ್ಯಾನಂದ ಸ್ವಾಮಿಯವರು "ನಾವು ತುರ್ತಾಗಿಯೂ, ವೇಗವಾಗಿಯೂ ಬೆಳೆಯಬೇಕಾಗಿದೆ" ಎಂದು ಹೇಳಿದರು. ಬಂಡವಾಳಶಾಹಿ-ಭೂಮಾಲಕ ರಾಜಕೀಯ ಪಕ್ಷಗಳಿಂದ ಜನತೆಗೆ ಪರಿಹಾರ ಒದಗಿಸಲು ಸಾಧ್ಯವಿಲ್ಲ. ಕೋಮುವಾದಿ ಪಕ್ಷಗಳ ಬೆಳವಣಿಗೆ ದುಡಿಯುವ ಜನವಿಭಾಗವನ್ನು ಒಡೆಯುತ್ತದೆ. ನಮ್ಮ ಪಕ್ಷ ಬಲಿಷ್ಠವಾಗಿ ಬೆಳೆದು ಬಂದಾಗ ಮಾತ್ರ ಇತರ ಪ್ರಜಾಸತ್ತಾತ್ಮಕ, ಪ್ರಗತಿಪರ ಜಾತ್ಯಾತೀತ ಶಕ್ತಿಗಳನ್ನು ಒಂದುಗೂಡಿಸಿ ಜನತೆಯ ಸಮಸ್ಯೆಗಳಿಗೆ ಭಾಗಶಃ ಪರಿಹಾರವನ್ನಾದರೂ ಒದಗಿಸಬಹುದು. ಆದ್ದರಿಂದ ನಾವು ನಮ್ಮ ಕೆಲಸದ ಶೈಲಿಯಲ್ಲಿ ಬದಲಾವಣೆ ತಂದು ಜನರ ನಡುವೆ ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡಲು

ಬರುತ್ತಿದ್ದಾರೆ

ಮಾಧ್ಯಮ ಸಾಮ್ರಾಜ್ಯಶಾಹಿಗಳು

ಈಗ ಬೆಲೆ 'ಇಳಿಸಲು' ಸ್ಪರ್ಧೆ!

ಕರ್ನಾಟಕದಲ್ಲೀಗ ಪತ್ರಿಕೆಗಳ ಬೆಲೆ ಇಳಿಕೆಯ ಸಮರಹೂಡಿವೆ. ಓದುಗರಿಗೆ ಇದು, ತಾವು ಮಾಡುತ್ತಿರುವ ಮಹದುಪಕಾರವೆಂದೇ ಅವರ ಸಮಜಾಯಿಸಿ ಬೇರೆ! ಆದರೆ ನಿಜ ಏನು? ಬೆಚ್ಚಿಬೀಳಿಸುವ ವಿವರಗಳನ್ನು ಓದಿ

ಮೋಹನ್ ಕುಡ್ಲ

ವಿಚಿತ್ರ ಆದರೂ ನಿಜ - !

ಪತ್ರಿಕೆಗಳ ಬೆಲೆ ಇಳಿಸಲು ಪೈಪೋಟಿ ಆರಂಭವಾಗಿದೆ. ಪ್ರತಿಯೊಂದರ ಬೆಲೆಯೂ ಏರುತ್ತಿರುವ ಸಮಯದಲ್ಲಿ ಬೆಲೆ ಇಳಿಸಲೂ ಯುದ್ಧ ಜರುಗುತ್ತಿದೆ !

ಕನ್ನಡದ ಬಹುತೇಕ ಪತ್ರಿಕೆಗಳ ಬೆಲೆ ಈಗ 1.50 ರೂ.ಗೆ ಕುಸಿದಿದೆ. ಈ ಸ್ಪರ್ಧೆ ಹೇಗಿದೆಯೆಂದರೆ ಬೆಲೆಯನ್ನು ಇನ್ನೂ ಕಡಿತಗೊಳಿಸಲು ಸಹಾ ಸಮಾಲೋಚನೆ ಸಾಗಿದೆ !

ಪ್ರತಿಯೊಂದು ಪತ್ರಿಕೆಯೂ ಇದನ್ನು ತಮ್ಮ 'ಅಚ್ಚುಮೆಚ್ಚಿನ' 'ನೆಚ್ಚಿನ' ಓದುಗರಿಗೆ ನೀಡುತ್ತಿರುವ ಭಾರೀ ಕಾಣಿಕೆ ಎಂಬಂತೆ ಬಿಂಬಿಸುತ್ತಿವೆ. ಓದುಗರೂ ಅಷ್ಟೆ ಪತ್ರಿಕೆಗಳು ಬೆಲೆ ಇಳಿಸಿ ತಮಗೆ ಮಹದುಪಕಾರ ಮಾಡಿವೆ ಎಂಬ ಭ್ರಮೆ ಹೊಂದಿದ್ದಾರೆ. ಭ್ರಮೆ ಇಲ್ಲದವರು 'ವಿಜಯಕರ್ನಾಟಕ' ಬೆಲೆ ಇಳಿಸಿ ಇತರೆ ಪತ್ರಿಕೆಗಳ ಬಣ್ಣ ಬಯಲು ಮಾಡಿದೆ ಎಂದು ನಂಬಿದ್ದಾರೆ.

ಹಾಗಿದ್ದರೆ ನಿಜ ಸಂಗತಿ ಏನು?

ಪತ್ರಿಕೆಗಳು ಬೆಲೆ ಇಳಿಸುತ್ತಿಲ್ಲ. ಬದಲಿಗೆ ಓದುಗರ ಉಸಿರು ಕಟ್ಟಿಸುವ, ಆಯ್ಕೆಯ ಅವಕಾಶವನ್ನು ಕಸಿಯುವ, ಓದುಗರ ಮೇಲೆ ಸವಾರಿ ಮಾಡುವ, ಮುಂದಿನ ದಿನಗಳಲ್ಲಿ ಸಾಮ್ರಾಜ್ಯಶಾಹಿ ಆಲೋಚನೆಗಳನ್ನು ಹೇರುವುದಕ್ಕೆ ಪೀಠಿಕೆ ಸಜ್ಜುಗೊಳಿಸುತ್ತಿದೆ.

ಮೊದಲು ಅವರು
ಯಹೂದಿಗಳನ್ನು ಹುಡುಕಿ ಬಂದರು
ನಾನು ಬಾಯಿ ಬಿಡಲಿಲ್ಲ
ಏಕೆಂದರೆ ನಾನು ಯಹೂದಿಯಾಗಿರಲಿಲ್ಲ...

ಎಂಬಂತೆಯೇ ಈ ಬೆಲೆ ಇಳಿಕೆ ರಾಜಕೀಯ ಸಹಾ. ಬೆಲೆ ಇಳಿಕೆಯ ಹಿಂದೆ ಅಂತರ್‌ರಾಷ್ಟ್ರೀಯ ರಾಜಕಾರಣ ಇದೆ. ಬಹುರಾಷ್ಟ್ರೀಯ ಕಂಪನಿಗಳ ಹುನ್ನಾರವಿದೆ. ಅದರ ಮೊದಲ ಪಾಠಗಳು ಮಾತ್ರ ಈಗ ಬಯಲಿಗೆ ಬಂದಿದೆ.

ಬೆಲೆ ಇಳಿಕೆ - ತಂತ್ರ

'ಬೆಲೆ ಇಳಿಕೆ' ಎಂಬುದು ಮಾಧ್ಯಮ ಸಾಮ್ರಾಜ್ಯಶಾಹಿಗಳ ಮಹಾತಂತ್ರ. ಇದು ಆರಂಭವಾದದ್ದು ವಿಜಯಕರ್ನಾಟಕದಿಂದಲ್ಲ, ಅಥವಾ ಟೈಮ್ಸ್ ಆಫ್ ಇಂಡಿಯಾದಿಂದಲ್ಲ. ಇದು ಆರಂಭವಾದದ್ದು ಹಲವಾರು ದಶಕಗಳ ಹಿಂದೆ ಮಾಧ್ಯಮ ಸಾಮ್ರಾಜ್ಯಶಾಹಿ ರೂಪರ್ಟ್ ಮುರ್ಡೋಕ್‌ನಿಂದ. ಭಾರತದ ಟೈಮ್ಸ್ ಆಫ್ ಇಂಡಿಯಾ, ವಿಜಯ ಕರ್ನಾಟಕ ಇವು ಈ ಸಾಮ್ರಾಜ್ಯಶಾಹಿಯ ಯಶಸ್ಸನ್ನು ಕಂಡು ಓಡಿದು ಈಗ ಅದರ ಬೆನ್ನಲ್ಲಿ ನಡೆದಿದೆ ಅಷ್ಟೆ.


ಇಲ್ಲವಾಗಿಸಲು ತನ್ನ ಪತ್ರಿಕೆಯ ಪ್ರಸಾರ ಗರಿಷ್ಠ ಮಟ್ಟ ಮುಟ್ಟಲು ಮುರ್ಡೋಕ್ ಬಳಸುತ್ತಿದ್ದ ತಂತ್ರ - ಬೆಲೆ ಇಳಿಸುವುದು. ಪತ್ರಿಕೆಗಳ ಬೆಲೆಗಳೊಡನೆ ಕೆಲಕಾಲ ಚೆಲ್ಲಾಟವಾಡಿದರೆ ಸಾಕು ಪ್ರತಿಸ್ಪರ್ಧಿಗಳನ್ನು ಸುಲಭದಲ್ಲಿ ಮಣಿಸಲು ಸಾಧ್ಯ ಎಂದು ಮುರ್ಡೋಕ್ ತೋರಿಸಿಕೊಟ್ಟಿದ್ದಾನೆ.

ಯಾವುದೇ ಪತ್ರಿಕೆ ಎಷ್ಟು ಬಂಡವಾಳ ಹೊಂದಿದೆ ಎಂಬುದರ ಮೇಲೆ ಅದರ ಯಶಸ್ಸು ನಿಂತಿದೆ. ಭಾರತದಲ್ಲಿ ಮಾಧ್ಯಮಗಳು ಬಂಡವಾಳಶಾಹಿಗಳ ಹಿಡಿತದಲ್ಲಿಯೇ ಇದೆ. ಮಾಧ್ಯಮವನ್ನು ಹೊಂದಿರುವ ಮಾಧ್ಯಮ ಸಂಸ್ಥೆಗಳ ಗುಂಪು ಒಂದಾದರೆ ಮಾಧ್ಯಮಗಳನ್ನು ಹೊಂದಿರುವ ಇತರೆ ವ್ಯವಹಾರ ಸಂಸ್ಥೆಗಳ ಗುಂಪು ಇನ್ನೊಂದು. ಉದಾಹರಣೆಗೆ ಒಂದು ಮಾಧ್ಯಮ ಸಂಸ್ಥೆ ಒಂದು ಪತ್ರಿಕೆ ನಡೆಸಲು 30 ಕೋಟಿ ಬಂಡವಾಳ ಇಟ್ಟುಕೊಂಡಿದೆ ಎಂದುಕೊಳ್ಳೋಣ. ಆದರೆ ಅದೇ ಸಮಯದಲ್ಲಿ ಪತ್ರಿಕೆಗಾಗಿ 50 ಕೋಟಿ ಇಟ್ಟುಕೊಂಡಿರುವ ಇತರೆ ವ್ಯವಹಾರ ಹೊಂದಿರುವ ಸಂಸ್ಥೆಗಳಿವೆ. ಬಹುಮುಖ್ಯ ವ್ಯತ್ಯಾಸ ಇದು. ಭಾರತದ ಬಹುತೇಕ ಪತ್ರಿಕೆಗಳು ಪತ್ರಿಕೆ ಮಾತ್ರವಲ್ಲದೆ ಇತರೆ .... ವಹಿವಾಟು ಹೊಂದಿವೆ. ಅಂದರೆ ಅರ್ಥ ಈ ಸಂಸ್ಥೆಗಳ ಬಳಿ ಪತ್ರಿಕೆಗಾಗಿ ಎಂದು ತೆಗೆದಿರಿಸಿದ 50 ಕೋಟಿ ಅಲ್ಲದೆ ತಮ್ಮ ನಷ್ಟ ತುಂಬಲು ಇತರೆ ವ್ಯವಹಾರವೂ ಇದೆ. ಇದು ಉಂಟು ಮಾಡುವ ಮಹಾನ್ ವ್ಯತ್ಯಾಸವನ್ನು ಪರಿಶೀಲಿಸೋಣ.

ಒಂದು ವೇಳೆ ಐದಾರು ಪತ್ರಿಕೆಗಳಿದ್ದರೆ ಪ್ರತಿಯೊಬ್ಬರೂ ತಮ್ಮ ಪತ್ರಿಕೆಗೆ 50 ಕೋಟಿ ಮೀಸಲಿಟ್ಟಿದ್ದರೂ ಸ್ಪರ್ಧೆಯಲ್ಲಿ ಗೆಲ್ಲುವುದು ಇತರೆ ಮಾಧ್ಯಮದಿಂದ ಯಾವ ಸಂಸ್ಥೆ ಹೆಚ್ಚು ಲಾಭ ಪಡೆಯುತ್ತಿದೆಯೋ ಅದು ಮಾತ್ರ.

ಮುರ್ಡೋಕ್‌ಗೆ ಈ ಗುಟ್ಟು ಗೊತ್ತಾಯಿತು. ಆ ಕಾರಣಕ್ಕಾಗಿಯೇ ಆತ ಬೆಲೆ ಇಳಿಸುವ ತಂತ್ರ ಕಂಡುಹಿಡಿದ. ತನ್ನ ಪ್ರತಿಸ್ಪರ್ಧಿ ಪತ್ರಿಕೆ ಎಷ್ಟೇ ಜನಪ್ರಿಯವಾಗಿದ್ದರೂ, ಉತ್ತಮ ಸುದ್ದಿಗಳ ಮೂಲಕ ಒಳ್ಳೆಯ ಹೆಸರು ಪಡೆದಿದ್ದೂ, ಪ್ರಸಾರದಲ್ಲಿ ಎಷ್ಟೇ ಮುಂದಿದ್ದರೂ ಬೆಲೆ ಇಳಿಸುವುದರ ಮೂಲಕ ತನ್ನ ಕಳಪೆ ಪತ್ರಿಕೆಯನ್ನೇ ನಂ 1 ಮಾಡಲು ಸಾಧ್ಯ ಎಂಬುದನ್ನು ತೋರಿಸಿಕೊಟ್ಟ. ಬ್ರಿಟನ್‌ನಲ್ಲಿ ಈತ ದಿ ಟೈಮ್ಸ್ ಪತ್ರಿಕೆ ಕೊಂಡಾಗ ಮಾಡಿದ್ದು ಇದನ್ನೇ . ತನ್ನ ಬಳಿ ಇದ್ದ ಇತರೆ ವ್ಯವಹಾರಗಳಿಂದ ಬಂದ ಹಣದಿಂದಾಗಿ ಈತ ಆರ್ಥಿಕವಾಗಿಯೂ ಬಲಿಷ್ಠವಾಗಿದ್ದ ಪತ್ರಿಕೆಯನ್ನು ಮಣಿಸಿದ. -(ಬೆಲೆ ಬಾಕ್ಸ್ ನೋಡಿ)

ಎಲ್ಲರ ಬೆಲೆ 1.50 ರೂ.!



ಮೊದಲೆಲ್ಲಾ ಬೆಲೆ ಏರಿಸಬೇಕಾದರೆ ಎಲ್ಲಾ ಪತ್ರಿಕಾ ಸಂಸ್ಥೆಗಳ ಪ್ರತಿನಿಧಿಗಳು ಒಂದೆಡೆ ಸೇರುತ್ತಿದ್ದರು. ಸಾಧ್ಯಾನುಸಾಧ್ಯತೆ ಚರ್ಚಿಸುತ್ತಿದ್ದರು. ಕಾರಣ ಓದುಗರಿಗೆ ವಿವರಿಸಿ ಒಂದೇ ಬಾರಿಗೆ ಎಲ್ಲರೂ ಬೆಲೆ ಏರಿಸುತ್ತಿದ್ದರು. ***ಬೆಲೆ ಇಳಿಕೆಗೆ ನೀತಿ ಎಂಬುದೇ ಇಲ್ಲ. ಇರುವ ನೀತಿ ಸಂಹಿತೆ ಗಾಳಿಗೆ ತೂರಿ ಹಿಂಬಾಗಿಲಿನಿಂದ ನುಗ್ಗುವುದೇ ಇದರ ಕೆಲಸ - ಹಾಗಾಗಿ ಮೊದಲ ಬಾರಿಗೆ ವಿಜಯ ಕರ್ನಾಟಕ ಈ ಬೆಲೆ ಇಳಿಕೆ ತಂತ್ರಕ್ಕೆ ಕೈ ಹಾಕಿತು.***

ಗುಪ್ತ ಅಜೆಂಡಾ

ವಿಜಯ ಕರ್ನಾಟಕ ಎಂಬ ಹೊಸ ಪತ್ರಿಕೆ ಆರಂಭವಾಗುವಾಗ ಅದರ ಮುಂದೆ ಅನೇಕ ಬಲಶಾಲಿ ಪತ್ರಿಕೆಗಳಿದ್ದವು. *ಪ್ರಜಾವಾಣಿ, ಸಂಯುಕ್ತ ಕರ್ನಾಟಕ, ಕನ್ನಡ ಪ್ರಭ, ಉದಯವಾಣಿ, ಜನವಾಹಿನಿ* ಇವೆಲ್ಲವೂ ತಮ್ಮದೇ ಆದ ಕಾರಣಗಳಿಂದ ನಿರ್ದಿಷ್ಟ ಓದುಗರನ್ನೂ, ಉತ್ತಮ ಪ್ರಸಾರವನ್ನೂ ಹೊಂದಿದ್ದವು. ಈ ಪರಿಸ್ಥಿತಿಯಲ್ಲಿ ಹುಲಿಯಂತೆ ಹೋರಾಡುವುದಕ್ಕಿಂತ ಬೆನ್ನಿಗಿರಿದು ಕೊಲೆ ಮಾಡುವುದೇ ವಿಜಯ ಕರ್ನಾಟಕಕ್ಕೆ ಸುಲಭ ಎನ್ನಿಸಿತು. ಈ ಪಾಠ ಹೇಳಿಕೊಡಲು ದೂರದಲ್ಲಿ ಮುರ್ಡೋಕ್, ಹತ್ತಿರದಲ್ಲಿ ಟೈಮ್ಸ್ ಆಫ್ ಇಂಡಿಯಾ ಅಣ್ಣಂದಿರಿದ್ದರು. ವಿಜಯ ಕರ್ನಾಟಕಕ್ಕೆ 'ಗುಪ್ತ ಅಜೆಂಡಾ'ಗಳೂ ಇದ್ದವು. ಬೆನ್ನಿಗಿರಿದು ನುಗ್ಗುವುದು ಹೇಗೆ ಎಂಬುದನ್ನು ಈ ಗುಪ್ತ ಕಾರ್ಯಸೂಚಿಗಳ ನೇತಾರರು ತೋರಿಸಿಕೊಟ್ಟಿದ್ದರು ಹೀಗಾಗಿ ವಿಜಯ ಕರ್ನಾಟಕ ಹಿಂಬಾಗಿಲನ್ನೇ ಆಯ್ಕೆ ಮಾಡಿಕೊಂಡಿತು. ಬೆಲೆ ಇಳಿಸಿತು.

ಈ ಬೆಲೆ ಇಳಿಕೆ ಫಲ ಕೊಟ್ಟಿತು. ಪ್ರಸಾರದಲ್ಲಿ ಕ್ರಮೇಣ ನೆಗೆತ. ಕೊನೆಗೆ ಅದುವರೆಗೂ ಇದ್ದ ಪತ್ರಿಕೆಗಳಿಂದಲೇ ಓದುಗರು ವಿಜಯ ಕರ್ನಾಟಕಕ್ಕೆ ವಲಸೆ ಬಂದರು. ಆದರೂ ಸಹಾ ತಾವೆಲ್ಲರೂ ಬಲಶಾಲಿ ಎಂದೇ ಅಂದುಕೊಂಡಿದ್ದ *ಪ್ರಜಾವಾಣಿ, ಉದಯವಾಣಿ, ಸಂಯುಕ್ತ ಕರ್ನಾಟಕ* ಇವ್ಯಾವುವೂ ಇದರ ಮುಂದಿನ ಪರಿಣಾಮದ ಬಗ್ಗೆ ಯೋಚಿಸಲೇ ಇಲ್ಲ.

ಆದರೆ ಬಿಸಿ ತಾಕಲಾರಂಭಿಸಿದ್ದು ವಿಜಯ ಕರ್ನಾಟಕ ಲಕ್ಷಗಟ್ಟಲೆ ಓದುಗರನ್ನು ಪಡೆದು ಎಲ್ಲಾ ಪತ್ರಿಕೆಗಳನ್ನು ಹಿಂದಿಕ್ಕಿ ಮೊದಲ ಸ್ಥಾನಕ್ಕೇರಿದಾಗ. ಈಗ ಇತರೆ ಪತ್ರಿಕೆಗಳಿಗೆ ಪರಿಸ್ಥಿತಿಯ ಅರಿವಾಗಿದೆ. ವಿಜಯಕರ್ನಾಟಕ ಮಾರುಕಟ್ಟೆಯಲ್ಲಿ ನಂ 1 ಸ್ಥಾನದಲ್ಲಿದ್ದರೂ ಗರಿಷ್ಠ ಜಾಹೀರಾತನ್ನು ಪಡೆಯಲು ಸಾಧ್ಯವಾಗುತ್ತಿಲ್ಲ. ಇದಕ್ಕೆ ಕಾರಣ ವಿಜಯಕರ್ನಾಟಕ ಪ್ರಸಾರದ ಬಗ್ಗೆ ನಿಖರ ಮಾಹಿತಿ ನೀಡುವ **ಎಬಿಸಿ (ಆಡಿಟ್ ಬ್ಯೂರೋ ಆಫ್ ಸರ್ಕ್ಯುಲೇಷನ್)** ಸಂಸ್ಥೆಯ ಪ್ರಮಾಣ ಇನ್ನೂ ಸಿಕ್ಕಿಲ್ಲದಿರುವುದು. ಈ ಪ್ರಮಾಣ ಮಾತ್ರವೇ ಅಧಿಕೃತ. ಆಗ ಮಾತ್ರ ಜಾಹೀರಾತು ಸಂಸ್ಥೆಗಳೂ, ಸರ್ಕಾರದ ಜಾಹೀರಾತುಗಳೂ ಈ ಪತ್ರಿಕೆ-ಜಾಹಿರಾತು ನೀಡುವಾಗ ಮೊದಲ ಮನ್ನಣೆ ನೀಡುತ್ತದೆ.

ವಿಜಯ ಕರ್ನಾಟಕಕ್ಕೆ ಈ ಮನ್ನಣೆ ಸಿಗುವ ಕಾಲ ದೂರವಿಲ್ಲ. ಇನ್ನು ಕೆಲವು ತಿಂಗಳಲ್ಲಿಯೇ ಈ ಪ್ರಮಾಣ ಸಿಗುವ ಸಾಧ್ಯತೆ ಇದೆ. ಈ ಹಂತದಲ್ಲಿ ಇತರೆ ಪತ್ರಿಕೆಗಳು ಎಚ್ಚೆತ್ತಿವೆ. ಈಗ ಇಲ್ಲದಿದ್ದರೆ ಇನ್ನಿಲ್ಲ ಎಂಬ ಸ್ಥಿತಿಗೆ ಬಂದಿವೆ. ಆದ್ದರಿಂದ ಎಲ್ಲರೂ ದಿಢೀರನೆ ಪತ್ರಿಕೆಯ ಬೆಲೆಯನ್ನು ವಿಜಯ ಕರ್ನಾಟಕದಷ್ಟೇ 1.50 ರೂ. ಗೆ ಇಳಿಸಿದ್ದಾರೆ. ತಮ್ಮ ಓದುಗರನ್ನು ಮರಳಿ ವಾಪಸ್ ಪಡೆದು ವಿಜಯಕರ್ನಾಟಕವನ್ನು ಹಿಂದಿಕ್ಕುವ ಆ ಮೂಲಕ ಪ್ರಮಾಣ ಸಿಗದಂತೆ ಮಾಡುವ ಯತ್ನದಲ್ಲಿದ್ದಾರೆ.

ಪತ್ರಿಕೆಯ ಗುಣಮಟ್ಟಕ್ಕೂ ಪತ್ರಿಕೆಯ ಪ್ರಸಾರಕ್ಕೂ ಯಾವುದೇ ಸಂಬಂಧ ಇಲ್ಲ ಎಂಬುದನ್ನು ಈ ಬೆಲೆ ಇಳಿಕೆ ಮನವರಿಕೆ ಮಾಡಿಕೊಟ್ಟಿದೆ. ಹೇಗಾದರೂ ಸರಿ ಮಾರುಕಟ್ಟೆಯಲ್ಲಿ ನಂ1 ಸ್ಥಾನ ಗಿಟ್ಟಿಸಬೇಕು ಎಂದಾದರೆ ಎಂತಹ ಅನೈತಿಕ ಮಾರ್ಗದಿಂದಾದರೂ ಎದುರಾಳಿಯನ್ನು ಹೊಡೆದುರುಳಿಸಬೇಕು ಎಂಬುದೇ ಈಗಿನ ಸೂತ್ರ.

ಬೃಹತ್ ಕಂದರ ಸೃಷ್ಟಿ

ಬೆಲೆ ಇಳಿಕೆ ಸ್ಪರ್ಧೆ ಆಯ್ಕೆಯ ಅವಕಾಶವನ್ನು ಕಸಿಯುತ್ತದೆ ಎಂಬುದನ್ನು ಓದುಗರು ಮೊದಲು ನೆನಪಿನಲ್ಲಿಡಬೇಕು. ಸ್ಪರ್ಧೆ ಇದ್ದಾಗ ಪ್ರತಿ ಪತ್ರಿಕೆಯೂ ಓದುಗರ ಮರ್ಜಿ ಹಿಡಿಯುತ್ತದೆ. ಹಾಗಾಗಿ ಪ್ರತಿಯೊಂದು ಸುದ್ದಿಗೂ, ಪ್ರತಿ ರೀತಿಯ ಸುದ್ದಿಗೂ ಪತ್ರಿಕೆಗಳಲ್ಲಿ ಸ್ಥಾನವಿದೆ. ಆದರೆ ಬೆಲೆ ಇಳಿಸುವಿಕೆಯಿಂದ ದೀರ್ಘಕಾಲದಲ್ಲಿ ಮಾತ್ರ. ಆಗ ಆ ಪತ್ರಿಕೆ ಪ್ರಕಟಿಸಿದ್ದು ಮಾತ್ರ ಸುದ್ದಿ. ಹಣ ಬಲ ಇರುವ ಬಂಡವಾಳ ಶಾಹಿ ಸಂಸ್ಥೆಗಳು ಬಂಡವಾಳಿಗರ ಸುದ್ದಿಯನ್ನು ಅವರ ದೃಷ್ಟಿಕೋನವನ್ನು ಪ್ರಚಾರ ಮಾಡಲು ಬಯಸುತ್ತಿದೆಯೇ ಹೊರತು ರೈತಾಪಿ ಕೂಲಿಕಾರರನ್ನಲ್ಲ. ಮಹಿಳೆಯರ ದುಸ್ಥಿತಿ, ತೆಂಗಿನ ನುಸಿಪೀಡೆ, ಊರಿಗಿಲ್ಲದ ಸೇತುವೆ, ರೈತನ ಆತ್ಮಹತ್ಯೆ, ಹೋರಾಟ-ಧರಣಿ ಈ ಪತ್ರಿಕೆಗಳಿಗೆ ಸುದ್ದಿಯಲ್ಲ ಎಂಬುದನ್ನು ನೆನಪಿಡಬೇಕು. ಆಗ ಆ ಪತ್ರಿಕೆ ಕೊಟ್ಟದ್ದು ಮಾತ್ರ ಸುದ್ದಿ. ಸರ್ಕಾರ ಹಾಗೂ ಸಮಾಜದ ನಡುವೆ ಸಂಪರ್ಕ ಸೇತುವೆಯಾಗಿ ಇರಬೇಕಾದ ಪತ್ರಿಕೆ ಈಗ ಆ ಕೆಲಸವನ್ನು ಕೈ ಬಿಡುತ್ತದೆ. ಇದರಿಂದ ಜನರ ನೋವು ನಲಿವು ಸರ್ಕಾರಕ್ಕೆ ಅರಿವಾಗದೇ ಹೋಗುವ ಬೃಹತ್ ಕಂದರ ಉಂಟಾಗುತ್ತದೆ.

ಮಾತ್ರವಲ್ಲ, ಒಂದೇ ಪತ್ರಿಕೆ ಉಳಿದಾಗ ದೀರ್ಘಕಾಲದಲ್ಲಿ ಈ ...

...ಬೆಲೆ 'ಇಳಿಸಲು' ಸ್ಪರ್ಧೆ!

ಪುಟ 9 ರಿಂದ

ರಾಜಕೀಯ ಶಕ್ತಿಯಾಗಿ ಬದಲಾಗುತ್ತದೆ. ಪತ್ರಿಕೆಗಳಿಗೆ ಮಣೆ ಹಾಕುವ ಸರ್ಕಾರವನ್ನು ಈ ಸಂಸ್ಥೆಗಳು ಕುಣಿಸಲು ಆರಂಭಿಸುತ್ತವೆ. ಕೊನೆಗೆ ಈ ಮಾಧ್ಯಮ ಸಂಸ್ಥೆಗಳು ಸರ್ಕಾರದ ನೀತಿ ರೂಪಣೆಯಲ್ಲಿ ಮೂಗು ತೂರಿಸಲು ಆರಂಭಿಸುತ್ತವೆ. ಈ ಮಾಧ್ಯಮ ಸಂಸ್ಥೆಗಳಿಗೆ ಬೇಕಾದ್ದು ಸರ್ಕಾರದ ನೀತಿಯಾಗುವ ಅಪಾಯವಿದೆ. ಇದು ನಿಜ ಎಂಬುದನ್ನು ಮುರ್ಡೋಕ್ ಬ್ರಿಟನ್, ಆಸ್ಟ್ರೇಲಿಯಾ, ಅಮೆರಿಕಾದಲ್ಲಿ ನಿಜ ಮಾಡಿ ತೋರಿಸಿದ್ದಾನೆ.

ಇಷ್ಟಲ್ಲದೆ ಬೆಲೆ ಇಳಿಸುವಿಕೆ ಕೇವಲ ತಾತ್ಕಾಲಿಕ ಎಂಬುದನ್ನು ನೆನಪಿನಲ್ಲಿಡಬೇಕು. ಬೆಲೆ ಇಳಿಸುವ ಮಹದುಪಕಾರವನ್ನು ಮಾಧ್ಯಮ ಸಾಮ್ರಾಜ್ಯಶಾಹಿಗಳು ಮಾಡುವುದು ಸ್ಪರ್ಧೆ ಇರುವವರೆಗೆ ಮಾತ್ರ. ಯಾವಾಗ ಸ್ಪರ್ಧೆ ಇಲ್ಲವಾಯಿತೋ ಆಗ ಭಂಗನೆ ಬೆಲೆ ಮತ್ತೆ ಆಕಾಶಕ್ಕೆ ಏರುತ್ತದೆ. 1.50 ರೂ. ಎಂದು ಖುಷಿಪಡುತ್ತಿದ್ದ ಓದುಗ 10. ರೂ.ಗೆ ಪತ್ರಿಕೆ ಕೊಂಡು ಅಷ್ಟು ದಿನಗಳಿಗೆ ದಂಡ ಕಟ್ಟುವ ದಿನಗಳೂ ಬರುತ್ತವೆ.

ಬಲಶಾಲಿ ಜಾಹಿರಾತುದಾರರು!

ಜಾಹಿರಾತಿಗಾಗಿ ಇಷ್ಟೆಲ್ಲಾ ಸರ್ಕಸ್ ನಡೆಸುವಾಗ ಜಾಹೀರಾತುದಾರರು ಬಲಶಾಲಿಗಳಾಗುತ್ತಾರೆ. ಜಾಹಿರಾತು ನೀಡಬೇಕೆಂದಾದರೆ ತಮಗೆ ಬೇಕಾದ ಸುದ್ದಿ ಬರಬೇಕು ಎಂದು ಅಪೇಕ್ಷಿಸುತ್ತಾರೆ. ಲಿಪ್‌ಸ್ಟಿಕ್‌ನ ಜಾಹೀರಾತು ನೀಡುವ ಕಂಪನಿ ಸುಂದರ ತರುಣಿಯರ ಸೌಂದರ್ಯ ಸ್ಪರ್ಧೆಯ ಸುದ್ದಿ ಅಪೇಕ್ಷಿಸುತ್ತದೆಯೇ ಹೊರತು ನೀರಿಗಾಗಿ ದಿನಿ ಎತ್ತುವ ಮಹಿಳೆಯ ಸುದ್ದಿಯನ್ನಲ್ಲ. ಮಾನ್ಸಾಂಟೋ ಬೀಜದ ಕಂಪನಿ ಸಾವಯವ ಕೃಷಿಯ ಸುದ್ದಿ ಏಕೆ ಅಪೇಕ್ಷಿಸುತ್ತದೆ? ಸಕಲಿ ಬೀಜ ಮಾರುವ ಕಂಪನಿ ಅದರಿಂದಾಗಿಯೇ ಬದುಕು ಇಲ್ಲವಾಗಿಸಿಕೊಂಡ ರೈತ ಕುಟುಂಬಗಳ ಕಣ್ಣೀರಿನ ಸುದ್ದಿ ಏಕೆ ಬರಬೇಕು ಎಂಬುದಕ್ಕೆ ಮನ್ನಣೆ ಕೊಡುತ್ತದೆ. ಹಾಗಾಗಿ ಈ ಬೆಲೆ ಇಳಿಕೆ ಸ್ಪರ್ಧೆಯಲ್ಲಿ ಮೊದಲ ಬಲಿ 'ನಿಜ ಸುದ್ದಿ', ಮತ್ತೊಂದು ಬಲಿ ಓದುಗದಾರನದ್ದು.

ಮುರ್ಡೋಕ್ ಪರಿಣಾಮ

ಮುರ್ಡೋಕ್ ಒಡೆತನದ 'ದಿ ಟೈಮ್ಸ್' ಪತ್ರಿಕೆಗೆ ಇಂಗ್ಲೆಂಡ್‌ನಲ್ಲಿ ಹಲವು ಸ್ಪರ್ಧಿಗಳು. ದಿ ಟೈಮ್ಸ್ ಪತ್ರಿಕೆಯ ಪ್ರಸಾರಕ್ಕಿಂತ ಹಲವು ಪಟ್ಟು ಹೆಚ್ಚಿನ ಪ್ರಸಾರ ಇದ್ದದ್ದು ಕಾನ್ರಾಡ್ ಬ್ಲಾಕ್ ಒಡೆತನದ *'ದಿ ಡೈಲಿ ಟೆಲಿಗ್ರಾಫ್'* ಗೆ. *ಗಾರ್ಡಿಯನ್*, *ಇಂಡಿಪೆಂಡೆಂಟ್* ಪತ್ರಿಕೆಗಳೂ ಸಹ ಓದುಗರನ್ನು ಆಕರ್ಷಿಸುವಲ್ಲಿ ಯಶಸ್ವಿಯಾಗಿದ್ದವು. 'ಹರಿತ ಸುದ್ದಿ' ಯ ಪತ್ರಿಕೆ ಎಂದು ತನ್ನ ಪತ್ರಿಕೆಗೆ ಹೊಸ ರೂಪು ನೀಡಲು ಬಯಸಿದ ಮುರ್ಡೋಕ್ ಇದಕ್ಕಾಗಿ ರಾಜ ಪ್ರಭುತ್ವದ ವಿರುದ್ಧ ಸಾಕಷ್ಟು ಸುದ್ದಿಗಳನ್ನು ಪ್ರಕಟಿಸಿದರು. ಅದುವರೆಗೂ ಇಂಗ್ಲೆಂಡ್‌ನಲ್ಲಿ ಇದ್ದ ಪತ್ರಿಕೋದ್ಯಮದ ಕಲ್ಪನೆಯನ್ನು ಪತ್ರಿಕೆಗೆ ಹೊಸ ರೂಪ ನೀಡುವ ಹೆಸರಿನಲ್ಲಿ ಬದಲಿಸಲು ಆರಂಭಿಸಿದ ಮುರ್ಡೋಕ್ 'ಜನರಿಗೆ ಬೇಕಾದ್ದು ನೀಡಲು ಸಿದ್ದ' ಎಂದು ಘೋಷಿಸಿದರು.

ಈ ಎಲ್ಲಕ್ಕಿಂತ ಪರಿಣಾಮಕಾರಿ ಅಸ್ತ್ರ ಎಂದರೆ ಬೆಲೆಯನ್ನೇ ಇಳಿಸುವುದು ಎಂಬ ನಿರ್ಧಾರಕ್ಕೆ ಮುರ್ಡೋಕ್ ಬಂದದ್ದರಿಂದ 1993 ರ ಸೆಪ್ಟೆಂಬರ್‌ನಲ್ಲಿ ದಿ ಟೈಮ್ಸ್ ಪತ್ರಿಕೆಯ ಬೆಲೆಯನ್ನು 45 ಪೆನ್ಸ್‌ನಿಂದ 30 ಕ್ಕಿಳಿಸಲಾಯಿತು. ಒಂದೇ ತಿಂಗಳಲ್ಲಿ ದಿ ಟೈಮ್ಸ್ ಪ್ರಸಾರ 3.54 ಲಕ್ಷದಿಂದ 5.17 ಲಕ್ಷಕ್ಕೇರಿತು. ಅದೇ ಸಮಯದಲ್ಲಿ ಪ್ರತಿಸ್ಪರ್ಧಿ *ದಿ ಡೈಲಿ ಟೆಲಿಗ್ರಾಫ್*‌ನ ಪ್ರಸಾರ 13 ಲಕ್ಷದಿಂದ 9.93 ಲಕ್ಷಕ್ಕೆ ಕುಸಿಯಿತು.

ದಿ ಟೈಮ್ಸ್ ಒಂದೇ ದಿನದಲ್ಲಿ 73 ಸಾವಿರ ಪ್ರತಿಗಳನ್ನು ಹೆಚ್ಚಿಸಿಕೊಂಡು ಅಪಾಯದ ಸಂಕೇತಗಳನ್ನು ರವಾನಿಸಿದರೂ ಸಹ ಜಾಹೀರಾತಿನ ಬೆಂಬಲವಿದ್ದ *ಡೈಲಿ ಟೆಲಿಗ್ರಾಫ್* ಮಿಸುಕಾಡಲಿಲ್ಲ. ಆದರೆ ದಿನ ಕಳೆದಂತೆ ದಿ ಟೈಮ್ಸ್ ಪ್ರಸಾರ ಹೆಚ್ಚುತ್ತಲೇ ಹೋದಂತೆ ಜಾಹೀರಾತುದಾರರು ಸಹ ಟೆಲಿಗ್ರಾಫ್‌ನಿಂದ ಟೈಮ್ಸ್ ನೆಡೆಗೆ ವಲಸೆ ಆರಂಭಿಸಿದರು. ಮುಂದಿನ ಪರಿಣಾಮ ಗೊತ್ತಾದ *ದಿ ಡೈಲಿ ಟೆಲಿಗ್ರಾಫ್* ಕೂಡ ತನ್ನ ಬೆಲೆಯನ್ನು ದಿಢೀರನೆ 48 ರಿಂದ 30 ಪೆನ್ಸ್ ಗಿಳಿಸಿ ಸ್ಪರ್ಧೆಯ ಕಣಕ್ಕಿಳಿಯಿತು.

ದಿ ಡೈಲಿ ಟೆಲಿಗ್ರಾಫ್ ಬೆಲೆ ಇಳಿಸಿದ್ದೇ ತಡ ಮುರ್ಡೋಕ್ ಪತ್ರಿಕೆ ಬೆಲೆ ಪುನಃ 30 ರಿಂದ 20 ಪೆನ್ಸ್‌ಗಿಳಿಯಿತು. ಈ ಎರಡೂ ಪತ್ರಿಕೆಗಳ ಬೆಲೆ ಇಳಿಕೆಯ ಸಮರವನ್ನು ವೀಕ್ಷಿಸುತ್ತಿದ್ದ ಇತರ ಪತ್ರಿಕೆಗಳ ಬುಡಕ್ಕೂ ಕಾವು ತಗುಲಿತು. ಪತ್ರಿಕಾರಂಗದಲ್ಲಿ ಉಳಿಯುವ ಆಸೆ ಇದ್ದರೆ ಸ್ಪರ್ಧೆಯ ಕಣಕ್ಕೆ ಇಳಿಯಲೇಬೇಕಾದ ಅನಿವಾರ್ಯತೆಯನ್ನು ಉಂಟು ಮಾಡಿತು.

ಈ ಎರಡೂ ಪತ್ರಿಕೆಗಳ ಸ್ಪರ್ಧೆಯಿಂದಾಗಿ ಪ್ರಸಾರದಲ್ಲಿ ಆಗಲೇ ಸಾಕಷ್ಟು ಇಳಿಮುಖ ಕಂಡಿದ್ದ ದಿ ಇಂಡಿಪೆಂಡೆಂಟ್ ಪತ್ರಿಕೆ ಈ ಬೆಲೆ ಇಳಿಕೆಯ ಪೈಪೋಟಿಯಲ್ಲಿ ತತ್ತರಿಸತೊಡಗಿತು. ಕೊನೆಗೆ ಸ್ಪರ್ಧೆಯಲ್ಲಿ ಉಳಿಯಲಾಗದೇ ಕೇಳಿದ ಬೆಲೆಗೆ ಮಾರಾಟವಾಗುವ ಸ್ಥಿತಿ ತಲುಪಿತು. *ದಿ ಡೈಲಿ ಮಿರರ್* ಪತ್ರಿಕಾ ಬಳಗ *ಇಂಡಿಪೆಂಡೆಂಟ್* ಪತ್ರಿಕೆಯನ್ನು ಕೊಂಡುಕೊಂಡಿತು. *ದಿ ಇಂಡಿಪೆಂಡೆಂಟ್* ಬೆಲೆ 20 ಪೆನ್ಸ್‌ಗಿಳಿಯಿತು. *ದಿ ಗಾರ್ಡಿಯನ್* 6 ಮಿಲಿಯ ಪೌಂಡ್ ವಾರ್ಷಿಕ ನಷ್ಟ ಅನುಭವಿಸಿದರೆ *ದಿ ಅಬ್ಸರ್ವರ್* ಬಳಗ 12 ಮಿಲಿಯ ಪೌಂಡ್ ವಾರ್ಷಿಕ ನಷ್ಟವನ್ನು ಅನುಭವಿಸಿತು. ಇಬ್ಬರ ಜಗಳಲ್ಲಿ ಮೂರನೆಯವರಿಗೂ ನಷ್ಟ.

'ಆತ ನಮ್ಮನ್ನು ಕೊಲ್ಲಲು ಬಯಸಿದ್ದಾನೆ. ಅವನ ಗುರಿ *ಡೈಲಿ ಟೆಲಿಗ್ರಾಫ್*. ನಾವು ಸೋಲಲು ಇಷ್ಟಪಡುವುದಿಲ್ಲ" ಎಂದು *ಡೈಲಿ ಟೆಲಿಗ್ರಾಫ್*‌ನ ಮಾಲೀಕ ಕಾನ್ರಾಡ್ ಬ್ಲಾಕ್ ಹತಾಶೆ ವ್ಯಕ್ತಪಡಿಸಿದರು.

ಆರ್ಥಿಕವಾಗಿ ಅತ್ಯಂತ ಬಲಶಾಲಿಯಾದ ಪತ್ರಿಕೆ ಎಂದೇ ಹೆಸರುಗಳಿಸಿದ್ದ *ದಿ ಡೈಲಿ ಟೆಲಿಗ್ರಾಫ್*‌ನ ಹಿಂದೆ ಇದ್ದದ್ದು 41 ಮಿಲಿಯ ಪೌಂಡುಗಳ ಬಂಡವಾಳ. ಆದರೆ ಅದೇ ಮುರ್ಡೋಕ್‌ಗೆ ಪತ್ರಿಕೆ ಮಾತ್ರವೇ ಅಲ್ಲದೆ ಇತರ ಉದ್ಯಮಗಳೂ ಇದ್ದದ್ದರಿಂದ ಪತ್ರಿಕೆಯಲ್ಲಿ ಆದ ನಷ್ಟವನ್ನು ಭರಿಸಲು ಈ ಉದ್ಯಮಗಳು ನೆರವಿಗೆ ಬರುತ್ತಿದ್ದವು.

ಮುರ್ಡೋಕ್ ಅವರ ಒಟ್ಟು ವಹಿವಾಟುಗಳ ಆದಾಯ 439 ಮಿಲಿಯ ಪೌಂಡ್. 'ಆರ್ಥಿಕವಾಗಿ ಬಲಶಾಲಿ' ಎಂದೇ ಹೆಸರಾಗಿದ್ದ ಪತ್ರಿಕೆ ರೂಪರ್ಟ್ ಮುರ್ಡೋಕ್ ಅವರ ಮುಂದೆ ಎಷ್ಟು ದಿನ ಸ್ಪರ್ಧೆಯಲ್ಲಿತ್ತು ಎಂಬುದಕ್ಕೆ ಈ ಅಂಕಿ ಅಂಶ ಸಾಕು.

ಬೆನೆಟ್, ಕೋಲ್ಮನ್ ಮತ್ತು ಕಂಪನಿಗೆ ಈ ಯಶಸ್ಸು ತಾನು ಪತ್ರಿಕೆ ಹೊಂದಿರುವ ಎಲ್ಲಾ ಕಡೆ ಪ್ರತಿಸ್ಪರ್ಧಿಗಳನ್ನು ನಿವಾರಿಸಲು ಉತ್ತಮ ಬಾಣವಾಯಿತು. ರಾಜಧಾನಿಯಲ್ಲಿ 'ದಿ ಟೈಮ್ಸ್ ಆಫ್ ಇಂಡಿಯಾ' ಗೆ ಇದ್ದ ಪ್ರಮುಖ ಬಲವಾದ ಸ್ಪರ್ಧಿ ಹಿಂದೂಸ್ತಾನ್ ಟೈಮ್ಸ್. ಹಿಂದೂಸ್ತಾನ್ ಟೈಮ್ಸ್‌ನ್ನು ಮಣಿಸಲು ಬೆಲೆ ಇಳಿಕೆಯ ಅಸ್ತ್ರವನ್ನೇ ಬಳಸಲು ತೀರ್ಮಾನಿಸಲಾಯಿತು. ಟೈಮ್ಸ್ ಆಫ್ ಇಂಡಿಯಾ ಶುಕ್ರವಾರ ಹೊರತುಪಡಿಸಿ ಉಳಿದ ಎಲ್ಲಾ ದಿನಗಳಂದು ತನ್ನ ಬೆಲೆಯನ್ನು 2.40 ರಿಂದ 1.50 ರೂ. ಗಿಳಿಸಿತು. ಶುಕ್ರವಾರದ ಬೆಲೆಯನ್ನು 6 ರೂ. ಗೇರಿಸಲಾಯಿತು. ಮೂರು ವಾರಗಳ ನಂತರ ಶುಕ್ರವಾರದ ಬೆಲೆಯನ್ನು 2.90 ಕ್ಕಿಳಿಸಿತು. ಇದು ನಿರೀಕ್ಷಿತ ಪರಿಣಾಮವನ್ನು ನೀಡಿತು. ಆರಂಭದಲ್ಲಿಯೇ ಹೆಚ್ಚಿದ 20 ಸಾವಿರ ಪ್ರಸಾರದಲ್ಲಿ 5 ಸಾವಿರ ಓದುಗರು *ಹಿಂದೂಸ್ತಾನ್ ಟೈಮ್ಸ್*‌ನಿಂದ *ಟೈಮ್ಸ್ ಆಫ್ ಇಂಡಿಯಾ*ಗೆ ಹಾರಿದ್ದರು.

ಇದು ಎರಡೂ ಪತ್ರಿಕಾ ಬಳಗದನಡುವೆ ಸಮರಕ್ಕೆ ದಾರಿ ಮಾಡಿತು. ಬೆಲೆ ಇಳಿಕೆ ನಿರಂತರ ವಾಗಿರಲು ಸಾಧ್ಯವಿಲ್ಲ ಎಂದು ಭಾವಿಸಿದ *ಹಿಂದೂಸ್ತಾನ್ ಟೈಮ್ಸ್*, *ಟೈಮ್ಸ್ ಆಫ್ ಇಂಡಿಯಾ* ಮತ್ತೆ ತನ್ನ ಬೆಲೆ ಏರಿಸುವುದನ್ನು ಕಾಯುತ್ತಾ ಕುಳಿತಿತು. ಕೊನೆಗೆ *ಹಿಂದೂಸ್ತಾನ್ ಟೈಮ್ಸ್* ತನ್ನ ಬೆಲೆಯನ್ನು 1.50 ರೂ. ಗೆ ಇಳಿಸಿ ಶುಕ್ರವಾರದ ಪತ್ರಿಕೆಯ ಬೆಲೆಯನ್ನು 3 ರೂ. ಗೇರಿಸಿತು.

ಈ 'ಟೈಮ್ಸ್ - ಟೈಮ್ಸ್' ಸಮರ ಪತ್ರಿಕಾರಂಗದ ಅದುವರೆಗಿನ ವಾತಾವರಣದಲ್ಲಿ ಬಿರುಗಾಳಿ ಏಳಲು ಕಾರಣವಾಯಿತು. ಪತ್ರಿಕೆ ಹಂಚುವವರು ಈ ಬೆಲೆ ಇಳಿಕೆಯ ಸ್ಪರ್ಧೆಯಿಂದ ಕಂಗಾಲಾದರು. ಬೆಲೆ ಇಳಿದಂತೆಲ್ಲಾ ಅವರ ಆದಾಯವೇ ಕುಸಿಯ ತೊಡಗಿತು. ಇದರಿಂದ ಗಾಬರಿಗೊಂಡ ಪತ್ರಿಕೆ ಹಂಚುವವರು ಪತ್ರಿಕೆ ಹಂಚುವುದನ್ನು ನಿರಾಕರಿಸಿದರು. ಪತ್ರಿಕೆ ಹಂಚುವ ವ್ಯವಸ್ಥೆಯನ್ನೇ ಬುಡಮೇಲು ಮಾಡಲು ಟೈಮ್ಸ್ ಆಫ್ ಇಂಡಿಯಾ ಬಳಗವೇ ಪತ್ರಿಕೆ ವಿತರಿಸಲು ಸಜ್ಜಾಯಿತು. ಪತ್ರಿಕೆ ಹಂಚುವವರ ಮೇಲೆ ಪತ್ರಿಕಾ ಬಳಗದಿಂದ, ಪತ್ರಿಕಾ ಬಳಗದವರ ಮೇಲೆ ಪತ್ರಿಕೆ ಹಂಚುವವರಿಂದ ಹಲ್ಲೆ ನಡೆದ ಬಗ್ಗೆ ದೂರುಗಳು ದಾಖಲಾದವು. ಪತ್ರಿಕೆಯ ಬೆಲೆ ಇಳಿಸಲಾದರೂ ಮೊದಲು ನೀಡುತ್ತಿದ್ದ ಕಮಿಷನ್ನೇ ನೀಡಲಾಗುವುದು ಎಂಬ ಭರವಸೆ ಯನ್ನು ಪತ್ರಿಕಾ ಬಳಗ ನೀಡಿತು. 'ಅಂದರೆ ಆದಾಯ ಇನ್ನು ಏರುವ ಪ್ರಶ್ನೆಯೇ ಇಲ್ಲ' ಎಂಬ ಆತಂಕ ಪತ್ರಿಕಾ ವಿತರಕರದ್ದು.

........ಆಳುವ ವರ್ಗಗಳ ವಾದದಲ್ಲಿ ಹುರುಳಿಲ್ಲ

ಪುಟ 3 ರಿಂದ

ದಶಕದಲ್ಲಂತೂ ಪರಿಸ್ಥಿತಿ ತೀರಾ ಬದಲಾಗಿದೆಯೆಂದ ಅವರು ದೇಶದ 22 ಬೃಹತ್ ಕೈಗಾರಿಕೆಗಳು ಸ್ವಾತಂತ್ರ್ಯಾನಂತರದ 40 ವರ್ಷಗಳಲ್ಲಿ 500 ಪಟ್ಟು ಅಭಿವೃದ್ಧಿ ಕಂಡಿವೆ. ಟಾಟಾ, ಬಿರ್ಲಾ ಮುಂತಾದ ಬಂಡವಾಳಿಗರು ಗಳಿಸಿದ ಲಾಭವನ್ನು ಮರುಹೂಡಿಕೆ ಮಾಡಲು ಮುಂದಾಗುತ್ತಿಲ್ಲ. ಕಾರಣ ಉತ್ಪಾದಿಸಿದ ವಸ್ತುಗಳನ್ನು ಕೊಳ್ಳುವ ತಾಕತ್ತು ಜನತೆಗಿಲ್ಲ. ಶೇ 70 ಜನರ ಕೊಳ್ಳುವ ಶಕ್ತಿಯನ್ನು ಕುಂದಿಸುವ ಮೂಲಕ ಬಂಡವಾಳಶಾಹಿ ಅವರನ್ನು ಆರ್ಥಿಕ

ಇದಲ್ಲದೆ ಹಣಕಾಸು ಕೊರತೆಯನ್ನು ನೀಗಿಸುವುದಾದರೆ ಮಾತ್ರವೆ ಸಾಲ ನೀಡುತ್ತೇನೆನ್ನುವ ಐಎಂಎಫ್ ಶರತ್ತುಗಳನ್ನು ಪಾಲಿಸಿದ್ದರಿಂದಾಗಿ ಶಿಕ್ಷಣ, ಆರೋಗ್ಯ, ಗ್ರಾಮೀಣಾಭಿವೃದ್ಧಿ, ಪಡಿತರ, ಮೂಲಭೂತ ಪರಿಕರಗಳ ನಿರ್ಮಾಣ, ಪೂರೈಕೆ ಮುಂತಾದ ಸೌಕರ್ಯಗಳನ್ನು ಜನರಿಗೆ ವಂಚಿಸಿ, ಜನರಿಗಾಗಿ ಖರ್ಚು ಮಾಡುತ್ತಿದ್ದ ಹಣವನ್ನು ಐಎಂಎಫ್ ಸಾಲದ ಬಡ್ಡಿಗೆ ಜಮೆ ಮಾಡುತ್ತಿದೆ.

ಬಂಡವಾಳಶಾಹಿ ಬೆಳವಣಿಗೆಯ ಹಿತಕ್ಕೆ ಸಾಲ ತಂದು ದೇಶದ ಬಡಜನತೆ ಹಾಗೂ ದುಡಿಯುವ ಯೆಚೂರಿಯವರು ಬಣ್ಣಿಸಿದರು.

ಇಂತಹ ಸಂದರ್ಭದಲ್ಲಿ ರಿಯಾಯ್ತಿ ಪಡೆದು ಸರ್ಕಾರ ಯುದ್ಧಕ್ಕೆ ಮುಂದಾಗಿರುವಾಗ ಪರ್ಯಾಗಳೇನು?

ಪರ್ಯಾಗಳಿಲ್ಲವೇ?

. ಪರಿಹಾರವಿರುವುದು ಸಮಸ್ಯೆಯ ವೈಜ್ಞಾನಿಕ ವಿಶ್ಲೇಷಣೆಯಲ್ಲಿ ಬಿಕ್ಕಟ್ಟಿನ ಮೂಲವಿರುವುದು ಜನತೆಯ ಕೊಳ್ಳುವ ಶಕ್ತಿಯನ್ನು ಕುಂದಿಸಿರುವ ನೀತಿಗಳು. ಹೀಗಾಗಿ ಜನರ ಕೊಳ್ಳುವ ಶಕ್ತಿಯನ್ನು ಹೆಚ್ಚಿಸುವ ಮೂಲಕ ಆರ್ಥಿಕ ಬೆಳವಣಿಗೆಗೆ ದಾರಿ ಮಾಡಿಕೊಡುವುದು.

ಕೊಳ್ಳುವ ಶಕ್ತಿಯನ್ನು ಹೆಚ್ಚಿಸಲು ಬಹಳ ಪ್ರಮುಖವಾದ ಅಸ್ತ್ರ. ಭೂಸುಧಾರಣೆ - ಬೆಳವಣಿಗೆಯನ್ನು ತೋರಿಸಿಕೊಟ್ಟಿದೆ.

. ಸಾಮಾಜಿಕ, ಆರ್ಥಿಕ ಮೂಲ ಸೌಕರ್ಯಗಳನ್ನು ಒದಗಿಸುವ ಪ್ರಾಥಮಿಕ ಜವಾಬ್ದಾರಿಯನ್ನು ಸರ್ಕಾರ ನಿರ್ವಹಿಸಬೇಕು..... ಹೀಗೆ ವಿವರಿಸಿದರು.

ರಾಘವ ಕಲಾಮಂದಿರದಲ್ಲಿ ಆಯೋಜಿಸಿದ್ದ ವಿಚಾರಸಂಕಿರಣದಲ್ಲಿ ಕಿಕ್ಕಿರಿದು ಜನ ಪಾಲ್ಗೊಂಡಿದ್ದರು. ಅಧ್ಯಕ್ಷತೆಯನ್ನು ಖ್ಯಾತ ಅರ್ಥಶಾಸ್ತ್ರಜ್ಞ, ಡಾ॥ ಬಿ.ಶೇಷಾದ್ರಿ ವಹಿಸಿದ್ದರು. ಕಾಂ. ಸತ್ಯನಾರಾಯಣ ರಾವ್, ವಿಠ್ಠಲ್, ಪ್ರಸನ್ನಕುಮಾರ್, ಬಸವರಾಜು, ಎಸ್.ವೈ.ಗುರುಶಾಂತ್, ಶಿವಶಂಕರ್ ಮುಂತಾದವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಶೋಷಿತ ವರ್ಗದ ವಿಮೋಚನೆ - ಸಮಾಜ ಬದಲಾವಣೆಯ ಶಕ್ತಿಯಾಗಿ ಕಮ್ಯುನಿಸ್ಟ್ ಆಂದೋಲನ

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಕರ್ನಾಟಕ ರಾಜ್ಯ ಮಟ್ಟದ 17ನೇ ಸಮ್ಮೇಳನ 2002 ಜನವರಿ 28 ರಿಂದ 31 ರವರೆಗೆ ಬಳ್ಳಾರಿಯ ಕಾಂ.ಪಿ.ರಾಮಚಂದ್ರರಾವ್ ನಗರದಲ್ಲಿ ನಡೆಯಲಿದೆ.

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಸಮ್ಮೇಳನವೆಂದರೆ ಸಾಮೂಹಿಕ ವೈಜ್ಞಾನಿಕ ಅನ್ವೇಷಣೆ ಕ್ರಿಯೆ

ಭಾರತ ಕಮ್ಯೂನಿಸ್ಟ್ ಪಕ್ಷದ 17ನೇ ಸಮ್ಮೇಳನಗಳ ಸರಮಾಲೆ. ಈಗಾಗಲೇ ನವೆಂಬರ್ 2001 ರಿಂದ ಆರಂಭವಾಗಿದೆ. ಶಾಖಾ ಸಮ್ಮೇಳನಗಳು, ತಾಲ್ಲೂಕು ಸಮ್ಮೇಳನಗಳು ಹಾಗು ಜಿಲ್ಲಾ ಸಮ್ಮೇಳನಗಳು ಮುಗಿದಿವೆ. ಹಲವಾರು ರಾಜ್ಯ ಸಮ್ಮೇಳನಗಳು ಮುಗಿದಿವೆ. ಇನ್ನು ಕೆಲವೇ ದಿನಗಳಲ್ಲಿ ಕರ್ನಾಟಕ ರಾಜ್ಯ ಸಮ್ಮೇಳನವು ಬಳ್ಳಾರಿಯಲ್ಲಿ ನಡೆಯಲಿದೆ. ಮುಂದೆ ಮಾರ್ಚ್ 2002 ರಲ್ಲಿ ಆಂಧ್ರ ಪ್ರದೇಶದ ಹೈದರಾಬಾದಿನಲ್ಲಿ ರಾಷ್ಟ್ರಮಟ್ಟದ ಮಹಾಧಿವೇಶನ ನಡೆಯಲಿದೆ. ಈ ಸಂಬಂಧ ರಾಜಕೀಯ ನಿರ್ಣಯವನ್ನು ದೇಶಾದ್ಯಂತ ಚರ್ಚೆಗಾಗಿ ಈಗಾಗಲೇ ಬಿಡುಗಡೆ ಮಾಡಲಾಗಿದೆ.

ಪ್ರತಿ ಮೂರು ವರ್ಷಕ್ಕೊಮ್ಮೆ ಭಾರತದ ಸಮಾಜದ ಒಳಗಡೆಯ ಬದಲಾವಣೆಯ ಪ್ರಕ್ರಿಯೆಯನ್ನು ಅವುಗಳ ದಿಕ್ಕನ್ನು ಜನಜೀವನದ ಪರಿಸ್ಥಿತಿಯನ್ನು, ಚಿಂತನೆಯನ್ನು, ಜನರ ಮನಸ್ಸಿನ ಆಳದಲ್ಲಿ ಅಡಗಿರುವ ಆಶಯವನ್ನು ಅರ್ಥ ಮಾಡಿಕೊಳ್ಳುವ ಮಹಾ ಕೆಲಸ ಸಮ್ಮೇಳನಗಳ ಸರಪಳಿಯ ಕ್ರಿಯೆಯಲ್ಲಿ ನಡೆಯುತ್ತದೆ. ಸಮ್ಮೇಳನದಿಂದ ಸಮ್ಮೇಳನಕ್ಕೆ ಆಯಾ ಪ್ರದೇಶದ ವಾಸ್ತವತೆಯನ್ನು ಹೆಚ್ಚು ಹೆಚ್ಚು ನಿಖರವಾಗಿ ಮತ್ತು ನಿಕಟವಾಗಿ ಅರಿಯುವ ಕ್ರಿಯೆಯಲ್ಲಿ ಪಕ್ಷದ ಸಾಮಾನ್ಯ ಸದಸ್ಯರಿಂದ ಹಿಡಿದು ಕೇಂದ್ರ ಸಮಿತಿ ಹಾಗು ಪಾಲಿಟ್ ಬ್ಯೂರೊ ಸದಸ್ಯರವರೆಗೂ ಗಂಭೀರವಾಗಿ ತೊಡಗಿಕೊಳ್ಳುತ್ತಾರೆ.

ಮಾರ್ಕ್ಸ್‌ವಾದವೆಂದರೆ ವಿಜ್ಞಾನ ಎಂದು ಮಾರ್ಕ್ಸ್‌ವಾದದ ಉಗಮದ ಕಾಲದಿಂದಲೇ ಸಾಬೀತಾಗಿದೆ. ಆದ್ದರಿಂದ ಯಾವುದೇ ವಿಜ್ಞಾನ ತನ್ನ ವಸ್ತುವನ್ನು ವೈಜ್ಞಾನಿಕ ವಿಧಾನಗಳಿಂದ ವಿಶ್ಲೇಷಣೆ ಮಾಡುವಂತೆ ಮತ್ತು ಅರಿವನ್ನು ರೂಪಿಸುವಂತೆ ಮಾರ್ಕ್ಸ್‌ವಾದವು ಕೂಡ ಸಮಾಜದ ರಚನೆ ಮತ್ತು ಚಲನೆಯ ಬಗ್ಗೆ ವೈಜ್ಞಾನಿಕ ವಿಶ್ಲೇಷಣೆಯನ್ನು ಮಾಡುತ್ತದೆ. ಮಾರ್ಕ್ಸ್‌ವಾದ ಒಂದು ವಿಜ್ಞಾನ ಜೊತೆಗೆ ಸಮಾಜವನ್ನು ಬದಲಾಯಿಸುವ ತಂತ್ರಜ್ಞಾನವೂ ಹೌದು. ಹಾಗೆಯೇ ಮಾನವನ ರೋಗಗಳನ್ನು ಗುಣಪಡಿಸುವ ವೈದ್ಯಕೀಯ ವಿಜ್ಞಾನದಂತೆ ಸಮಾಜದ ಮೇಲೆ ಬಂದೆರಗಿರುವ ರೋಗಗಳನ್ನು ನಿವಾರಿಸಲು, ಅದರ ಮೂಲ ಕಾರಣ, ಚಿಕಿತ್ಸಾ ಕ್ರಮಗಳ ಬಗ್ಗೆ ತಿಳಿಸುವ ಕೆಲಸವನ್ನು ಮಾರ್ಕ್ಸ್‌ವಾದ ಮಾಡುತ್ತದೆ. ಮಾರ್ಕ್ಸ್‌ವಾದಕ್ಕೂ ಇತರ ವಿಜ್ಞಾನಗಳಿಗೂ ಇರುವ ವ್ಯತ್ಯಾಸವೆಂದರೆ ಮಾರ್ಕ್ಸ್‌ವಾದವು ಸಮಾಜದ ಒಟ್ಟು ದುಡಿಯುವ ಜನರನ್ನು ಈ ಸಮೂಹದ ಜೊತೆಯಲ್ಲಿ ಮಿಶ್ರಣಗೊಂಡಿರುವ ವಿಜ್ಞಾನಿ, ಬುದ್ಧಿಜೀವಿ, ಸಮೂಹವನ್ನು ಅನ್ವೇಷಣೆಯ ಕಾರ್ಯದಲ್ಲಿ ತೊಡಗಿಸುತ್ತದೆ. ಆದರೆ ಇತರೆ ವಿಜ್ಞಾನಿಗಳು ಈ ಕೆಲಸ ಮಾಡುವುದಿಲ್ಲ. ಹಾಗೂ ಮಾರ್ಕ್ಸ್‌ವಾದವು ಜನರಿಗೆ ವೈಜ್ಞಾನಿಕ ಅನ್ವೇಷಣೆಯ ವಿಧಾನಗಳನ್ನು ಕಲಿಸುತ್ತ ಸಾಮಾನ್ಯ ದುಡಿಯುವ ಜನರನ್ನು ವಿಜ್ಞಾನಿಗಳನ್ನಾಗಿ ತರಬೇಕೆಂದು ಮಾಡುವ ಒಂದು ಮಹಾ ವಿಜ್ಞಾನವಾಗಿದೆ.

ಹೀಗೆ ಮಾರ್ಕ್ಸ್‌ವಾದವು ಲಕ್ಷಗಟ್ಟಲೇ ದುಡಿಯುವ ಜನ ಸಾಮೂಹಿಕ ಹಾಗೂ ಪ್ರಜಾಸತ್ತಾತ್ಮಕ ಸಮಾಜ ವಿಜ್ಞಾನಿಗಳ ಸಂಶೋಧನೆಯ ಸಮಷ್ಠಿ ಕ್ರಿಯೆ. ಈ ಸಾಮೂಹಿಕ ಕ್ರಿಯೆ ಶಾಖಾ ಸಮ್ಮೇಳನದಿಂದ ಅಖಿಲ ಭಾರತದ ಸಮ್ಮೇಳನದವರೆಗೆ ಹಂತ ಹಂತವಾಗಿ ಮೇಲೇರುತ್ತಾ ಇಡೀ ಭಾರತವನ್ನೇ ತನ್ನ ತೆಕ್ಕೆಗೆ ತೆಗೆದುಕೊಳ್ಳುತ್ತದೆ. ○

ಕರ್ನಾಟಕ ಇತಿಹಾಸದಲ್ಲಿ ಕಮ್ಯೂನಿಸ್ಟ್ ಚಳುವಳಿ ಮಹತ್ವದ ಮೈಲಿಗಲ್ಲಾಗಿದೆ. ಭಾರತದ ಸ್ವಾತಂತ್ರ್ಯಕ್ಕಾಗಿ ಒಂದು ವಿಶಾಲ, ವ್ಯಾಪಕ ಮತ್ತು ಜನಪರ ದೃಷ್ಟಿಕೋನ ಕ್ಕಾಗಿ ಕಮ್ಯೂನಿಸ್ಟ್ ಪಕ್ಷ ಆರಂಭ ದಿಂದಲೂ ದುಡಿಯುತ್ತಾ ಬಂದಿದೆ. ಸ್ವಾತಂತ್ರ್ಯ ನಂತರವೂ ಭಾರತದ ಕಟ್ಟ ಕಡೆಯ ಶೋಷಿತ ದೀನ ದಲಿತರು ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವದ ಪೂರ್ಣ ಫಲವನ್ನು ಪಡೆಯಲೆಂದು ಶ್ರಮಿಸುತ್ತಿದೆ. ಭಾರತದಲ್ಲಿ ಪಾಳೆಗಾರಿಕೆಯ ದಬ್ಬಾಳಿಕೆಯನ್ನು ನಿರ್ಮೂಲನೆ ಮಾಡಿ ವ್ಯಾಪಕ ಭೂ- ಸುಧಾರಣೆಗಳನ್ನು ಜಾರಿಗೆ ತರಬೇಕೆಂದು ಹಳ್ಳಿಗಾಡಿನಲ್ಲಿ ಭೂಮಾಲೀಕರ ದೌರ್ಜನ್ಯಗಳು ಕೊನೆಯಾಗಬೇಕೆಂದು ಧ್ವನಿ ಎತ್ತಿದೆ. 'ಉಳುವವನೇ ಹೊಲದೊಡೆಯ' ಆಗಬೇಕೆಂಬ ಘೋಷಣೆ ಸ್ವಾತಂತ್ರ್ಯ ನಂತರದ ಕೇಂದ್ರ ಸರಕಾರಗಳು ಇದಕ್ಕೆ ಸಂಬಂಧಿಸಿದ ಕಾನೂನುಗಳನ್ನು ಜಾರಿಗೆ ತರುವ ಒತ್ತಡವನ್ನು ಉಂಟು ಮಾಡಿದೆ. ಸ್ವಾತಂತ್ರ್ಯಕ್ಕೆ ಮೊದಲು ಮತ್ತು ಸ್ವಾತಂತ್ರ್ಯದ ತಕ್ಷಣದ ದಿನಗಳಲ್ಲಿ ವೀರ ತೆಲಂಗಾಣ ತ್ರಿಪುರ ಮತ್ತು ಅಸ್ಸಾಂನ ಜನರ ಮಹತ್ವದ ಹೋರಾಟಗಳ ಮುಖಾಂತರ ಈ ನಂತರ ಕೇರಳ, ಪಶ್ಚಿಮ ಬಂಗಾಳ ರಾಜ್ಯಗಳ ಎಡರಂಗ ಸರಕಾರಗಳ ಮೂಲಕ ಭೂ - ಸುಧಾರಣೆಯನ್ನು ನಿಜವಾಗಿ ಜಾರಿಗೆ ತಂದಿರುವುದು ಕಮ್ಯುನಿಸ್ಟ್ ಚಳುವಳಿ ಮಾತ್ರವೇ ಆಗಿದೆ. ಹಾಗೆಯೇ ಗ್ರಾಮೀಣ ಜನರು ಅಧಿಕಾರದಲ್ಲಿ ಪಾಲ್ಗೊಳ್ಳುವ ಅಧಿಕಾರ ವಿಕೇಂದ್ರೀಕರಣವನ್ನು ಪಂಚಾಯತ್ ರಾಜ್ಯದ ಮೂಲಕ ಕಲ್ಪಿಸಿಕೊಟ್ಟದ್ದು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ನೇತೃತ್ವದ ಎಡರಂಗ ಸರಕಾರಗಳು. ಭಾರತವನ್ನು ವಿಭಜಿಸಬೇಕೆಂಬ ಸಾಮ್ರಾಜ್ಯಶಾಹಿಗಳ ಹಾಗೂ ಭಯೋತ್ಪಾದಕರ ಸಂಚುಗಳ ವಿರುದ್ಧ ಸೆಣಸುತ್ತಾ, ಪಂಜಾಬ್-ಕಾಶ್ಮೀರ, ಪಶ್ಚಿಮ ಬಂಗಾಳ, ಅಸ್ಸಾಂ, ತ್ರಿಪುರ ರಾಜ್ಯಗಳಲ್ಲಿ ಪ್ರಾಣತೆತ್ತವವರು ಸಿಪಿಎಂ ಪಕ್ಷದ ಸಮರಧೀರ ಕಾರ್ಯಕರ್ತರೇ ಆಗಿದ್ದಾರೆ. ಭಾರತ ಸ್ವಾತಂತ್ರ್ಯದ ಆರಂಭದ ದಿನಗಳಿಂದಲೇ ಜಾರಿಗೆ ಬಂದ ದುಡಿಯುವ ಜನ ವಿರೋಧಿ ಬಂಡವಾಳಶಾಹಿ ಆರ್ಥಿಕ ನೀತಿಗಳ ವಿರುದ್ಧ ಸೆಣಸುತ್ತ ಪರ್ಯಾಯ ಅಭಿವೃದ್ಧಿಯ ಪಥವನ್ನು ತೋರಿಸಿರುವುದು ಸಿಪಿಎಂ ಪಕ್ಷ ಮಾತ್ರವಾಗಿದೆ. ಈ ನಿಟ್ಟಿನಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ ಪಕ್ಷಗಳ ವಿರುದ್ಧವಾಗಿ ಮೂರನೇಯ ರಾಜಕೀಯ ರಂಗವನ್ನು ಸ್ಥಾಪಿಸಲು ನಿರಂತರವಾಗಿ ಶ್ರಮಿಸುತ್ತ ದೇಶದಲ್ಲಿ ಜನಮಾನ್ಯತೆಯನ್ನು ಗಳಿಸಿರುವುದು ತಿಳಿದ ವಿಷಯವಾಗಿದೆ.

ಕರ್ನಾಟಕ ರಾಜ್ಯದಲ್ಲಿ ಕಮ್ಯುನಿಸ್ಟ್ ಚಳುವಳಿ 1939 ರಂದಲೇ ಜನಜಾಗೃತಿ ಸಂಘವಾಗಿ ಆರಂಭಗೊಂಡಿದೆ. ಕರ್ನಾಟಕದಲ್ಲಿ ರೈತ-ಕಾರ್ಮಿಕರನ್ನು ಸಂಘಟಿಸುತ್ತ ಈ ಹೋರಾಟವನ್ನು ಸ್ವಾತಂತ್ರ್ಯ ಚಳುವಳಿಯ ಜೊತೆಗೆ ಮೇಳೈಸಲು ಶ್ರಮಿಸಿದೆ. 1943 ರಲ್ಲಿ ಬಾಂಬೆಯಲ್ಲಿದ್ದ ಪಕ್ಷದ ಕೇಂದ್ರ ಸಮಿತಿ ಕರ್ನಾಟಕದಲ್ಲಿ ಕಮ್ಯೂನಿಸ್ಟ್ ಚಳುವಳಿ

ಜಿ.ಎನ್.ನಾಗರಾಜ್

ಕಟ್ಟಲು ಕಾಂ. ಎನ್.ಎಲ್. ಉಪಾಧ್ಯಾಯ, ಕಾಂ. ಎನ್.ಕೆ. ಉಪಾಧ್ಯಾಯ ಇವರನ್ನು ನಿಯೋಜಿಸಿತು. ಈ ಕಾರಣದಿಂದ ಕರ್ನಾಟಕಕ್ಕೆ ಬಂದ ಈ ಸಂಗಾತಿಗಳು ಬೆಂಗಳೂರು, ಹುಬ್ಬಳ್ಳಿಗಳನ್ನು ಕೇಂದ್ರ ಮಾಡಿಕೊಂಡು ಕಮ್ಯೂನಿಸ್ಟ್ ಚಳುವಳಿಯನ್ನು ನೆಲೆಗೊಳಿಸಿದರು. ಇದೇ ಸಮಯದಲ್ಲಿ ಮಲಬಾರ್ ರೈತ ಚಳುವಳಿಯ ಪ್ರಭಾವದಿಂದಾಗಿ ದ.ಕನ್ನಡ ಜಿಲ್ಲೆಯಲ್ಲಿ ಕಮ್ಯೂನಿಸ್ಟ್ ಚಳುವಳಿಗಳು ಹುಟ್ಟಿಕೊಂಡವು. ಮಹಾರಾಷ್ಟ್ರದಿಂದ ಗಡಿಪಾರು ಮಾಡಲ್ಪಟ್ಟ ಕಾಂ. ಶಾಮರಾವ್ ಪುರಳೇಕರ್ ಕರ್ನಾಟಕದ ಉತ್ತರ-ಕನ್ನಡ ಜಿಲ್ಲೆಗೆ ಬಂದು ತಾತ್ಕಾಲಿಕವಾಗಿ ನೆಲೆಸಿದರು. ಇದರೊಂದಿಗೆ ಬಾಂಬೆಯಲ್ಲಿಯೇ ಕಮ್ಯೂನಿಸ್ಟ್ ಪ್ರಭಾವಕ್ಕೆ ಒಳಗಾಗಿದ್ದ ದಿನಕರ ದೇಸಾಯಿ ಸೇರಿಕೊಂಡು ಗೇಣಿಯ ರೈತರ ಚಳುವಳಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಕಮ್ಯೂನಿಸ್ಟ್ ಚಳುವಳಿ ಪ್ರಾರಂಭಕ್ಕೆ ನಾಂದಿಯಾಯಿತು. ಹುಬ್ಬಳ್ಳಿಯಿಂದ ಗಡಿಪಾರು ಮಾಡಲ್ಪಟ್ಟು ಬಿಜಾಪುರಕ್ಕೆ ಬಂದು ನೆಲೆಸಿದ ಕಾಂ. ಎನ್.ಕೆ. ಉಪಾಧ್ಯಾಯ ಮೂಲಕ ಬಿಜಾಪುರಕ್ಕೆ ಕಮ್ಯೂನಿಸ್ಟ್ ಚಳುವಳಿ ಹುಟ್ಟಿಕೊಂಡಿತು. ವೀರ ತೆಲಂಗಾಣ ಹೋರಾಟದ ಪ್ರಭಾವದಿಂದಾಗಿ ಕರ್ನಾಟಕದ ಗುಲ್ಬರ್ಗಾ ಜಿಲ್ಲೆಯಲ್ಲಿ ಕಮ್ಯೂನಿಸ್ಟ್ ಹೋರಾಟಗಳು ಹುಟ್ಟಿಕೊಂಡವು.

ಹೀಗೆ ಕರ್ನಾಟಕದ ವಿವಿಧ ಪ್ರದೇಶಗಳಲ್ಲಿ ಹಬ್ಬಿದ ಕಮ್ಯೂನಿಸ್ಟ್ ಚಳುವಳಿಯೇ ರಾಜ್ಯದ ಮೊಟ್ಟ ಮೊದಲ ರೈತ ಚಳುವಳಿಯ ಹರಿಕಾರವಾಯಿತು. ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಲೇ ಈ ಹೋರಾಟವನ್ನು ಕರ್ನಾಟಕ ಏಕೀಕರಣ ಚಳುವಳಿಯೊಂದಿಗೆ ಹಾಗೂ ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರೀ ಸರಕಾರದ ಉದಯಕ್ಕಾಗಿ ನಡೆಸಿದ ಚಳುವಳಿಯೊಂದಿಗೆ ಬೆಸೆಯಿತು.

ಕರ್ನಾಟಕ ಏಕೀಕರಣ ಚಳುವಳಿಗೆ ಕಮ್ಯೂನಿಸ್ಟ್ ನಾಯಕರು ಕೊಟ್ಟ ಕೊಡುಗೆ ಅಪಾರ. ಅಖಿಲ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್‌ನಲ್ಲಿ ಒಂದು ನಿರ್ಣಾಯಕ ಶಕ್ತಿಯಾಗಿ ಏಕೀಕರಣ ಚಳುವಳಿಗೆ ನೇತೃತ್ವ ನೀಡಿದೆ. ಅಂದಿನಿಂದ ಇಂದಿನವರೆಗೂ ಕರ್ನಾಟಕದ ಸಾಮಾಜಿಕ - ಆರ್ಥಿಕ - ರಾಜಕೀಯ - ಸಾಂಸ್ಕೃತಿಕ ಬೆಳವಣಿಗೆಗಳನ್ನು ವಿಶ್ಲೇಷಣೆ ಮಾಡುತ್ತ ಈ ಎಲ್ಲಾ ಕ್ಷೇತ್ರಗಳಲ್ಲಿ ಜನಪರ ಪರ್ಯಾಯವನ್ನು ರೂಪುಗೊಳಿಸಲು ಶ್ರಮಿಸುತ್ತಾ ಬಂದಿದೆ. ಏಕೀಕರಣವಾದ ಕೂಡಲೇ 1957 ರಲ್ಲಿ ಕರ್ನಾಟಕದ ವಿವಿಧ ಭಾಗಗಳಲ್ಲಿ ಚದುರಿ ಹೋಗಿದ್ದ ರೈತ ಚಳುವಳಿಯನ್ನು ಒಗ್ಗೂಡಿಸಿ ಕರ್ನಾಟಕ ಪ್ರಾಂತ ರೈತ ಸಂಘವನ್ನು ರಚಿಸಿದ ಹಿರಿಮೆ ಅಂದಿನ ಕಮ್ಯೂನಿಸ್ಟ್ ಪಕ್ಷಕ್ಕೆ ಇದೆ.

ಅದೇ ರೀತಿಯಲ್ಲಿ ಕಾರ್ಮಿಕ ಚಳುವಳಿ ಗಳನ್ನು ಒಗ್ಗೂಡಿಸಿ ಕರ್ನಾಟಕ ಪ್ರಾದೇಶಿಕ ಟ್ರೇಡ್ ಯೂನಿಯನ್ ಕಾಂಗ್ರೆಸ್ ರಚಿಸಿ (K.P.T.U.C) ರಾಜ್ಯದ ಕಾರ್ಮಿಕ ಚಳುವಳಿಗೆ ಕ್ರಾಂತಿಕಾರಿ ದಿಕ್ಕನ್ನು ಕೊಡಲು ಶ್ರಮಿಸಿದೆ. ಕರ್ನಾಟಕದ ಪ್ರಖ್ಯಾತ ಸಾಹಿತಿ ನಿರಂಜನರ ನೇತೃತ್ವದಲ್ಲಿ ಪ್ರಗತಿ ಶೀಲ ಸಾಹಿತ್ಯ ಚಳುವಳಿಗೆ ಸ್ಫೂರ್ತಿ ನೀಡಿದ್ದು ಕಮ್ಯೂನಿಸ್ಟ್ ಪಕ್ಷ. ಇದೇ ಸಮಯದಲ್ಲಿ ಎಂ.ಎಸ್.ಕೃಷ್ಣನ್, ಸೂರ್ಯನಾರಾಯಣ ರಾವ್ ಮುಂತಾದವರ ನೇತೃತ್ವದಲ್ಲಿ ವಿದ್ಯಾರ್ಥಿ ಸಂಘಟನೆ ಆರಂಭವಾಯಿತು.

ಹೀಗೆ ಕನ್ನಡಿಗರ ಬೆಳವಣಿಗೆಗಾಗಿ ಕರ್ನಾಟಕದ ಅಭಿವೃದ್ಧಿಗಾಗಿ, ಕರ್ನಾಟಕ ಏಕೀಕರಣದ ಅಗತ್ಯವನ್ನು ಮನಗಂಡು ಹೋರಾಟ ನಡೆಸಲು ಕರೆ ನೀಡಿದ ಕಮ್ಯೂನಿಸ್ಟ್ ಪಕ್ಷದ ಒಂದು, ಎರಡು, ಮೂರು ಮತ್ತು ನಾಲ್ಕನೇಯ ರಾಜ್ಯ ಸಮ್ಮೇಳನಗಳು ಕರ್ನಾಟಕದ ಇತಿಹಾಸಕ್ಕೆ ಪ್ರಮುಖ ಕೊಡುಗೆ.

(ಮುಂದುವರಿಯುವುದು)

ಸಮುದಾಯ - ಬೆಳ್ಳಿ ಹಬ್ಬ ಸಂಭ್ರಮ

ಪುಟ 12 ರಿಂದ

ಸಹ ಸಮುದಾಯದ ಬದ್ಧತೆಯನ್ನು ಹಬ್ಬಿಗೊಳಿಸಿದೆ. ಕಲೆಗಾಗಿ ಕಲೆಯಲ್ಲ ಜನರಿಗಾಗಿ ಕಲೆ' ಎನ್ನುವ ಮೂಲಕ ರಂಗಭೂಮಿಗೆ ಒಂದು ಹೊಸ ಪರಿಭಾಷೆಯನ್ನು ನೀಡಿ ಅವರಲ್ಲಿ ಯಶಸ್ಸು ಪಡೆದ ಕೀರ್ತಿ ಸಮುದಾಯದ್ದು. ಸಮಾಜದಲ್ಲಿ ಶೋಷಣಾರಹಿತ ಸಮಾಜವನ್ನು ನಿರ್ಮಿಸುವುದು ಹಾಗೂ ಇಂತಹ ಗುರಿಯುಳ್ಳ ರಾಜಕೀಯ ಪಕ್ಷಗಳನ್ನು ಬೆಂಬಲಿಸುವುದು ಕರ್ತವ್ಯವೆಂದೇ ಸಮುದಾಯ ಭಾವಿಸಿದೆ. ದೇಶದ ಸಾಮಾಜಿಕ, ರಾಜಕೀಯ, ಆರ್ಥಿಕ ಸ್ಥಿತಿಗಳನ್ನು ಜನಪರ ಸೈದ್ಧಾಂತಿಕ ನೆಲೆಗಟ್ಟಿನಲ್ಲಿ ವಿಶ್ಲೇಷಿಸುವ ಹಾಗೂ ಆ ಮೂಲಕ ಜನರನ್ನು ಎಚ್ಚರಿಸುವ ಭಾಗವಾಗಿ ಸಮುದಾಯ ಸಾಂಸ್ಕೃತಿಕ ಜಾಥಾಗಳನ್ನು, ವಿಚಾರ ಸಂಕಿರಣಗಳನ್ನು ಏರ್ಪಡಿಸಿದೆ.

ನಡೆದ ಹಾದಿಯ ಪುನರಾವಲೋಕನ

ಸಮುದಾಯ ತಾನು ನಡೆದುಬಂದ ಹಾದಿಯ ಪುನರಾವಲೋಕನಕ್ಕಾಗಿ ಅನೇಕ ನಾಟಕೋತ್ಸವ ಕಳೆದಿದ್ದರೂ ಈಗ ಬೆಳ್ಳಿ ಹಬ್ಬವನ್ನು ಇತರ ಘಟಕಗಳ ನೆರವಿನಿಂದ ಸಂಘಟಿಸುತ್ತಿದೆ.

ಕೇವಲ ಉತ್ಸವಕ್ಕಾಗಿ ಉತ್ಸವ ಮಾಡದೆ ನಮ್ಮ ಮುಂದಿರುವ ಸಮಸ್ಯೆಗಳಿಗೆ ಸ್ಪಂದಿಸುವಂತಹ ಕ್ರಿಯಾಶೀಲ ಸಮಾಜದ ನಿರ್ಮಾಣಕ್ಕಾಗಿ ಹಲವಾರು ಸಾಂಸ್ಕೃತಿಕ ಚಟುವಟಿಕೆಗಳನ್ನು ಈ ಸಂದರ್ಭದಲ್ಲಿ ಹಮ್ಮಿಕೊಂಡಿದೆ.

ಸಮುದಾಯ ಜನಸಂಸ್ಕೃತಿ ಉತ್ಸವ - 2002 : ಪ್ರಸ್ತುತ ಭಾರತದ ಅನೇಕ ಗೊಂದಲಗಳಿಗೆ ಉತ್ತರವನ್ನು ಹುಡುಕಲು ಪ್ರಯತ್ನಿಸುತ್ತಿದೆ. ದೇಶದ ಸಾರ್ವಭೌಮತ್ವಕ್ಕೆ ಧಕ್ಕೆ ತರುತ್ತಿರುವ ಮತೀಯ ಮೂಲಭೂತವಾದ ಮತ್ತು ಭಯೋತ್ಪಾದನೆ ದಟ್ಟವಾಗಿ ಹಬ್ಬಿರುವ ಸಮರದ ಕಾರ್ಮೋಡಗಳು, ಆರ್ಥಿಕ ಸುಧಾರಣೆಯ ಹೆಸರಿನಲ್ಲಿ ದೇಶದ ಹಾಗೂ ಏಕಮುಖಿ ಸಂಸ್ಕೃತೀಕರಣದ ಅಬ್ಬರ ಇವುಗಳಲ್ಲಿ ಭಾರತದ, ಸಂಕೀರ್ಣ ಸ್ಥಿತಿಯ ವಾಸ್ತವ ಚಿತ್ರಗಳು. ಇಂತಹ ಭೀಕರ ಸಂದರ್ಭದಲ್ಲಿ ಹೊಸ ಬೆಳಕು, ಹೊಸ ದಾರಿ ಕಾಣಲು, ಸಮುದಾಯ ತನ್ನ ಸಾಂಸ್ಕೃತಿಕ ನೆಲೆಯಲ್ಲಿ ಪ್ರಯತ್ನಿಸುತ್ತಿದೆ.

ವಿಶೇಷ ಕಾರ್ಯಕ್ರಮಗಳು


ಜನವರಿ 30	ಸಂಜೆ	ಜನಸಂಸ್ಕೃತಿ ಉತ್ಸವ ಉದ್ಘಾಟನೆ
ಜನವರಿ 31	ಬೆ. 11	ನೆನಪಾದಳು ಶಕುಂತಲೆ
	ಸಂ 7	ದಂಡೆ
ಫೆಬ್ರವರಿ 1	ಬೆ.	ದಂಗೆಯ ಮುಂಚಿನ ದಿನಗಳು
	ಸಂ. 7	ಸ್ಮಶಾನ ಕುರುಕ್ಷೇತ್ರ
	ರಾ. 8	ಉರುಳು
ಫೆಬ್ರವರಿ 2	ಬೆ. 11	ಟ್ರಾಯ್‌ನ ಹೆಂಗಸರು
	ಸಂ. 6.30	ಸಿಂಗಾರವ್ವ ಮತ್ತು ಅರಮನೆ
	ಸಂ. 7.30	ಮಲ್ಲಿನಾಥ ಧ್ಯಾನ
ಫೆಬ್ರವರಿ 3	ಬೆ.	ಮಹಾಮಾಯಿ
	ಸಂ. 7	ಮಾಗಿಯ ಹೂಗಳು
ಫೆಬ್ರವರಿ 4	ಬೆ. 11	ಮಾತೃತ

ಜನಸಂಸ್ಕೃತಿ ಜಾಥಾ - 2002 ಅಂಗವಾಗಿ ಬೆಂಗಳೂರು ಸೇರಿದಂತೆ ಸಮುದಾಯ ಘಟಕಗಳು ಸಕ್ರಿಯವಾಗಿರುವ ಎಲ್ಲಾ ಸ್ಥಳಗಳಲ್ಲಿ ಅರ್ಥಪೂರ್ಣ ವಿಚಾರಸಂಕಿರಣಗಳು ನಡೆಯಲಿವೆ. ಜನವರಿ 27 ರಂದು 'ಧರ್ಮ ಮೂಲಭೂತವಾದ ಮತ್ತು ಜಾಗತೀಕರಣ ಹಾಗೂ ಸಮಕಾಲೀನ ಸಾಂಸ್ಕೃತಿಕ ಬಿಕ್ಕಟ್ಟುಗಳು' ಈ ವಿಷಯ ಕುರಿತು ವಿಚಾರ ಸಂಕಿರಣ ಪುಸ್ತಕ ಬಿಡುಗಡೆ, ನಾಟಕ ಕೃತಿ ಬಿಡುಗಡೆ ಕಾರ್ಯಕ್ರಮ ಏರ್ಪಡಿಸಲಾಗಿದೆ. ಜನವರಿ 30 ರಂದು ಆರಂಭಗೊಳ್ಳುವ ಸಮುದಾಯದ ವಿವಿಧ ಘಟಕಗಳಿಂದ ನಾಟಕೋತ್ಸವ ಹಾಗೂ ಬೆಂಗಳೂರಿನ ಪ್ರತಿಷ್ಠಿತ ಕಾಲೇಜುಗಳ ವಿದ್ಯಾರ್ಥಿ ರಂಗೋತ್ಸವ ಈ ಸಂದರ್ಭದಲ್ಲಿನ ವಿಶೇಷ ಆಕರ್ಷಣೆ.

ಸಮುದಾಯ ತನ್ನ ಸಾಂಸ್ಕೃತಿಕ ಪರಂಪರೆಯನ್ನು ಹೆಚ್ಚು ಸ್ಪಷ್ಟವಾಗಿ ಹಾಗೂ ಹೆಚ್ಚು ಬದ್ಧತೆಯಿಂದ ಉಳಿಸಿಕೊಳ್ಳುವ ಮೂಲಕ ಶಾಂತಿ, ಸೌಹಾರ್ದ ಹಾಗೂ ನೆಮ್ಮದಿಯ ನಾಳೆಗಳನ್ನು ಹುಡುಕುವತ್ತ ಶೋಷಣಾ ಮತ್ತು ಸಮಾನತೆಯ ಭಾರತದ

ಸಾರಾ ಅಬೂಬಕರ್ ಅವರಿಗೆ 'ಅತ್ತಿಮಬ್ಬೆ' ಪ್ರಶಸ್ತಿ

ಸಾರಾ ಸದಾ ಜನತೆಯ ಜೊತೆ ನಿಂತವರು ನೊಂದವರೆದೆಯ ನೋವಿನ ಕೂಗಾಗಿ, ಪ್ರಗತಿಪರ ಚಳುವಳಿಯಲ್ಲಿ, ಸಾಹಿತ್ಯಕ್ಷೇತ್ರದಲ್ಲಿಯೂ ಬೆಳೆತವರು, ಬೆಳೆದವರು. ಜನವಾದಿ ಮಹಿಳಾ ಸಂಘಟನೆಯ ನೆಚ್ಚಿನ ಗೆಳತಿಯಾಗಿ, ಇತ್ತೀಚೆಗೆ ಮಂಗಳೂರಿನಲ್ಲಿ ನಡೆದ ರಾಜ್ಯ ಸಮ್ಮೇಳನದ ಸ್ವಾಗತ ಮಸಿತಿಯ ಅಧ್ಯಕ್ಷೆಯಾಗಿ ದುಡಿದವರು, ಜನರ ಸಂಕಟ, ಸಂವೇದನೆಗಳಿಗೆ ತುಡಿದವರು. ಇಂತಹ ಕಡಲ ತಡಿಯ ಸಾರಾ ಅಬೂಬ್ಕರ್‌ಗೆ 'ಅತಿಮಬ್ಬೆ' ಪ್ರಶಸ್ತಿ ದೊರೆತದ್ದು ಈ ಕ್ಷಣಗಳು ಎಲ್ಲಾ ಪ್ರಗತಿಪರರಲ್ಲಿ ಸಂಭ್ರಮದ ಹೊನಲು.



ಈ ಸಾಲಿನ ಪ್ರತಿಷ್ಠಿತ ದಾನಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ ಹಿರಿಯ ಲೇಖಕಿ, ಮಂಗಳೂರಿನ ಸಾಲಾ ಅಬೂಬಕರ್ ಅವರಿಗೆ ಸಂದಿದೆ.

ಮುಸ್ಲಿಂ ಸಮುದಾಯದ ಹೆಣ್ಣು ಮಕ್ಕಳ ನೋವಿಗೆ ದನಿ ನೀಡುವ ಮೂಲಕ ಕನ್ನಡಿಗರಿಗೆ ಪರಿಚಯವಾದ ಸಾರಾ ಇಂದು ಹೆಣ್ಣು ಮಕ್ಕಳ ಹಕ್ಕುಗಳ ಸಂರಕ್ಷಣೆ, ಮಹಿಳೆಯರ ಸ್ವತಂತ್ರ ಅಸ್ತಿತ್ವದ ಹೋರಾಟ ಹಾಗೂ ಪ್ರಗತಿಪರ ಚಿಂತನೆಗಳ ಪ್ರತಿಪಾದನೆಯಲ್ಲಿ ಮುಂಚೂಣಿಯಲ್ಲಿರುವವರು.

'ಚಂದ್ರಗಿರಿಯ ತೀರದಲ್ಲಿ' ಕಾದಂಬರಿಯಿಂದ ಮೊದಲುಗೊಂಡು 7 ಕಾದಂಬರಿಗಳು ಮತ್ತು 4 ಕಥಾ ಸಂಕಲನಗಳನ್ನು ಪ್ರಕಟಿಸಿರುವ ಸಾರಾ ಧಾರ್ಮಿಕ ಆಚರಣೆಗಳ ಹೆಸರಿನಲ್ಲಿ ಅಡಗಿರುವ ಮಹಿಳೆಯರ ಶೋಷಣೆಯ ಪದರಗಳನ್ನು ತಮ್ಮ ಕೃತಿಗಳಲ್ಲಿ ಬಿಡಿಸಿಟ್ಟಿದ್ದಾರೆ.

ಸಾರಾ ಬರವಣಿಗೆಗೆ ತೊಡಗಿದ್ದು ತೀರಾ ತಡವಾಗಿ ಎನ್ನಬೇಕು. ಆದರೆ, ಅಷ್ಟರವರೆಗೆ ತಡೆಹಿಡಿದಿದ್ದ ಬರಯಬೇಕೆಂಬ ತುಡಿತಕ್ಕೆ ದೀರ್ಘಕಾಲದ ಒತ್ತಡ ಹಾಗೂ ಹಿನ್ನೆಲೆ ಇತ್ತು. ಮೂಲತಃ ಕೇರಳದ ಕಾಸರಗೋಡಿನವರಾದ ಸಾರಾ, ಹುಟ್ಟಿ ಬೆಳೆದಿದ್ದು ಅತ್ಯಂತ ಸುಶಿಕ್ಷಿತ ಪರಿಸರದಲ್ಲಿ. ಬುರ್ಖಾ ಕಡ್ಡಾಯವಿಲ್ಲದ ಕುಟುಂಬದಲ್ಲಿ. 'ಮೆಟ್ರಿಕ್ ಮುಗಿವವರೆಗೆ ಮಗಳಿಗೆ ಮದುವೆ ಇಲ್ಲ' ಎಂದು ಘೋಷಿಸಿದ ತಂದೆ ಹಾಗೂ ಅಣ್ಣಂದಿರ ಪ್ರೋತ್ಸಾಹದಿಂದ ಸಾರಾ, ಇತರೆ ಹೆಣ್ಣು ಮಕ್ಕಳಿಗಿಂತ ಹೆಚ್ಚಿನ 'ಓದು' ಪಡೆಯಲು ಸಾಧ್ಯವಾಯಿತು. ಆದರೆ ಗಂಡು ಮಕ್ಕಳಿಗೆ ಇಲ್ಲದೇ ಇದ್ದ ಹಲವು ನಿರ್ಬಂಧಗಳು ಇವರನ್ನು ಕಾಡಿದ್ದಿದೆ. ತಮ್ಮ ಓರಗೆಯ ಇತರೆ ಹೆಣ್ಣು ಮಕ್ಕಳ ದಾರುಣ ಸ್ಥಿತಿ ಇವರನ್ನು ಕಲಕಿವೆ.

ಇಂತಹ ಪರಿಸರದಲ್ಲಿ ಬೆಳೆದವರು ಮದುವೆಯಾಗಿ ಬಂದಿದ್ದು ತೀರಾ ಸಂಪ್ರದಾಯಸ್ಥ ಕುಟುಂಬಕ್ಕೆ. ಒಳಕೋಣೆಗಳಿಂದ ಹೊರ ಕೋಣೆಗೆ ಬರುವುದು, ಪತ್ರಿಕೆ ಓದುವುದು, ಭಾವಂದಿರೊಂದಿಗೆ ಮಾತನಾಡುವುದು, ಹೊರಗೆ ತಿರುಗಾಡುವುದೆಲ್ಲ ಹೆಣ್ಣು ಮಕ್ಕಳಿಗೆ ನಿಷೇಧಕ್ಕೊಳಗಾಗಿದ್ದ ಕುಟುಂಬಕ್ಕೆ.

ಇಂತಹ ವೈರುಧ್ಯದ ಬದುಕಿನಿಂದ ಬರೆಯಲು ಪ್ರಚೋದನೆ ಪಡೆದ ಸಾರಾ ಮೊದಲು ಬೆಳಕಿಗೆ ಬಂದಿದ್ದೇ ಓರ್ವ ಮುಸ್ಲಿಂ ಹೆಣ್ಣು ಮಗಳ ಹಕ್ಕಿನ ಪರವಾಗ ಬಹಿರಂಗವಾಗಿ ಮಾತನಾಡುವ ಮೂಲಕ. ಬಿಜಾಪುರದ ಮುಸ್ಲಿಂ ಹೆಣ್ಣು ಮಗಳೊಬ್ಬಳು ಸಿನಿಮಾ ನೋಡಿದ್ದರಿಂದಾಗಿ, ಸಾಮಾಜಿಕ ಬಹಿಷ್ಕಾರಕ್ಕೆ ಗುರಿಯಾದಾಗ, ಸಾರಾ ಈ ಬಹಿಷ್ಕಾರದ ವಿರುದ್ಧ ದನಿ ಎತ್ತಿ ಲಂಕೇಶ್ ಪತ್ರಿಕೆಯಲ್ಲಿ ಬರೆದರು. ಇದೇ ನಾಂದಿಯಾಗಿ, ಲಂಕೇಶರ ಒತ್ತಾಸೆಯಿಂದಾಗಿ ಒಂದೇ ವಾರದಲ್ಲಿ 'ಚಂದ್ರಗಿರಿಯ ತೀರದಲ್ಲಿ' ಮೂಡಿಬಂತು.

ಹೀಗೇ ಆರಂಭವಾದ ಸಾರಾ ಅವರ ಬರಹಗಳು ತಲಾಖ್ ಸಮಸ್ಯೆ, ಬಹುಪತ್ನಿತ್ವದ ಸಮಸ್ಯೆ, ವಿಚ್ಛೇದಿತ ದಂಪತಿಗಳು ಒಂದಾಗುವ ಮುನ್ನ ನಡೆಸುವ 'ಒಂದು ದಿನದ' ಮದುವೆ ಮುಂತಾದ ವಿಷಯಗಳನ್ನು ಕುರಿತು ಮಾತನಾಡುತ್ತವೆ.

ಹಾಗೆಂದು ಸಾರಾ ಕೇವಲ ಒಂದು ಸಮುದಾಯದ ಸಂವೇದನೆಗಳಿಗೆ ಮಾತ್ರ ಮಿಡಿದ ಲೇಖಕಿಯಲ್ಲ. ಸಾರಾ ಹೆಚ್ಚು ಆಪ್ತರಾಗುವುದು ಅವರ ರಾಜಕೀಯ ಅರಿವಿನಿಂದ, ದಿಟ್ಟ ಪ್ರಗತಿಪರ ನಿಲುವುಗಳಿಂದ.

"ನನಗೆ ಬೆಳಗಿನ ಹೊತ್ತು ಪತ್ರಿಕೆ ಓದದೆ ಕೆಲಸ ಆರಂಭಿಸುವುದು ಸಾಧ್ಯವೇ ಇಲ್ಲ" ಎನ್ನುವ ಸಾರಾ, ಪ್ರತಿನಿತ್ಯದ ರಾಜಕೀಯ, ಆರ್ಥಿಕ ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಾರೆ, ಮಾತ್ರವಲ್ಲ ಕೂಡಲೇ ಪ್ರತಿಕ್ರಿಯಿಸುತ್ತಾರೆ. ರಾಜಕೀಯದ ಕುರಿತಾದ ಮಹಿಳೆಯರಿಗಿರುವ ಅರಿವಿನ ಕೊರತೆಯ ಬಗ್ಗೆ ವಿಷಾದ ಪಡುವ ಸಾರಾ, **"ನಮ್ಮ ಲೇಖಕಿಯರು ರಾಜಕೀಯದ ಬಗ್ಗೆ ಇಷ್ಟೊಂದು ಮಡಿವಂತಿಕೆ ಇಟ್ಟುಕೊಳ್ಳದೇ ಇದ್ದಿದ್ದರೆ, ನಮ್ಮ ಪರಿಸ್ಥಿತಿ ಇನ್ನೂ ಉತ್ತಮವಾಗಿರುತ್ತಿತ್ತು"** ಎನ್ನುತ್ತಾರೆ.

ಬುರ್ಖಾದ ಬೇಗುದಿಯಿಂದ ಸ್ವತಃ ನರಳಿರುವ ಸಾರಾ, ಎಲ್ಲರ ವಿರೋಧದ ನಡುವೆಯೂ ತಮ್ಮ ಸೊಸೆಗೆ ಅದರಿಂದ ಮುಕ್ತಿ ನೀಡಿ ಮಾದರಿಯಾಗಿದ್ದಾರೆ.

ಇತ್ತೀಚಿನ ವರ್ಷಗಳಲ್ಲಿ ಹೆಚ್ಚುತ್ತಿರುವ ಮೂಲಭೂತವಾದ, ಕೋಮುವಾದವನ್ನು ತೀವ್ರವಾಗಿ ಖಂಡಿಸುವ ಸಾರಾ, ತಾವು ಬರವಣಿಗೆ ಆರಂಭಿಸಿದ ದಿನದಿಂದಲೂ ಧಾರ್ಮಿಕ ಮೂಲಭೂತವಾದಿಗಳನ್ನು ಎದುರಿಸುತ್ತಲೇ ಬಂದಿದ್ದಾರೆ. ಇವರ ದಿಟ್ಟವಾದ, ನೇರವಾದ ಮಾತುಗಳಿಂದ ಬೆಚ್ಚಿಬಿದ್ದ ಧಾರ್ಮಿಕ ಮೂಲಭೂತವಾದಿಗಳು ಇವರ ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ಹಲ್ಲೆ ಮಾಡಲು ಯತ್ನಿಸಿದರು. ಆ ಸಮುದಾಯದಿಂದ ಬಹಿಷ್ಕರಿಸುವ ಬೆದರಿಕೆ ಹಾಕಿದರು. ಆದರೆ ಇದಾವುದಕ್ಕೂ ಜಗ್ಗದೆ ಮುಂದೆ ನಡೆದ ಸಾರಾ ಅವರ ಬೆಂಬಲಕ್ಕೆ ಅವರ ಕುಟುಂಬ ಹಾಗೂ ನಾಡಿನ ಪ್ರಗತಿಪರರೆಲ್ಲರೂ ನಿಂತಿದ್ದಾರೆ.

ಸಾರಾ ಅವರಿಗೆ ಈ ಬಗ್ಗೆ ಕೃತಜ್ಞತೆ ಇದೆ "ನನ್ನಂತಹ ಲೇಖಕಿಗೆ ಪ್ರಶಸ್ತಿ ದೊರಕಬೇಕೆಂದರೆ ನನ್ನೊಂದಿಗೆ ನಿಂತ ಜನರ ವಿಶ್ವಾಸವೂ ಅದಕ್ಕೆ ಕಾರಣವಾಗಿದೆ" ಎಂದು ಸಾರಾ ಕೃತಜ್ಞತೆ ವ್ಯಕ್ತಪಡಿಸುತ್ತಾರೆ.

● ಕಡಲು
ಮಂಗಳೂರು

ಸಾರಾ ಅವರಿಗೆ ಸಂದಿರುವ ಪ್ರಶಸ್ತಿಗಳು

1. ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ
2. ಕರ್ನಾಟಕ ಸಾಹಿತ್ಯ ಅಕಾಡೆಮಿ ಪುಸ್ತಕ ಬಹುಮಾನ
3. ಮಲ್ಲಿಕಾ ದತ್ತಿ ನಿಧಿ ಪ್ರಶಸ್ತಿ - ಕನ್ನಡ ಸಾಹಿತ್ಯ ಪರಿಷತ್ತು
4. ಅನುಪಮಾ ಪುಸ್ತಕ ಪ್ರಶಸ್ತಿ - ಕರ್ನಾಟಕ ಲೇಖಕಿಯರ ಸಂಘ
5. ಸಾವಿತ್ರಮ್ಮ ದೇಜಗೌ ಪ್ರಶಸ್ತಿ
6. ಭಾಷಾಂತರಕ್ಕಾಗಿ ಸಾವಿತ್ರಮಮ್ಮ ದತ್ತಿ ನಿಧಿ ಪ್ರಶಸ್ತಿ.

ಸಾರಾ ಅವರ ಕೃತಿಗಳು

ಕಾದಂಬರಿಗಳು:
1. ಚಂದ್ರಗಿರಿಯ ತೀರದಲ್ಲಿ
2. ಸಹನಾ
3. ವಜ್ರಗಳು
4. ಕದನ ವಿರಾಮ
5. ಸುಳಿಯಲ್ಲಿ ಸಿಕ್ಕವರು
6. ಪ್ರವಾಹ - ಸುಳಿ
7. ತಳ ಒಡೆದ ದೋಣಿಯಲ್ಲಿ

ಕಥಾ ಸಂಕಲನಗಳು:
1. ಚಪ್ಪಲಿಗಳು
2. ಪಯಣ ಮತ್ತು ಇತರ ಕಥೆಗಳು
3. ಅರ್ಧ ರಾತ್ರಿಯಲ್ಲಿ ಹುಟ್ಟಿದ ಕೂಸು
4. ಪೆಡ್ಡಾ

ಭಾಷಾಂತರ
1. ಮನೋಮಿ
2. ನಾನಿನ್ನು ನಿದ್ರಿಸುವೆ
3. ಬಲೆ

ಲೇಖನಗಳ ಸಂಗ್ರಹ
1. ಲೇಖನ ಗುಚ್ಛ
2. ಅನಾವರಣ

ಪ್ರವಾಸ ಕಥನ :
1. ಐಷಾರಾಮದ ಆಳದಲ್ಲಿ



ಜನಸಂಸ್ಕೃತಿ ಉತ್ಸವ 2002

ಸಮುದಾಯಕ್ಕೀಗ 25 ವರುಷಗಳು. ಕರ್ನಾಟಕದಲ್ಲಿ ದೇಶದಲ್ಲಿ ರಂಗ ಚಳುವಳಿ ಮೂಲಕ ವಿಶಿಷ್ಟ ಸ್ಥಾನ ಪಡೆದಿರುವ ಸಮುದಾಯ ಈಗ 'ಜನಸಂಸ್ಕೃತಿ' ಉತ್ಸವದ ಮೂಲಕ ತನ್ನ ಹಳೆಯ ನೆನಪು, ಅನುಭವಗಳನ್ನು ಬಿಚ್ಚಿಡುತ್ತಾ, ಹೊಸ ಸವಾಲಿಗೆ ಸಜ್ಜಾಗುತ್ತಿದೆ

ಸಮುದಾಯ - ಬೆಳ್ಳಿ ಹಬ್ಬ ಸಂಭ್ರಮ

ಕನ್ನಡ ನಾಡಿನ ಹೆಸರಾಂತ ಸಾಮಾಜಿಕ ಸಾಂಸ್ಕೃತಿಕ ಸಂಸ್ಥೆ ಸಮುದಾಯಕ್ಕೆ ಬೆಳ್ಳಿಹಬ್ಬದ ಸಂಭ್ರಮ. ಸಾಂಸ್ಕೃತಿಕ ಲೋಕದಲ್ಲೊಂದು ಹೊಸ ಅಲೆಯೆಬ್ಬಿಸಿದ ಹೊಸತನಕ್ಕೆ ಹುಡುಕಾಡಿದ, ವೈಜ್ಞಾನಿಕ ದೃಷ್ಟಿಕೋನದಿಂದ ಸಮಾಜವನ್ನು ನೋಡುವ ಆಶಯದೊಂದಿಗೆ ಬೆಳೆದ ಸಂಸ್ಥೆ ಸಮುದಾಯ. ಅದು 70 ರ ದಶಕದ ಕಾಲ. ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಅಧಿಕಾರಸ್ತರದೇ ಕಾರುಬಾರು. ಅಂತಹ ಸಮಯದಲ್ಲಿ ಎಚ್ಚೆತ್ತ ಸಮಾನ ಮನಸ್ಕ ಸಾಹಿತಿಗಳ ಚಿಂತನೆಯ ಫಲವೇ ಸಮುದಾಯ. ಹಿರಿಯ ರಂಗಕರ್ಮಿ ಪ್ರಸನ್ನ, ಸಾಹಿತಿ ಕಿ.ರಂ.ನಾಗರಾಜ, ಕೆ.ವಿ.ನಾರಾಯಣ, ಡಿ.ಆರ್.ಶೂದ್ರ ಶ್ರೀನಿವಾಸ, ಎಲ್.ಕೃಷ್ಣಪ್ಪ ಮುಂತಾದವರ ಪರಿಶ್ರಮದ ಫಲವಾಗಿ ಇಂದು ಸಮುದಾಯ ಸಾಂಸ್ಕೃತಿಕ ಲೋಕದಲ್ಲೊಂದು ತನ್ನದೇ ಆದ ಛಾಪು ಮೂಡಿಸಿದೆ. ಆರಂಭದಲ್ಲಿ ಸಮುದಾಯ ಕೇವಲ ಒಂದು ನಾಟಕ ತಂಡವಾಗದೇ ನಾಡಿನ ಸಾಂಸ್ಕೃತಿಕ ಚಳುವಳಿಯಾಗಬೇಕೆಂಬ ಆಶಯ ಹೊಂದಿತ್ತು.

ಬದಲಾವಣೆಗಾಗಿ

ಬದಲಾವಣೆ ರಾಜಕೀಯ, ಸಾಮಾಜಿಕ ಹಾಗೂ ಸಾಂಸ್ಕೃತಿಕವಾಗಿ ಆಗಬೇಕು. ಸಾಂಸ್ಕೃತಿಕ ಚಳುವಳಿಯ ಮುಖ್ಯ ಕೆಲಸ ನೊಂದವರ, ಸಿಡಿದೆದ್ದವರ ನೋವಿನ ಕೂಗಾಗಿ, ಪ್ರತಿಭಟನೆಯ ಹಾಡಾಗಿ ಜನರನ್ನು ಬಡಿದೆಬ್ಬಿಸುವ ಕೆಲಸವೇ ಆಗಿದೆ. ಆ ಮೂಲಕ ಜನರಲ್ಲಿ ಕ್ರಾಂತಿಕಾರಿ ವೈಜ್ಞಾನಿಕ ದೃಷ್ಟಿಕೋನ, ಪ್ರಗತಿಪರ ಚಿಂತನಗೆಳನ್ನು ಬೆಳೆಸುವ ಗುರುತರವಾದ ಜವಾಬ್ದಾರಿಯಿದೆ. ಈ ನಿಟ್ಟಿನಲ್ಲಿ ಸಮುದಾಯ ರಂಗಭೂಮಿ ಚಟುವಟಿಕೆಗಳಿಗೆ ಬಂದು ಹೊಸ ತಿರುವನ್ನೇ ನೀಡಿದೆ. 25 ವರ್ಷಗಳ ಸುದೀರ್ಘ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ, ಜನರನ್ನು ಭ್ರಷ್ಟತೆಯ ವಿರುದ್ಧ ಸಮಾಜದ ಅಮಾನವೀಯ ಮೌಲ್ಯಗಳ ವಿರುದ್ಧ ಧನಿಯೆತ್ತುವ ಪ್ರೇರಕ ಶಕ್ತಿಯಾಗಿ ಸಮುದಾಯ ಕೆಲಸ ಮಾಡಿದೆ. ಬೀದಿ ನಾಟಕಗಳ ಮೂಲಕ ಹೊಸ ಆಂದೋಲನ ಹುಟ್ಟುಹಾಕಿದೆ.

ಕಲೆಗಾಗಿ ಕಲೆಯಲ್ಲ - ಜನರಿಗಾಗಿ

ಸಮುದಾಯದ ಮೊದಲ ನಾಟಕ 'ಹುತ್ತ ಬಡಿದರೆ' ಯ ಮೂಲಕ ತನ್ನ ಆಶಯ ಹಾಗೂ ಸಾಮಾಜಿಕ ಬದ್ಧತೆಯನ್ನು ಪ್ರದರ್ಶಿಸಿದ ಐತಿಹಾಸಿಕ ಪ್ರಯೋಗ. ನಂತರದ ಹಲವು ಪ್ರಯೋಗಗಳು

PRBDECR 319-79/79 AIKYARANGA WEEKLY
Reg.No.17015/64 KRNM/BGS-405 MAG(2)